I

# <u>ಕರ್ನಾಟಕ ವಿಧಾನ ಪರಿಷತ್ತು</u>

ದಿನಾಂಕ: 29ನೇ ಜೂನ್, 2015

ಸೋಮವಾರ

## <u>ವಿಷಯಾನುಕ್ರಮಾಣಿಕೆ</u>


**1. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಅರ್ಜಿ 2–35**

**ವಿಷಯ: ರಾಜ್ಯದ ಕಬ್ಬು ಬೆಳೆಗಾರರಿಗೆ ಬೆಲೆ ನೀಡುವಲ್ಲಿ ವಿಳಂಬವಾಗಿರುವ ಬಗ್ಗೆ.**

– – – – –

– ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)

– ಶ್ರೀ ಬಸವರಾಜು ಹೊರಟ್ಟಿ

– ಶ್ರೀ ರಾಮಚಂದ್ರ ಗೌಡ

– ಶ್ರೀ. ಸಿ.ಹೆಚ್.ವಿಜಯಶಕರ್

**(ನಿಯಮ 68 ರಡಿಯಲ್ಲಿ ಚರ್ಚಿಸಲು ಅನುಮತಿಸಲಾಯಿತು)**

2. ಪ್ರಕಟಣೆ 35–37

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

4. ಕಾಯ್ದರ್ಶಿಯವರ ವರದಿ

5. ಸಭೆಯ ಮುಂದಿಡಲಾದ ಕಾಗದ ಪತ್ರಗಳು

6. ನಿಯಮ 68ರಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಮುಂದುವರೆದ ಚರ್ಚೆ

**ವಿಷಯ: ರಾಜ್ಯದ ಕಬ್ಬು ಬೆಳೆಗಾರರಿಗೆ ಬೆಂಬಲ ಬೆಲೆ ನೀಡುವಲ್ಲಿ ವಿಳಂಬವಾಗಿರುವ ಬಗ್ಗೆ.**

– – – – –

– ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು) 38–57

– ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು)

– ಶ್ರೀ ಬಿ.ಜೆ.ಪುಟ್ಟಸ್ವಾಮಿ

– ಶ್ರೀ. ಪಿ.ವಿ.ಕೃಷ್ಣಭಟ್ಟ

– ಶ್ರೀ .ಈ.ಕಷ್ಣಪ್ಪ

– ಶ್ರೀ. ಮರಿತಿಬ್ಬೇಗೌಡ

**ಕರ್ನಾಟಕ ವಿಧಾನ ಪರಿಷತ್ತು**

*ಸೋಮವಾರ, 29ನೇ ಜೂನ್ 2015*

ಸದನವು ಬೆಳಗಾವಿಯಲ್ಲಿರುವ ಸುವರ್ಣ ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಮಧ್ಯಾಹ್ನ 12 ಗಂಟೆ 18 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

– – –

ಸಭೆಯು ವಂದೇ ಮಾತರಂ ನಿಂದ ಪ್ರಾರಂಭವಾಯಿತು

**ಸಭಾಪತಿಯವರು:–** ಈಗ ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭ ಮಾಡೋಣ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶವನ್ನು ಕೋರಿ ನಾವು ಈಗಾಗಲೇ ತಮಗೆ ಒಂದು ವಿಷಯವನ್ನು ಕಳುಹಿಸಿಕೊಟ್ಟಿದ್ದೇವೆ. ಏಕೆಂದರೆ ಬೆಳಗಾವಿ ಅಧಿವೇಶನಕ್ಕೆ ಬರುವಂತಹ ಸಂದರ್ಭದಲ್ಲಿ ...

**ಸಭಾಪತಿಯವರು:–** ಕೆಲವು ಗೌರವಾನ್ವಿತ ಸದಸ್ಯರು ನಿಲುವಳಿ ಸೂಚನೆಯ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಕೋರಿ ಯಾವ ಒಂದು ನೋಟೀಸ್‌ಗೆ ಸಹಿ ಮಾಡಿಕಳುಹಿಸಿ ಕೊಟ್ಟಿರುತ್ತೀರಿ, ಆ ನಿಲುವಳಿ ಸೂಚನೆಗೆ ನಾನು ಅನುಮತಿ ಕೊಟ್ಟಿಲ್ಲ, ಆದರೆ ಈ ವಿಷಯದ ಮೇಲಿನ ಪೂರ್ವಭಾವಿ ಚರ್ಚೆಯನ್ನು ತಾವು ಸುಮಾರು ಐದರಿಂದ ಎಂಟು ನಿಮಿಷಗಳಲ್ಲಿ ಮುಗಿಸಿದರೆ, ಅನಂತರ ನಾನು ಆ ಬಗ್ಗೆ ಸರ್ಕಾರದ ಅಭಿಪ್ರಾಯವನ್ನು ಪಡೆದು ಮುನ್ನಡೆಯಲು ಸುಲಭವಾಗುತ್ತದೆ.

1. **ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಚರ್ಚೆ**

**ವಿಷಯ:– "ರಾಜ್ಯದ ಕಬ್ಬು ಬೆಳೆಗಾರರಿಗೆ ಬೆಂಬಲ ಬೆಲೆ ನೀಡುವಲ್ಲಿ ವಿಳಂಬವಾಗಿರುವ ಬಗ್ಗೆ.**

– – – –

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾವು ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಿರುವ ವಿಷಯವೇನಿದೆ, ಇದು ಈಗಾಗಲೇ ಸರ್ಕಾರಕ್ಕೆ ಗೊತ್ತಿರುವಂತಹ ಅಂಶವೇ ಆಗಿರುವುದರಿಂದ ಪೂರ್ವಭಾವಿ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಲು ನನಗೆ ಹೆಚ್ಚಿನ ಸಮಯವೇನೂ ಬೇಕಾಗುವುದಿಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಸರಣಿಯೋಪಾದಿಯಲ್ಲಿ ವರದಿಯಾಗುತ್ತಿವೆ. ವಿಶೇಷವಾಗಿ ಬೆಳಗಾವಿ ಅಧಿವೇಶನಕ್ಕೆ ಬರುವಂತಹ ಸಂದರ್ಭದಲ್ಲಿಯಾವ ಅಂಶಗಳನ್ನು ಕಳೆದ ವಿಧಾನ ಮಂಡಲದಅಧಿವೇಶನದ ಸಂದರ್ಭದಲ್ಲಿ ನಾವು ಚರ್ಚೆ ಮಾಡಿದ್ದೇವೆ, ಅದಕ್ಕೆ ಸರ್ಕಾರ ನೀಡಿರುವಂತಹ ಭರವಸೆ ಈಡೇರುತ್ತದೆ ಎನ್ನುವಂತಹ ವಿಶ್ವಾಸದಿಂದ ಇನ್ನುಳಿದ ಅಂಶಗಳು, ಜನರ ಇನ್ನಿತರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವಂಥದ್ದು ವಿಧಾನಮಂಡಲ ಅಧಿವೇಶನದ ಸ್ವಾಭಾವಿಕ ಪದ್ಧತಿಯಾಗಬೇಕು. ಆದರೆ ಕಳೆದ ಬೆಳಗಾವಿ ಅಧಿವೇಶನ ಮತ್ತು ಅದರ ಹಿಂದಿನ ಬೆಳಗಾವಿ ಅಧಿವೇಶನ ಅಂದರೆ, ಸುಮಾರು 2013ನೇ ಇಸವಿಯಿಂದಲೂ ಸಹ ಕಬ್ಬು ಬೆಳೆಗಾರರ ಬಾಕಿ ಹಣವನ್ನು ಕೊಡಿಸಲಾಗುತ್ತದೆ ಎನ್ನುವಂತಹ ಮಾತನ್ನು ಸರ್ಕಾರ ಹೇಳುತ್ತಲೇ ಬಂದಿದೆಯೇ ಹೊರತು ಸರ್ಕಾರದ ಆ ಭರವಸೆ ಈಡೇರಿರುವುದಿಲ್ಲ.

ದಿನಾಂಕ:29.01.2013ರ ನಡವಳಿಕೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು 'ಕಬ್ಬಿನ ಬೆಲೆಯು ಒಟ್ಟು 2650 ರೂಪಾಯಿಗಳಾಗುತ್ತವೆ. ಇದಕ್ಕೆ ನಾವು ಬದ್ಧರಾಗಿದ್ದೇವೆ. ಒಂದು ವೇಳೆ ಇದಕ್ಕೆ ಅಂದರೆ, 2400 ರೂಪಾಯಿಗಳನ್ನು ಕೊಡುವಲ್ಲಿ ಅವರೇನಾದರೂ ತಪ್ಪಿದರೆ ಕಾನೂನಿನಲ್ಲಿ ಏನು ಅವಕಾಶಗಳಿವೆ, ಆ ಕಾನೂನಿನ ರೀತ್ಯಾ ನಾವು ಕಟ್ಟುನಿಟ್ಟಾಗಿ ಕ್ರಮವನ್ನು ಜರುಗಿಸುತ್ತೇವೆ. ಇದಕ್ಕಿಂತ ಸರ್ಕಾರ ಪಾರದರ್ಶಕವಾದ ಉತ್ತರವನ್ನು ನಿಮ್ಮ ಮುಂದೆ ಇಡಲು ಸಾಧ್ಯವಿಲ್ಲ' ಎನ್ನುವಂತಹ ಮಾತನ್ನು ಬಹಳ ಸ್ಪಷ್ಟವಾಗಿ ತಿಳಿಸಿದ್ದಾರೆ. ನಾನು ನಿಜಕ್ಕೂಸಹ ಆ ಹೇಳಿಕೆಗಾಗಿ ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ನಾವು ಈಗಾಗಲೇ ದಿನಾಂಕ:29.06.2015ರಲ್ಲಿದ್ದು, ಸರ್ಕಾರ ಈ ಹೇಳಿಕೆಯನ್ನು ನೀಡಿ ಇಲ್ಲಿಗೆ ಸುಮಾರು ಎರಡೂವರೆ ವರ್ಷಗಳಾಗಿವೆ. ಆದರೆ ಈ ಎರಡೂವರೆ ವರ್ಷಗಳಲ್ಲಿ ಸರ್ಕಾರದಿಂದ ಆ ಕೆಲಸ ಆಗಿಲ್ಲ.

ಸರ್ಕಾರ ಈಗ ಆ ಕ್ರಮವನ್ನು ಜರುಗಿಸುತ್ತಿರುವುದರಿಂದ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಹೇಳಿಕೆಯಲ್ಲಿ 'ಎರಡು ವರ್ಷಗಳ ನಂತರಜರುಗಿಸುತ್ತೇವೆ' ಎಂಬುದನ್ನು ಸೇರಿಸಿ ಹೇಳಿದ್ದರೆ ಬಹುಶಃ ಸೂಕ್ತವಾಗಿರುತ್ತಿತ್ತೇನೋ ಎಂಬುದು ನನ್ನ ಅನಿಸಿಕೆಯಾಗಿದೆ. ಆದರೂ ನಾನು ನಿಜಕ್ಕೂ ಈ ಸರ್ಕಾರಕ್ಕೆ ಸ್ವಲ್ಪ ಮಟ್ಟಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮಾನ್ಯ ಮುಖ್ಯಮಂತ್ರಿಗಳು ಕಾನೂನು ಬದ್ಧವಾಗಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಬಹಳ ಸ್ಪಷ್ಟವಾದ ಹೇಳಿಕೆಯನ್ನು ಕೊಟ್ಟಿದ್ದರೂ ಸಹ ಸಚಿವ ಸಂಪುಟದಲ್ಲಿರುವಂತಹ ಸಚಿವರೇ ದಿನಾಂಕ:27/06/2015ರಲ್ಲಿ ಅಂದರೆ, ಮೊನ್ನೆಯ ದಿವಸ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರಾದ ಮಾನ್ಯ ಶಾಮನೂರು ಶಿವಶಂಕರಪ್ಪನವರು ನೀಡಿರುವಂತಹ ಒಂದು ಪತ್ರಿಕಾ ಹೇಳಿಕೆ ಈ ರೀತಿಇದೆ.

"ಕಬ್ಬು ಬೆಳೆಗಾರರಿಗೆ ಬಾಕಿ ಮೊತ್ತವನ್ನು ಪಾವತಿಸುವ ಸಲುವಾಗಿ ಕಾರ್ಖಾನೆಗಳಲ್ಲಿರುವ ಸಕ್ಕರೆ ದಾಸ್ತಾನನ್ನು ಜಪ್ತಿ ಮಾಡಲು ನಿರ್ಧರಿಸಿರುವ ಸರ್ಕಾರದ ಕ್ರಮವನ್ನು ತೋಟಗಾರಿಕೆ ಮತ್ತು ಎಪಿಎಂಸಿ ಸಚಿವರಾದ ಶ್ರೀ ಶಾಮನೂರು ಶಿವಶಂಕರಪ್ಪ ವಿರೋಧಿಸಿದ್ದಾರೆ" ಎನ್ನುವಂತಹ ವಿಚಾರ ಪತ್ರಿಕೆಯಲ್ಲಿ ವರದಿಯಾಗಿದೆ. ಮಾನ್ಯ ಮುಖ್ಯಮಂತ್ರಿಯವರ ಆದೇಶವನ್ನು ಸಚಿವ ಸಂಪುಟದಲ್ಲಿರುವಂತಹ ಒಬ್ಬ ವ್ಯಕ್ತಿ ವಿರೋಧ ಮಾಡುತ್ತಾರೆ ಎಂದರೆ, ಸಚಿವ ಸಂಪುಟದ ತೀರ್ಮಾನಕ್ಕೆ ಏನಾದರೂ ಪಾವಿತ್ರ್ಯತೆ ಉಳಿಯುತ್ತದೆಯೇ? ಮುಖ್ಯಮಂತ್ರಿಗಳ ಸ್ಥಾನಕ್ಕೆ ಏನಾದರೂ ಬೆಲೆ ಬರುತ್ತದೆಯೇ? ಅವರು ತಮ್ಮ ಸಚಿವ ಸ್ಥಾನಕ್ಕೆ ರಾಜಿನಾಮೆ ಕೊಟ್ಟ ನಂತರ ಸಕ್ಕರೆ ಕಾರ್ಖಾನೆಗಳ ಮಾಲೀಕರಾಗಿ, ಸಕ್ಕರೆ ಕಾರ್ಖಾನೆಗಳ ಮಾಲೀಕರ ಪರವಾಗಿ ಹೋರಾಟಮಾಡಿದ್ದರೆ ಅದಕ್ಕೆ ನನ್ನ ಅಭ್ಯಂತರವಿಲ್ಲ. ಅದನ್ನು ಬಿಟ್ಟು ಅವರು ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಗೆ ನಾನು ವಿರೋಧ ಮಾಡುತ್ತೇನೆ ಎನ್ನುವಂತಹ ಹೇಳಿಕೆಯನ್ನು ನೀಡುತ್ತಾ ಹೋದರೆ ಜನರು ಸರ್ಕಾರವನ್ನು ಹೇಗೆ ನಂಬಬೇಕು?

ಇವತ್ತು ಬೆಳಗಾವಿಯಲ್ಲಿ ಸದನ ಸಮಾವೇಶಗೊಂಡಿರುವುದು ರಾಜಕಾರಣ ಮಾಡುವುದಕ್ಕಲ್ಲ, ಈ ಸಂದರ್ಭದಲ್ಲಿ ಸರ್ಕಾರ ರೈತರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಬೇಕಾಗಿದೆ. ದಿನ ಬೆಳಗಾದರೆ ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗುತ್ತಿವೆ. ಪತ್ರಿಕೆಯವರು ಸಹ ಪ್ರಾರಂಭದಲ್ಲಿ ಬ್ಯಾನರ್ ಹೆಡ್‌ಲೈನ್ ಬರೆದರು. ಕ್ರಮೇಣ ಇದು ಹೆಚ್ಚಾಗುತ್ತಿದ್ದು, ಇಂದು ಶಿವಮೊಗ್ಗ ಜಿಲ್ಲೆಯ ಕುಂಸಿಯಲ್ಲಿ ಇಬ್ಬರು ರೈತರು ಆತ್ಮಹತ್ಯೆ ಪ್ರಯತ್ನ ನಡೆಸಿದ್ದಾರೆ. ಸರ್ಕಾರ ರೈತರಲ್ಲಿ ಆತ್ಮವಿಶ್ವಾಸವನ್ನು ತುಂಬುವಂತಹ ಉದ್ದೇಶದಿಂದ ಈಗಾಗಲೇ ಸಕ್ಕರೆ ಕಾರ್ಖಾನೆಗಳಲ್ಲಿ ದಾಸ್ತಾನಿದ್ದ ಸಕ್ಕರೆಯನ್ನು ಜಪ್ತಿ ಮಾಡುವಂತಹ ಕೆಲಸವನ್ನು ಸರ್ಕಾರ ಪ್ರಾರಂಭಮಾಡಿದ್ದು, ಆ ಪ್ರಕಾರ 28 ಸಕ್ಕರೆ ಕಾರ್ಖಾನೆಗಳಿಂದ ಸುಮಾರು 7,80,000 ಮೆಟ್ರಿಕ್‌ಟನ್ ಸಕ್ಕರೆಯನ್ನು ಏನು ಜಪ್ತಿ ಮಾಡಿದೆ, ಸರ್ಕಾರದ ಈ ಕ್ರಮವನ್ನು ನಾನು ಸ್ವಾಗತಿಸುತ್ತೇನೆ. ಹೀಗಾಗಿ ಸರ್ಕಾರಈ ವಿಚಾರದಲ್ಲಿ ಯಾವುದೇ ಪ್ರಯತ್ನಗಳನ್ನು ನಡೆಸದೆ ಸುಮ್ಮನೆ ಕುಳಿತಿದೆ ಎಂದೇನೂ ನಾನು ಹೇಳುವುದಿಲ್ಲ. ಈ ಹಿಂದೆ ಪ್ರತಿಕೆ.ಜಿ.ಗೆ ಸುಮಾರು ರೂ. 31 ರಿಂದ 32 ರಷ್ಟಿದ್ದ ಸಕ್ಕರೆಯ ಬೆಲೆ ಕುಸಿತಗೊಂಡು ಪ್ರಸ್ತುತರೂ. 19 ರಿಂದ 20 ರೂಪಾಯಿಗಳಷ್ಟಿರಬಹುದು. ಆದರೂ ಸರ್ಕಾರ ಜಪ್ತಿ ಮಾಡಿರುವ ಸಕ್ಕರೆಯನ್ನು ಸರಾಸರಿ ಪ್ರತಿಕೆ.ಜಿ.ಗೆ ರೂ.20 ರಂತೆ ಬೆಲೆ ಕಟ್ಟಿ ಹರಾಜು ಮಾಡಿದರೂ ಸಹ ರೂ.1,575 ಕೋಟಿಗಳಷ್ಟು ಹಣ ಸಂಗ್ರಹವಾಗಲಿದ್ದು, ಇದುಸಹ ನಿಮ್ಮ ಇಲಾಖೆಯಿಂದ ತೆಗೆದುಕೊಂಡಿರುವಂತಹ ಒಂದು ವರದಿಯೇ ಆಗಿದೆ.

ಬಾಗಲಕೋಟೆಯಲ್ಲಿ 8 ಸಕ್ಕರೆ ಕಾರ್ಖಾನೆಗಳು, ವಿಜಯಪುರದಲ್ಲಿ 6 ಸಕ್ಕರೆ ಕಾರ್ಖಾನೆಗಳು, ಬೆಳಗಾವಿಯಲ್ಲಿ 14 ಸಕ್ಕರೆ ಕಾರ್ಖಾನೆಗಳು ಈ ರೀತಿಒಟ್ಟು 60 ಸಕ್ಕರೆ ಕಾರ್ಖಾನೆಗಳಲ್ಲಿ ದಾಸ್ತಾನಿದ್ದ

ಸಕ್ಕರೆಯನ್ನು ಜಪ್ತಿ ಮಾಡಿದ್ದು, ಇನ್ನುಳಿದ ಕಾರ್ಖಾನೆಗಳಿಗೆ ನೋಟೀಸ್ ಕೊಟ್ಟಿದ್ದೀರಿ. ಸರ್ಕಾರದ ಮುಖ್ಯಮಂತ್ರಿಗಳ ಹೇಳಿಕೆಯಿಂದಷ್ಟೇ ರೈತರಿಗೆ ವಿಶ್ವಾಸ ಮೂಡುವುದಿಲ್ಲ, ಏಕೆಂದರೆ ನಾವು ರೈತರಿಗೆ ಅನ್ಯಾಯ ಮಾಡುವುದಿಲ್ಲ, ರೈತರಿಗೆ ಅನುಕೂಲ ಮಾಡಿಯೇ ಮಾಡುತ್ತೇವೆ, ನಾವು ರೈತರಿಗೆ ದ್ರೋಹ ಮಾಡುವುದಿಲ್ಲ, ಯಾವುದೇ ಪ್ರಭಾವಿ ವ್ಯಕ್ತಿಗಳಿಗೆ ನಾವು ಬಗ್ಗುವುದಿಲ್ಲ ಎಂಬುದಾಗಿ ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಬಹಳಷ್ಟು ಬಾರಿ ಏನು ಹೇಳಿಕೆ ಕೊಟ್ಟಿದ್ದಾರೆ, ಆಹೇಳಿಕೆಗಳನ್ನೆಲ್ಲಾ ಕೇಳಿ ಕೇಳಿಕೊನೆಗೆ ಇದೆಲ್ಲಾ ಯಾವುದೂ ಆಗುವುದಿಲ್ಲ ಎಂದುರೈತರು ಬೇಸತ್ತು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಹಾಗಾದರೆ ರೈತರಲ್ಲಿ ವಿಶ್ವಾಸ ಮೂಡಿಸಲು ನಾವು ಏನು ಮಾಡಬೇಕು? ನಾನು ಪೂರ್ಣ ವಿವರಗಳಿಗೆ ಹೋಗುವುದಿಲ್ಲ, ಆದರೆ ಸರ್ಕಾರ ಈಗಾಗಲೇ ಜಪ್ತಿ ಮಾಡಿದಂತಹ ಸಕ್ಕರೆಯ ಒಟ್ಟು ಬೆಲೆ ಸುಮಾರು 1,575 ಕೋಟಿ ರೂಪಾಯಿಗಳಾಗಿದ್ದು, ಈ ವಿಚಾರವನ್ನು ಸರ್ಕಾರ ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ.

ರೈತರಿಗೆ ಕಬ್ಬಿನ ಬಾಕಿ ಹಣವನ್ನು ಕೊಡುತ್ತೇವೆ ಎಂದು ಸಕ್ಕರೆ ಕಾರ್ಖಾನೆಯವರು ಒಪ್ಪಿಕೊಂಡಿದ್ದು, ನಂತರ ಮಾನ್ಯ ಸಕ್ಕರೆ ಸಚಿವರು ಸಕ್ಕರೆ ಕಾರ್ಖಾನೆಗಳ ಮಾಲೀಕರ ಜೊತೆಗೆ ಒಂದು ಸಭೆ ನಡೆಸಿದಂತಹ ಸಂದರ್ಭದಲ್ಲಿ ಅವರು ಅಷ್ಟನ್ನು ಕೊಡುವುದಕ್ಕಾಗುವುದಿಲ್ಲ ಎಂದರು, ಸರ್ಕಾರ ಇಷ್ಟು ಹಣವನ್ನು ನೀಡಲೇಬೇಕೆಂದು ನಿಗದಿಪಡಿಸಿದಮೇಲೆ ಅದನ್ನು ಪ್ರಶ್ನಿಸಿ ಸಕ್ಕರೆ ಕಾರ್ಖಾನೆಯವರು ನ್ಯಾಯಾಲಯದ ಮೊರೆ ಹೋದರು. ಆ ಬಗ್ಗೆ ನ್ಯಾಯಾಲಯಕೊಟ್ಟಂತಹ ತೀರ್ಮಾನವೇನೆಂಬುದು ತಮಗೆಗೊತ್ತಿದೆ. ಮಾನ್ಯ ಸಭಾನಾಯಕರು ಸಹ ಸಕ್ಕರೆಕಾರ್ಖಾನೆಯ ಮಾಲೀಕರಾಗಿದ್ದಾರೆ ಎನ್ನುವಂತಹ ವಿಚಾರ ಪತ್ರಿಕೆಗಳಲ್ಲಿ ಬಂದಿದೆ, ಅವರು ‘ಇಲ್ಲ, ನಮ್ಮಯಾವುದೇ ಸಕ್ಕರೆ ಕಾರ್ಖಾನೆ ಇಲ್ಲ ’ಎನ್ನುವಂತಹ ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆಅವರು ಸಕ್ಕರೆ ಕಾರ್ಖಾನೆಯ ಮಾಲೀಕರು ಹೌದು, ಅಲ್ಲಎನ್ನುವುದು ಈಗ ನಮ್ಮ ಮುಂದಿರುವಂತಹ ಪ್ರಶ್ನೆ ಯಲ್ಲ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಬೀಳಗಿ ಸಕ್ಕರೆಕಾರ್ಖಾನೆಯಒಡೆತನವನ್ನು ಮಾನ್ಯಜಿಲ್ಲಾಉಸ್ತುವಾರಿ ಸಚಿವರು ವಹಿಸಿದ್ದಾರೆ ಎನ್ನುವಂತಹ ವಿಚಾರ ಪತ್ರಿಕೆಗಳಲ್ಲಿ ವರದಿಯಾದಕಾರಣ ಆ ಬಗ್ಗೆ ನಾನು ಒಂದು ಹೇಳಿಕೆ ಕೊಡುವಂತಹ ಪ್ರಸಂಗ ಬಂತು.

**(12.30ಗಂಟೆ)**

ನಾನು ಸಕ್ಕರೆ ಕಾರ್ಖಾನೆಯ ಸಂಸ್ಥಾಪಕ ಹಾಗೂ ಅಧ್ಯಕ್ಷ. ನಂತರ ನಾನು ಮಂತ್ರಿ ಆಗುವುದಕ್ಕಿಂತ ಪೂರ್ವದಲ್ಲಿಯೇ ನನ್ನ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದೇನೆ. ಅಲ್ಲದೆ ನನ್ನ ಕುಟುಂಬದಲ್ಲಿ ನನ್ನ ಹೆಂಡತಿ ಹಾಗೂ ನನ್ನ ಮಗಳು ಸಹ ಸದಸ್ಯರಿದ್ದರು, ಆದರೆ ಈಗ ನಮ್ಮ ಕುಟುಂಬದಯಾವ ಸದಸ್ಯರು ಆಡಳಿತ ಮಂಡಳಿಯಲ್ಲಿ ಇಲ್ಲ. ಇದನ್ನು ನಾನು ಬಹಳ ನಿಖರವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಈ ಉತ್ತರವನ್ನು ತಾವು ಸ್ವಾಗತ ಮಾಡುತ್ತೀರೆಂದು ಭಾವಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ನಾನು ನಿಮ್ಮ ಮೇಲೆ ಆಪಾದನೆ ಮಾಡುತ್ತಲೇ ಇಲ್ಲ, ನಾನು ಹೇಳುತ್ತಿರುವುದೇನೆಂದರೆ, ಸಕ್ಕರೆ ಕಾರ್ಖಾನೆಯ ಮಾಲೀಕರಾಗಿಯೇ ರೈತರಿಗೆ ಸಹಾಯ ಮಾಡಬೇಕೆಂದು ನಾನು ಕೇಳುತ್ತಿಲ್ಲ. ತಾವು ಸಚಿವ ಸಂಪುಟದ ಸದಸ್ಯರಾಗಿದ್ದೀರಿ, ಸಕ್ಕರೆ ಕಾರ್ಖಾನೆಯ ಮಾಲೀಕರು ರೈತರಿಗೆ ಎಷ್ಟರಮಟ್ಟಿಗೆ ದ್ರೋಹ ಮಾಡುತ್ತಾರೆಂದು ತಮಗೆ ಅನುಭವದಿಂದಗೊತ್ತಿದೆ. ರೈತರಿಗೆ ಸಕ್ಕರೆ ಕಾರ್ಖಾನೆಯ ಮಾಲೀಕರು ಯಾವರೀತಿ ಮೋಸ ಮಾಡುತ್ತಿದ್ದಾರೆಂದು ಗೊತ್ತಿದ್ದ ಕಾರಣ ಅವರು ಕೋರ್ಟಿಗೆ ಹೋದರು. ಕೋರ್ಟು ಸ್ಪಷ್ಟವಾಗಿ ಸರ್ಕಾರ ಏನು ಹಣವನ್ನು ನಿಗಧಿ ಮಾಡಿದೆ, ಆ ಹಣವನ್ನು

ಕೊಡಿ ಎಂದು ಹೇಳಿತು. ಈ ರೀತಿ ಹೇಳಿದ ಮೇಲೆಯೂ ಸಹ ವರ್ಷಾನುಗಟ್ಟಳೆ ಆದರೂ ಸಹ ಮಾಲೀಕರಿಂದ ಹಣವಸೂಲಿ ಮಾಡಿ ರೈತರಿಗೆ ಕೊಡಲಿಲ್ಲವೆಂದರೆ, ನೀವು ಒಂದು ಕಡೆಕೋರ್ಟಿಗೂ ಬೆಲೆ ಕೊಡುವುದಿಲ್ಲ, ನಿಮ್ಮ ಸಚಿವರು ಮಾನ್ಯ ಮುಖ್ಯಮಂತ್ರಿಗಳಿಗೂ ಬೆಲೆ ಕೊಡುವುದಿಲ್ಲ, ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ರೈತರಿಗೆ ಕೊಟ್ಟಂತಹ ಆಶ್ವಾಸನೆಗೂ ಕೂಡ ಬೆಲೆ ಇಲ್ಲ. ಹೊರಗಡೆ ಮಾನ್ಯ ಸಚಿವರು ರೈತರಿಗೆ ಖಂಡಿತವಾಗಿ ಹಣಕೊಡುತ್ತೇವೆ, ಯಾವುದೇ ಪ್ರಭಾವಿ ವ್ಯಕ್ತಿಗಳಿಗೂ ಬಗ್ಗುವುದಿಲ್ಲವೆಂದು ಆಶ್ವಾಸನೆ ಕೊಡುತ್ತಾರೆ, ಆದರೆಇದು ಕೇವಲ ಹೇಳಿಕೆಯೇ ಆಗಿದೆಯೇ ಹೊರತು ಕಾರ್ಯರೂಪಕ್ಕೆ ಬಂದಿಲ್ಲ, ಆದುದರಿಂದ ನಾನು ಹೇಳುತ್ತಿರುವುದೇನೆಂದರೆ, ಇವತ್ತುನೀವು ರೈತರಿಗೆ ಆತ್ಮವಿಶ್ವಾಸ ತುಂಬುವುದಕ್ಕೆ ಒಂದುದಾರಿ ಇದೆ. ಏನೆಂದರೆ, ಈಗೇನು ಸರ್ಕಾರ ಸಕ್ಕರೆಯನ್ನು ಸೀಜ್ ಮಾಡಿ ತೆಗೆದುಕೊಂಡಿದೆ, ಆ ಸಕ್ಕರೆಯನ್ನು ಹಾಗೆಯೇ ಇಟ್ಟುಕೊಂಡು ಏಕೆ ಕುಳಿತುಕೊಳ್ಳುತ್ತೀರಿ? ಅದನ್ನು ಹರಾಜು ಹಾಕಿ, ಅದರಿಂದ ಬಂದಂತಹ ಹಣವನ್ನು ಕಬ್ಬು ಬೆಳೆಗಾರರಿಗೆ ಕೊಡಬೇಕು. ಕೊಡುತ್ತೀರಿತಾನೆ? ಈಗ ಎಲ್ಲಾ ಮಾನ್ಯ ಸಚಿವರು ನಮ್ಮ ಸರ್ಕಾರದ ಖಜಾನೆ ಖಾಲಿ ಇಲ್ಲ, ನಮ್ಮ ಖಜಾನೆ ಭರ್ತಿ ಇದೆ, ಎಂದು ತುಂಬಾ ಸ್ಪಷ್ಟವಾಗಿಇದ್ದಾರೆ. ಆದರೆ ರೈತರು ಸಂಕಷ್ಟದಲ್ಲಿ ಸಾಯುತ್ತಿರುವಂತಹ ಸಂದರ್ಭದಲ್ಲಿ ರೈತರಿಗೆ ನೆರವು ಬರದೆ ಇರುವಂತಹ ಖಜಾನೆ ರೈತರನ್ನು ಬದುಕಿಸುವುದಕ್ಕೆ ಆಗುವುದಿಲ್ಲ ಎನ್ನುವುದಾದರೆ, ಆ ಖಜಾನೆಯಾರಿಗೆ ಬೇಕು? ರೈತರ ಆತ್ಮಹತ್ಯೆಯನ್ನು ನೋಡುತ್ತಿದ್ದರೂ ಖಜಾನೆ ತುಂಬಿರಬೇಕೆ? ಆದ ಕಾರಣನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ನಾನು ಖಂಡಿತವಾಗಿಯೂ ಇದನ್ನು ಎಳೆದುಕೊಂಡು ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಇಲ್ಲಿ ಸ್ವಪ್ರತಿಷ್ಠೆ ನಮಗೂ ಬೇಡ, ನಿಮಗೂ ಬೇಡ. ನೀವು ವಿರೋಧ ಪಕ್ಷದಲ್ಲಿದ್ದಂತಹ ಸಂದರ್ಭದಲ್ಲಿ ರೈತರ ಪರವಾಗಿ ಹೋರಾಟ ಮಾಡಿದ್ದೀರಿ, ವಿರೋಧ ಪಕ್ಷದ ಕರ್ತವ್ಯವೇ ಅದು. ನಿನ್ನೆ ದಿವಸದವರೆಗೂ ಇದ್ದಂತಹ ಹೋರಾಟವೇ ಬೇರೆ, ಸದನದಲ್ಲಿ ನಾನು ಪ್ರಾಮಾಣಿಕವಾಗಿ ಹೇಳುವುದಕ್ಕೆ ಬಯಸುವುದೇನೆಂದರೆ, ನಿಮ್ಮ ಬಳಿ ಏನು 1,575 ಕೋಟಿರೂಪಾಯಿ ಬೆಲೆ ಬಾಳುವಷ್ಟು ಸಕ್ಕರೆ ಇದೆ, ಅದನ್ನು ಕಳ್ಳನಿಗೆ 20 ರೂಪಾಯಿಗಳಂತೆ ಕೊಟ್ಟರು ಅದನ್ನು ತೆಗೆದುಕೊಳ್ಳುತ್ತಾನೆ. 2013–14ನೇ ಸಾಲಿನಲ್ಲಿ 935 ಕೋಟಿರೂಪಾಯಿಯಷ್ಟು ಹಣ ರೈತರಿಗೆ ಕೊಡುತ್ತೇವೆಂದು ರೈತರಿಗೆ ಪ್ರಾಮಿಸ್ ಮಾಡಿದ್ದೀರಿ, ಆ ಹಣವನ್ನು ರೈತರಿಗೆ ಕೊಡಲೇಬೇಕು. ಬೇರೆದಾರಿಯೇ ಇಲ್ಲ. ಅದಕ್ಕೆ ಹೇಗಿದ್ದರೂ ಈಗ ನಿಮ್ಮ ಖಜಾನೆ ತುಂಬಿದೆಯಲ್ಲಾ, ಆ ಹಣವನ್ನು ಈಗ ಕೊಟ್ಟು ಬಿಡಿ, ಹರಾಜು ಮಾಡಿ ತೆಗೆದುಕೊಳ್ಳಿ, ಇಲ್ಲವೆಂದರೆ, ಇವತ್ತು ಅಥವಾ ನಾಳೆ, ನಾಡಿದ್ದು ನಾವು ಧರಣಿ ಮಾಡುವಂಥದ್ದು, ನಮ್ಮ ಧರಣಿಯಿಂದ ರೈತರ ಆತ್ಮಹತ್ಯೆ ನಿಲ್ಲುವುದಿಲ್ಲ, ನಿಮ್ಮ ಆಶ್ವಾಸನೆಯಿಂದ ರೈತರ ಆತ್ಮಹತ್ಯೆ ನಿಲ್ಲುವುದಿಲ್ಲ, ಹಾಗಾಗಿ ನಾವು ನೀವು ಇಬ್ಬರೂ ಸೇರಿರೈತರನ್ನು ಬದುಕಿಸಬೇಕು. ನಾನು ಖಂಡಿತವಾಗಿ ಇಲ್ಲಿ ಧರಣಿ ಮಾಡುವುದಕ್ಕೆ ಬಂದಿಲ್ಲ, ಧರಣಿ ಮಾಡಿರೈತರ ಮುಂದೆ ದೊಡ್ಡವರಾಗಬೇಕೆಂದು ಬಂದಿಲ್ಲ, ನಾವು ಒಂದು ವಿರೋಧ ಪಕ್ಷದಲ್ಲಿದ್ದು ಪ್ರಾಮಾಣಿಕವಾದಂತಹ ಸಲಹೆಯನ್ನು ನಿಮಗೆ ಕೊಡುತ್ತಿದ್ದೇವೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಇದು ಪ್ರಿಲಿಮಿನರಿ ಸಬ್‌ಮಿಶನ್ ಆಗಿದೆಯೇ ಅಥವಾ detailed debate ಏನಾದರು ನಡೆಯುತ್ತಿದೆಯೇ ಹೇಗೆ ಎಂಬುದು ಗೊತ್ತಾಗುತ್ತಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ನಮಗೆ ಅಡ್ರಸ್ ಮಾಡಿ ಹೇಳುತ್ತಿದ್ದಾರೆ, ಆದರೆ ಮಾನ್ಯ ಸಭಾಪತಿಯವರಿಗೆ ಕನ್‌ವಿನ್ಸ್ ಮಾಡಬೇಕಲ್ಲವೆ?

**(ಗೊಂದಲ)**

**ಶ್ರೀ ಆರ್.ವಿ.ವೆಂಕಟೇಶ್(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಇವರು ಸದನದ ಸಮಯವನ್ನು ವ್ಯರ್ಥ ಮಾಡುತ್ತಿದ್ದಾರೆಯೇ ವಿನಃ ರೈತರ ಬಗ್ಗೆ ಕಾಳಜಿ ಇಲ್ಲ, ರೈತರ ಬಗ್ಗೆ ಯಾವ ಒಲವು ಇಲ್ಲ ಇವರಿಗೆ. ರಾಜಕೀಯ ನಾಟಕ ಮಾಡುತ್ತಿದ್ದೀರಿ.

**(ಗೊಂದಲ)**

**ಶ್ರೀ ಆರ್.ವಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಪ್ರಿಲಿಮಿನರಿ ಸಬ್‌ಮಿಶನ್‌ಗೆ ಐದು ನಿಮಿಷ ಕಾಲಾವಕಾಶ ನೀಡುತ್ತೇನೆಂದು ಹೇಳಿದ್ದಾರೆ, ಆದರೂ ಸಹ ಹೇಳಿದಂತಹ ಮಾತುಗಳನ್ನೇ ಪುನಃ ಪುನಃ ಹೇಳುವುದು. ಇವರು ರಾಜಕೀಯ ಮಾಡುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಕುಳಿತುಕೊಳ್ಳಿ ಸಾಕು.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಇದು ಸರ್ಕಾರಕ್ಕೆ ಗೊತ್ತಾಗುತ್ತಿಲ್ಲವೆ?

**(ಗೊಂದಲ)**

**ಸಭಾಪತಿಯವರು:–** ಆಯಿತು, ಕುಳಿತುಕೊಳ್ಳಿ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಷಯವನ್ನು ನಿಲುವಳಿ ಸೂಚನೆಯ ಮೂಲಕ ತೆಗೆದುಕೊಳ್ಳಬೇಕೆಂದು ಪ್ರಸ್ತಾಪ ಮಾಡುತ್ತಿದ್ದಾರೆ, ಅದಕ್ಕೆ ಸರ್ಕಾರ ಏನು ಹೇಳುತ್ತದೆ ಎಂದು ಹೇಳಿದರೆ ನಾನು ನನ್ನ ನಿರ್ಣಯವನ್ನು ಹೇಳಬಹುದು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಉದ್ದುದ್ದ ಭಾಷಣ ಮಾಡುವುದಕ್ಕೆ ಇಷ್ಟಪಡುವುದಿಲ್ಲ ವೆಂದು ಹೇಳಿದ್ದೇನೆ,

**ಡಾ॥ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಮಾನ್ಯ ಸಭಾಪತಿಯವರನ್ನು ಕನ್‌ವಿನ್ಸ್ ಮಾಡಿ. ಶ್ರೀಮತಿ ಮೋಟಮ್ಮನವರು ಹೇಳಿದಂತಹ ಮಾತನ್ನು ತಪ್ಪಾಗಿ ತಿಳಿದುಕೊಳ್ಳಬೇಡಿ, ದಯಮಾಡಿತಾವು ಮಾನ್ಯ ಸಭಾಪತಿಯವರನ್ನು ಕನ್‌ವಿನ್ಸ್ ಮಾಡಿ. ಅವರು ಅನುಮತಿಯನ್ನು ಕೊಟ್ಟರೆ detailed discussion ಮಾಡೋಣ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ಇಲ್ಲಿ ನೀವೇನಾದರು ಸರಿಯಾದ ಉತ್ತರವನ್ನು ಕೊಡಲಿಲ್ಲವೆಂದರೆ, ನಾನು ತುಂಬಾ ಸ್ಪಷ್ಟವಾಗಿ ಹೇಳುತ್ತೇನೆ, ವಿಧಿಯಿಲ್ಲದೆಧರಣಿ ಕುಳಿತುಕೊಳ್ಳಲೇ ಬೇಕಾಗುತ್ತದೆ. ಏಕೆಂದರೆ, ರೈತ ಸಾಯುತ್ತಿರುವಂತಹ ಸಂದರ್ಭದಲ್ಲಿ ಪ್ರಶ್ನೋತ್ತರಗಳು ಬೇಕು.ಇದು ನಡೆದು ಬಂದದಾರಿ ಎಂದು ನೀವು ಕಥೆ ಹೇಳುತ್ತೀರಿ ಹೇಳಿ. ಇದಕ್ಕೆ ನನ್ನದೇನು ಅಭ್ಯಂತರವಿಲ್ಲ. ವಿಧಾನ ಪರಿಷತ್ತು ಹಿರಿಯರ ಮನೆ. ಅದಕ್ಕೋಸ್ಕರ ನಾನು ತುಂಬಾ ಸ್ಪಷ್ಟವಾಗಿ ಹೇಳಬಯಸುವುದೇನೆಂದರೆ, ನೀವು ಈಗ ಹೇಳಬೇಕಾಗಿರುವುದೇನೆಂದರೆ, ‘ನಮ್ಮ ಹತ್ತಿರ ಸಕ್ಕರೆ ಇದೆ, ಆ ಸಕ್ಕರೆಯನ್ನು ನಾವು ಹರಾಜು ಮಾಡುತ್ತೇವೆ, ಅಲ್ಲಿಯವರೆಗೆ ನಮ್ಮ ಖಜಾನೆಯಿಂದ ದುಡ್ಡನ್ನು ರೈತರಿಗೆ ಕೊಡುತ್ತೇವೆ. ಹರಾಜಿನ ಹಣ ಬರುತ್ತಿದ್ದಂತೆಯೇ ನಾವು ನಮ್ಮ ಖಜಾನೆಯನ್ನು ತುಂಬಿಸಿಕೊಳ್ಳುತ್ತೇವೆ

ಎಂದು ಒಂದು ಉತ್ತರ ಕೊಟ್ಟರೆ ನಮ್ಮದೇನು ಅಭ್ಯಂತರವಿಲ್ಲ. ಈ ಮಾತನ್ನು ಹೇಳುವುದಕ್ಕೆ ನಿಮಗೆ ಇರುವಂತಹ ತೊಂದರೆಯಾದರು ಏನು ಎಂಬುದು ನನಗೆ ಗೊತ್ತಿಲ್ಲ.

**ಶ್ರೀ ಕೆ.ಅಬ್ದುಲ್‌ಜಬ್ಬಾರ್:–** ಮಾನ್ಯ ಸಭಾಪತಿಯವರೇ, ನೀವು ಪ್ರಿಲಿಮಿನರಿ ಸಬ್‌ಮಿಶನ್‌ಗೆ ಐದು ನಿಮಿಷಗಳ ಕಾಲಾವಕಾಶವನ್ನು ಕೊಟ್ಟಿದ್ದೀರಿ, ಆದರೆ ಐದು ನಿಮಿಷ ಹೋಗಿ 20 ನಿಮಿಷ ಆಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಭಾನಾಯಕರಿಗೆ ನಿಮ್ಮ ಮುಖಾಂತರ ಹೇಳಬಯಸುವುದೇನೆಂದರೆ, ಮಾನ್ಯ ಸಭಾಪತಿಯವರು ಇದಕ್ಕೆ ಭರವಸೆಯನ್ನು ಕೊಡುವುದಕ್ಕೆ ಬರುವುದಿಲ್ಲ, ಮಾನ್ಯ ಸಭಾ ನಾಯಕರಿದ್ದೀರಿ, ಅವರ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ, ಇಡೀ ಕರ್ನಾಟಕ ರಾಜ್ಯದ ರೈತರು ಸುಮಾರು 45 ಜನ ಆತ್ಮಹತ್ಯೆ ಮಾಡಿಕೊಂಡು ಸತ್ತರು, ಇನ್ನು ಮುಂದೆರೈತರು ಸಾಯಬಾರದು ಎಂದು ನಿಮಗೂ ಆಸೆ ಇದೆ, ನಮಗೂ ಆಸೆ ಇದೆ. ನೀವು ಕೊಡುವಂತಹ ಉತ್ತರ ಸರಿಯಿಲ್ಲದಿದ್ದರೆ ಅನೇಕ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ತಯಾರಿದ್ದಾರೆ. ಅವರೆಲ್ಲರೂ ಕೂಡ ಈ ವಿಧಾನ ಮಂಡಲದಲ್ಲಿ ನಮ್ಮ ಚುನಾಯಿತ ಪ್ರತಿನಿಧಿಗಳು ರೈತರ ಪರವಾಗಿ ಇರುವಂತಹ ಸರ್ಕಾರ, ದಲಿತರು, ಹಿಂದುಳಿದವರು, ಅಲ್ಪ ಸಂಖ್ಯಾತರು ನಮ್ಮ ಪರ ಇರುವಂತಹ ಸರ್ಕಾರ ನಮ್ಮ ಆತ್ಮಾಹುತಿಯನ್ನು ತಡೆಯಬಹುದೆಂದು ಕಾಯುತ್ತಿದ್ದಾರೆ. ಹಾಗಾಗಿ ನಿಮಗೆ ಇವತ್ತೇನಾದರು ರೈತರ ಆತ್ಮಹತ್ಯೆಯನ್ನು ತಡೆಯಬೇಕು ಎಂಬ ಆಸೆ ಇದ್ದರೆ ನಾನು ಹೊಸದಾಗಿ, ನಿಮ್ಮ ಜೇಬಿನಿಂದ ಹಣಕೊಡಿ ಎಂದು ಕೇಳುತ್ತಿಲ್ಲ. ನಿಮ್ಮ ಹತ್ತಿರ ಸಕ್ಕರೆ ಇದೆ, ಅದನ್ನು ಮಾರಾಟ ಮಾಡುವುದಕ್ಕೆ ನಿಮಗೆ ಸಮಯ ಬೇಕು, ಆ ಸಮಯಕ್ಕೆ ಮಾತ್ರ ನಿಮ್ಮ ಖಜಾನೆಯಲ್ಲಿರುವಂತಹ ಹಣವನ್ನು ಅವರಿಗೆ ಕೊಡಿ, ನಂತರ ನೀವು ಸಕ್ಕರೆ ಮಾರಾಟ ಮಾಡಿದಕೂಡಲೆ ಆ ಹಣವನ್ನು ತೆಗೆದುಕೊಳ್ಳಿ ಎಂದು ಹೇಳುವುದನ್ನು ಬಿಟ್ಟರೆ ಬೇರೆಯಾವ ಉದ್ದೇಶವು ನನಗಿಲ್ಲ. ಆದಕಾರಣ ನಾನು ಹೇಳಬಯಸುವುದೇನೆಂದರೆ, ...

**ಸಭಾಪತಿಯವರು:–** ಈ ವಿಷಯವನ್ನು ನಿಲುವಳಿ ಸೂಚನೆಯ ಮುಖಾಂತರ ತೆಗೆದುಕೊಳ್ಳಬೇಕೆಂದರೆ, ಬೇರೆ ವಿಷಯವನ್ನು ಪಕ್ಕಕ್ಕೆ ಇಟ್ಟು ಇದರ ಬಗ್ಗೆ ಚರ್ಚೆ ಮಾಡಬೇಕೆಂದರೆ....

**ಶ್ರೀ ಕೆ.ಎಸ್.ಈಶ್ವರಪ್ಪ:–** ರೈತರು ಸಾಯುವುದು ಬಿಟ್ಟರೆ ಇನ್ನೆಂಥಾ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುತ್ತೀರಿ? ನಿಲುವಳಿ ಸೂಚನೆ ಇರುವುದೇ ರೈತರು ಸಾಯುವುದನ್ನು ಉಳಿಸುವುದಕ್ಕೆ. ಸಾಯುತ್ತಿರುವಂತಹ ರೈತರನ್ನು ನಾವು ಉಳಿಸುವುದಕ್ಕೆ ನಿಮ್ಮ ಪರವಾಗಿ ಇದ್ದೇವೆ ಎಂದು ಹೇಳುವುದು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಎರಡಕ್ಕೂ ನಮ್ಮಕರ್ತವ್ಯ ಇದೆ. ಅದೇ ನಿಲುವಳಿ ಸೂಚನೆ. ಅದಕ್ಕೆ ಅವಕಾಶವಿಲ್ಲವೆಂದರೆ ಇನ್ಯಾವುದಕ್ಕೆ ನೀವು ತೆಗೆದುಕೊಳ್ಳುತ್ತೀರಿ?

**ಸಭಾಪತಿಯವರು:–** ಸರ್ಕಾರ ಏನು ಹೇಳುತ್ತದೆ ಎಂಬುದನ್ನು ಕೇಳೋಣ. ಚರ್ಚೆ ಮಾಡುವುದರ ಬಗ್ಗೆ ಸರ್ಕಾರದ ಪರವಾಗಿ ಮಾನ್ಯ ಸಭಾ ನಾಯಕರಾಗಲಿ ಅಥವಾ ಸಚಿವರಾಗಲಿ ಏನು ಹೇಳುತ್ತಾರೆ ಎಂಬುದನ್ನು ಕೇಳೋಣ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಅನೇಕ ಗೌರವಾನ್ವಿತ ಸದಸ್ಯರು ನಿಯಮ 59ರ ಅಡಿಯಲ್ಲಿ ನಿಲುವಳಿ ಸೂಚನೆಯನ್ನು ಮಂಡಿಸಿದ್ದಾರೆ. ಅದರ ಬಗ್ಗೆ ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಿಲಿಮಿನರಿ ಸಬ್‌ಮಿಶನ್‌ನಲ್ಲಿ ಬಹಳಷ್ಟು ವಿಸ್ತಾರವಾಗಿ, ವಿಸ್ತೃತವಾಗಿಯು ಸಹ ಹೇಳಿದ್ದಾರೆ. ನಮ್ಮ ಸರ್ಕಾರದ ವಿಚಾರ ಅತ್ಯಂತ ಮಹತ್ವವಾದಂತಹ ವಿಚಾರ ನಮ್ಮದೇಶದ ಅನ್ನದಾತರಿಗೆ ತೊಂದರೆ ಬರುವಂತಹ ಸಂದರ್ಭದಲ್ಲಿ, ಆತ್ಮಹತ್ಯೆ ಮಾಡಿಕೊಳ್ಳುವಂತಹ ದುರ್ಬಲವಾದಂತಹ ಪ್ರಸಂಗದಲ್ಲಿ ನಮ್ಮ ಸರ್ಕಾರಕೂಡ ರೈತರ ಪರವಾಗಿರುವಂತಹ ಸರ್ಕಾರ, ರೈತರ ಬಗ್ಗೆ

ಚಿಂತನೆ ಮಾಡುವಂತಹ ಸರ್ಕಾರ, ಎಂದು ಕೇವಲ ನಾವು ನನ್ನ ಬಾಯಿ ಮಾತಿನಿಂದ ಹೇಳುತ್ತಿಲ್ಲ. ಈಗಾಗಲೇ ಆ ದಿಶೆಯಲ್ಲಿ ಕಾರ್ಯೋನ್ಮುಖರಾಗಿ ಕಾರ್ಯಗಳನ್ನು ಮಾಡುತ್ತಿದ್ದೇವೆ. ಆದುದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 59ರ ಅಡಿಯಲ್ಲಿ ಮಂಡಿಸಿದಂತಹ ಈ ನಿಲುವಳಿ ಸೂಚನೆ ಏನಿದೆ ಇದನ್ನು ಕನ್‌ವರ್ಟ್ ಮಾಡಿ ನಿಯಮ 68ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಡಬೇಕೆಂದುತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾನಾಯಕರೇ, ನೀವು ಹೇಗೆ ನಿಯಮ 68ರ ಅಡಿಯಲ್ಲಿಯೇ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡುತ್ತೀರಿ?

**ಶ್ರೀ ಎಸ್.ಆರ್.ಪಾಟೀಲ್:–** ನಾನು ಮಾನ್ಯ ಸಭಾಪತಿಯವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ಸಭಾಪತಿಯವರೇ, ತಾವು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳುವಳಿಕೆ ಹೇಳಬೇಕಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಇಡೀರಾಜ್ಯ ನೋಡುತ್ತಿದೆ, ಆದಕಾರಣ ಈ ವಿಷಯವನ್ನು ನಿಲುವಳಿ ಸೂಚನೆಯ ಅಡಿಯಲ್ಲಿಯೇ ತೆಗೆದುಕೊಳ್ಳಬೇಕು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ವಿರೋಧ ಪಕ್ಷದ ನಾಯಕರೆ, ನಾನು ನನ್ನ ಸಬ್‌ಮಿಶನ್ ಮಾಡುತ್ತೇನೆ. ಸರ್ಕಾರದ ಪರವಾಗಿ ಕೇಳಿದ್ದಾರೆ, ನಾನು ಸಭಾ ನಾಯಕನಿದ್ದೇನೆ, ನಾನು ಸರ್ಕಾರದ ವಿಚಾರ, ನಿಲುವು, ಒಲವುಗಳನ್ನು ಹೇಳುವುದು ನನ್ನಕರ್ತವ್ಯ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಗಳೇ, ನನ್ನ submission ಅನ್ನು ನಾನು ಮಾಡುತ್ತೇನೆ. ಸರ್ಕಾರದ ನಿಲುವು ಏನೆಂದು ಕೇಳಿದ್ದಾರೆ. ನಾನು ಸರ್ಕಾರದ ಸಭಾನಾಯಕನಾಗಿ ಸರ್ಕಾರದ ನಿಲುವನ್ನು ಸರ್ಕಾರದ ಪರವಾಗಿ ಹೇಳಬೇಕಾಗುತ್ತದೆ. ಸರ್ಕಾರದ ನಿಲುವು ಒಲವುಗಳ್ನು ಹೇಳುವುದು ನನ್ನ ಕರ್ತವ್ಯ. ನಾನು ಮತ್ತು ಸಭಾನಾಯಕರು ಏನಾದರೂ ಹೇಳಬೇಕಾದಲ್ಲಿ ಅದನ್ನು ಪೀಠಕ್ಕೆಕೋರಿಕೆ ಸಲ್ಲಿಸಬೇಕು. ಕೊನೆಗೆ ಅದು ಸಭಾಪತಿಯವರ discretionary power. ಈ ವಿಚಾರದಲ್ಲಿ ನಿಲುವಳಿ ಸೂಚನೆಯನ್ನು ತರಬೇಕೆಂದು ವಿರೋಧ ಪಕ್ಷದ ನಾಯಕರು ಹೇಳಿದರು. ಆದರೆ ಈ ವಿಚಾರದ ಬಗ್ಗೆ ಸಾಕಷ್ಟು ಸದಸ್ಯರು ಮಾತನಾಡುವವರಿದ್ದಾರೆ. ಆ ಕಡೆ ಮಾತ್ರವಲ್ಲದೇ ನಮ್ಮ ಕಡೆಯಲ್ಲಿಯೂ ಸಹ ಮಾತನಾಡುವವರಿದ್ದಾರೆ. ನೋಟಿಸ್‌ನಲ್ಲಿ ಸಹಿ ಮಾಡಿರುವವರು ಮಾತ್ರವಲ್ಲದೇ ಈ ಸದನದ ಬಹುತೇಕ ಸದಸ್ಯರು ಸಹ ಈ ವಿಚಾರದ ಬಗ್ಗೆ ಮಾತನಾಡುವವರಿದ್ದಾರೆ. ಆದ್ದರಿಂದ ನಿಯಮ 59ರ ಬದಲಿಗೆ ಈ ವಿಚಾರವನ್ನು ನಿಯಮ 68ರ ಅಡಿಯಲ್ಲಿ ಚರ್ಚೆಯನ್ನು ಮಾಡಿದರೆ ಸರ್ಕಾರ ಎಲ್ಲಾ ರೀತಿಯ ಉತ್ತರವನ್ನು ನೀಡಲಿಕ್ಕೆ ಸಿದ್ಧವಾಗಿದೆ. ರೈತರಿಗೆ ಯಾವರೀತಿ ಸಹಾಯ ಮಾಡಬೇಕು, ರೈತರ ಆತ್ಮಸ್ಥೈರ್ಯವನ್ನು ಯಾವರೀತಿ ಯಲ್ಲಿ ಹೆಚ್ಚಿಸಬೇಕೆನ್ನುವುದರ ಬಗ್ಗೆ ತುದಿಗಾಲಿನಲ್ಲಿ ಉತ್ತರ ನೀಡುವುದಕ್ಕೆ ಸರ್ಕಾರ ಸಿದ್ಧವಾಗಿದೆ. ಆದ್ದರಿಂದ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ನಿಯಮ 59ರ ಬದಲಿಗೆ ಈ ವಿಚಾರವನ್ನು ನಿಯಮ 68 ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಸದನದ ಸತ್‌ಸಂಪ್ರದಾಯ ಪ್ರಕಾರ ಪ್ರಶ್ನೋತ್ತರ ಅವಧಿ ಮುಗಿದತಕ್ಷಣವೇ ಈ ವಿಚಾರವನ್ನು ಕೈಗೆತ್ತಿಕೊಂಡು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಬಿನ್ನಹ ಮಾಡಿಕೊಳ್ಳುತ್ತೇನೆ.

**ಶ್ರೀ ರಾಮಚಂದ್ರಗೌಡ(ಪದವೀಧರರಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಈ ವಿಚಾರದಲ್ಲಿ ನಿಲುವಳಿ ಸೂಚನೆ ಏಕೆ ತರಲಾಗುತ್ತಿದೆ ಎಂದರೆ ಸರ್ಕಾರಈ ವಿಚಾರದಲ್ಲಿ ಮಾತುತಪ್ಪಿದೆ. ಈಗಾಗಲೇ ಸರ್ಕಾರ ನಾವು

ಮಾಡುತ್ತೇವೆ ಎನ್ನುವ ಮಾತನ್ನು ನೀಡಿದೆ. ಮಾತು ನೀಡಿದ ಮೇಲೆ ಇನ್ನು ಚಿಂತನೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಎಷ್ಟು ದಿವಸ ಚಿಂತನೆಯನ್ನು ಮಾಡಬೇಕು. Knowing is not doing. Doing is doing. ಚಿಂತನೆ ಮಾಡುವುದರಿಂದ ಕೆಲಸ ಆಗುವುದಿಲ್ಲ. ಚಿಂತನೆ ಮಾಡಿದಂತೆ ಕೆಲಸ ಮಾಡಿದರೆ ಮಾತ್ರ ಅಭಿವೃದ್ಧಿ ಸಾಧ್ಯವಾಗುತ್ತದೆ. ಈ ಎರಡು ವರ್ಷದ ಕೆಳಗೆ ಇದನ್ನು ನೀಡುವುದಾಗಿಸರ್ಕಾರ ಮಾತು ನೀಡಿದೆ. ಈಗಾಗಲೇ ಸತ್ತವರನ್ನು ಬಿಟ್ಟರೂ ಸಹ ಇನ್ನು ಆಸ್ಪತ್ರೆಯಲ್ಲಿ 120–130 ಜನರು ಆಸ್ಪತ್ರೆಯಲ್ಲಿದ್ದಾರೆ. ಇವರೆಲ್ಲರೂ ಆತ್ಮಹತ್ಯೆಯ attempt ಮಾಡಿದ್ದಾರೆ. ಆಸ್ಪತ್ರೆಯಲ್ಲಿರುವವರಾದರೂ ಬದುಕಬೇಕಲ್ಲವೇ? ಅವರಾದರೂ ಬದುಕಬೇಕಾದರೆ ತಕ್ಷಣ ಇದರ ಬಗ್ಗೆ ಸೂಕ್ತ ಕ್ರಮ ಜರುಗಿಸಬೇಕು. ಇದರ ಬಗ್ಗೆ ಮಾತನಾಡಲು ಸಾಕಷ್ಟು ಮಾಹಿತಿಯಿದೆ. ಆದ್ದರಿಂದ ಈ ವಿಚಾರವು ನಿಲುವಳಿ ಸೂಚನೆಯಲ್ಲಿಯೇ ಬರಬೇಕೆನ್ನುವುದು ನಮ್ಮ ಆಗ್ರಹವಾಗಿದೆ. ಆದ್ದರಿಂದ ಈ ವಿಚಾರವನ್ನು ನಿಲುವಳಿ ಸೂಚನೆಯಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ಮಾನ್ಯ ರಾಮಚಂದ್ರಗೌಡರು ಈ ಸದನದ ಹಿರಿಯ ಸದಸ್ಯರು. ವೈಯುಕ್ತಿಕವಾಗಿ ನನಗೆ ಅವರ ಬಗ್ಗೆ ಬಹಳ ಗೌರವವಿದೆ. ಇಲ್ಲಿಚಿಂತನೆ ಎನ್ನುವುದು ಇಲ್ಲ. ಸರ್ಕಾರ ಈ ವಿಚಾರದಲ್ಲಿ ಸರಿಯಾದ ಉತ್ತರವನ್ನು ನೀಡಿ, ಈ ವಿಚಾರದಲ್ಲಿ ಪರಿಹಾರ ಕಂಡು ಕೊಳ್ಳುವುದಕ್ಕೆ ತಯಾರಿದೆ. ಈ ವಿಚಾರವನ್ನು ನಿಯಮ 68ರ ಅಡಿಯಲ್ಲಿ ಚರ್ಚೆಗೆ ಅವಕಾಶ ನೀಡಿದಲ್ಲಿ ಚರ್ಚೆಯ ನಂತರ ಸಕ್ಕರೆ ಸಚಿವರು ಬಂದು ಇದಕ್ಕೆ ಉತ್ತರವನ್ನು ನೀಡುತ್ತಾರೆ. ವಿರೋಧ ಪಕ್ಷದವರಿಗೆ ಸುಧೀರ್ಘವಾದ ಮತ್ತು ಅವರಿಗೆ ತೃಪ್ತಿಯಾಗುವಂತಹ ಉತ್ತರವನ್ನು ನೀಡುವುದಕ್ಕೆ ನಾವು ಸಿದ್ಧರಿದ್ದೇವೆ. ಹಾಗಾಗಿ ಈ ವಿಚಾರವನ್ನು ನಿಯಮ 59ರ ಬದಲಿಗೆ ನಿಯಮ 68ರ ಅಡಿಯಲ್ಲಿ ಚರ್ಚೆಗೆ ಅವಕಾಶ ನೀಡಬೇಕೆಂದು ಮಾನ್ಯ ಸಭಾಪತಿಗಳಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಪ್ರಶ್ನೋತ್ತರ ಅವಧಿ ಮುಗಿದತಕ್ಷಣ ನಿಯಮ 68ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಿ.

**ಪ್ರೊ।ಕೃಷ್ಣಭಟ್(ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಗಳೆ, ಈ ವಿಚಾರವನ್ನು ಯಾವ ನಿಯಮದಡಿಯಲ್ಲಿ ಚರ್ಚೆ ಮಾಡಬೇಕೆನ್ನುವುದು ಇಲ್ಲಿ ಮುಖ್ಯವಾದ ವಿಚಾರವಲ್ಲ. ಸರ್ಕಾರದ ಮತ್ತು ಈ ಶಾಸನಸಭೆಕಡೆಯಿಂದ ಸರ್ಕಾರದಕಡೆಯಿಂದ ಮತ್ತು ವಿರೋಧ ಪಕ್ಷದಕಡೆಯಿಂದ ರೈತರಕಡೆ ಬೆಂಬಲ ಇದೆ, ಕೃಷಿಗೆ ಆದ್ಯತೆಯನ್ನು ನೀಡಲಾಗುತ್ತಿದೆ ಎನ್ನುವ ಒಂದು ಸಂದೇಶ ಹೋಗಬೇಕು. ಒಂದು ನಿಲುವಳಿ ಸೂಚನೆ ಬಂದಕೂಡಲೇ ಸರ್ಕಾರ ಅದನ್ನು ಪ್ರತಿಷ್ಠೆಯನ್ನಾಗಿ ಭಾವಿಸಬಾರದು. ಇದೊಂದು ತುರ್ತಾದ ವಿಚಾರವಾಗಿರುವ ಹಿನ್ನೆಲೆಯಲ್ಲಿ ಇವತ್ತಿನ ದಿವಸ ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ ಈ ಚರ್ಚೆಯನ್ನು ಕೈಗೆತ್ತಿಕೊಳ್ಳಬೇಕು. ಇದನ್ನು ಸರ್ಕಾರವೂ ಕೂಡ ಒಪ್ಪಿಕೊಂಡರೆ ಸರ್ಕಾರಈ ಬಗ್ಗೆ ಗಂಭೀರವಾಗಿದೆ ಎಂದು ರೈತರಿಗೂ ಸಹ ಒಂದು ಸಂದೇಶ ಹೋಗುತ್ತದೆ. ಅದನ್ನು ಬಿಟ್ಟು ಈ ಸಂದರ್ಭದಲ್ಲಿ ಈ ವಿಚಾರ ತಾಂತ್ರಿಕವಾಗಿ ಯಾವ ನಿಯಮದಡಿಯಲ್ಲಿ ಚರ್ಚಿಸಬೇಕೆನ್ನುವುದೇ ಒಂದುಚರ್ಚೆ ಆಗಬಾರದು. ಹಾಗಾದಲ್ಲಿ ಇವರಿಗೆ ಚರ್ಚೆ ಮಾಡುವುದೇ ಮುಖ್ಯ ನಮ್ಮ ಸಮಸ್ಯೆಯನ್ನು ಪರಿಹಾರ ಮಾಡುವುದು ಮುಖ್ಯವಲ್ಲ ಎನ್ನುವ ಸಂದೇಶ ನಮ್ಮ ರೈತರಿಗೆ ಹೋಗುತ್ತದೆ. ಆದ್ದರಿಂದ ಮಾನ್ಯ ಸಭಾನಾಯಕರಲ್ಲಿ ಎಲ್ಲಾ ಕಲಾಪಗಳನ್ನು ಪಕ್ಕಕ್ಕಿಟ್ಟು ಈ ವಿಚಾರದ ಬಗ್ಗೆ ನಿಲುವಳಿ ಸೂಚನೆಯನ್ನು ಮಂಡಿಸುವುದಕ್ಕೆ ಅವಕಾಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಇಡೀ ಸಭೆಇದನ್ನು ಪ್ರಮುಖ ವಿಚಾರವಾಗಿ ಒಂದು ಆದ್ಯತೆಯ ವಿಚಾರವಾಗಿ ಪರಿಗಣಿಸಿದೆ ಎನ್ನುವ ಸಂದೇಶರೈತರಿಗೆ ಮುಟ್ಟಬೇಕು. ಅದಕ್ಕಾಗಿ ತಾವು ಅನುಮತಿಯನ್ನು ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಸಿ.ಹೆಚ್.ವಿಜಯಶಂಕರ್(ವಿಧಾನಸಭಾಕ್ಷೇತ್ರ):–** ಮಾನ್ಯ ಸಭಾಪತಿಗಳೇ, ರೈತರ ವಿಚಾರದಲ್ಲಿ ಇಷ್ಟು ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಸರ್ಕಾರ ಸ್ವಯಂಪ್ರೇರಣೆಯಿಂದ ಹೇಳಿಕೆಯನ್ನು ನೀಡಬೇಕಾಗಿತ್ತು. ಈ ಸಮಸ್ಯೆಗೆ ನಾವು ಯಾವ ಪರಿಹಾರವನ್ನು ನೀಡಬಹುದು, ಸರ್ಕಾರ ಈ ಬಗ್ಗೆ ಕೈಗೊಂಡಿರುವ ತೀರ್ಮಾನಗಳೇನು, ಎಂದುಕಬ್ಬು ಬೇಳೆಗಾರರ ವಿಚಾರದಲ್ಲಿ ಬಾಕಿ ಹಣದ ವಿಚಾರದಲ್ಲಿ ಸರ್ಕಾರ ಸ್ವಯಂ ಪ್ರೇರಣೆಯಿಂದ ಉತ್ತರವನ್ನು ಈಗಾಗಲೇ ನೀಡಬೇಕಾಗಿತ್ತು, ನಾವಾಗಿ ಈ ವಿಚಾರವನ್ನು ಪ್ರಸ್ತಾಪ ಮಾಡಿದರೂ ಸಹ ಇನ್ನು ಸರ್ಕಾರ ಕಾಲಾವಕಾಶ ಕೇಳುತ್ತಿರುವುದು ನಿಜವಾಗಿಯೂ ದುರಂತ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವಂತೆ ಈ ವಿಚಾರವನ್ನು ನಿಲುವಳಿ ಸೂಚನೆಯಡಿ ಯಲ್ಲಿ ಪ್ರಸ್ತಾಪಿಸುವುದಕ್ಕೆ ಅವಕಾಶ ನೀಡಬೇಕು. ದಯಮಾಡಿ ಈಗ ಪ್ರಶ್ನೋತ್ತರ ಅವಧಿಯನ್ನು ಕೈಬಿಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಕಬ್ಬು ಬೆಳೆಗಾರರ ವಿಚಾರಕ್ಕೆ ಸರ್ಕಾರ ಮೊದಲ ಆದ್ಯತೆಯನ್ನು ನೀಡಬೇಕು.

**ಶ್ರೀ ಎಸ್.ಆರ್.ಪಾಟೀಲ್:–**ಮಾನ್ಯ ಸಭಾಪತಿಗಳೇ, ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಇನ್ನಿತರ ಮಾನ್ಯ ಸದಸ್ಯರುಗಳು ಈ ವಿಚಾರದ ಬಗ್ಗೆ ಸಾಕಷ್ಟು ಅರಿವು ಮೂಡಿಸುವಂತಹ ಕೆಲಸವನ್ನು ಮಾಡಿದ್ದಾರೆ. ಸರ್ಕಾರಕೂಡ ಇದರ ಬಗ್ಗೆ ಬಹಳ ಗಂಭೀರವಾಗಿ ಚಿಂತನೆಯನ್ನು ಮಾಡಿದೆ.ಈ ವಿಚಾರದ ಬಗ್ಗೆ ಚರ್ಚೆ ಮಾಡಬೇಕೆಂದು ವಿರೋಧ ಪಕ್ಷದವರಿಗೆ ಎಷ್ಟು ಕಾಳಜಿ ಮತ್ತುಕಕ್ಕುಲಾತಿ ಇದೆಯೋ ಅಷ್ಟೇ ಕಾಳಜಿ ಮತ್ತುಕಕ್ಕುಲಾತಿ ಸರ್ಕಾರಕ್ಕೂ ಇದೆ. ಬಹುತರವಾಗಿ ಈ ರಾಷ್ಟ್ರದ ಇತಿಹಾಸದಲ್ಲಿ 250 ರೂಪಾಯಿ ಮೆಟ್ರಿಕ್‌ಟನ್‌ಗೆ ನೇರವಾಗಿ ಸರ್ಕಾರ ರೈತರ ಖಾತೆಗೆಜಮಾ ಮಾಡಿದ್ದು ಬೇರೆಯಾವುದೇ ರಾಜ್ಯದಲ್ಲೂ ಸಹ ಈ ರೀತಿ ಕಬ್ಬು ಬೆಳೆಗಾರರಿಗೆ ಹಣವನ್ನು ನೀಡಿರುವುದಿಲ್ಲ. ಇಂತಹ ಒಂದು ದಿಟ್ಟ ನಿರ್ಧಾರವನ್ನು ನಮ್ಮ ಸರ್ಕಾರ ಕೈಗೊಂಡಿದೆ. ನಾವು ಈ ಸದನದ ಸತ್ಸಂಪ್ರದಾಯದ ಪ್ರಕಾರ ಮೊದಲಿಗೆ ಪ್ರಶ್ನೋತ್ತರಗಳನ್ನು ತೆಗೆದು ಕೊಳ್ಳಬೇಕೆಂದು ಮಾನ್ಯ ಸಭಾಪತಿಯವರಿಗೆ ಮನವಿಯನ್ನು ಮಾಡಿ ಕೊಂಡಿದ್ದೇವೆ. But you have got an unfettered discretionary power. ತಮಗೆ ಬಹಳಷ್ಟು discretionary power ಇದೆ.ತಾವು ಈಗಲೇ ಈ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿದರೆ ಚರ್ಚೆಗೆ ನಾವು ಈಗಲೇ ಸಿದ್ದರಿದ್ದೇವೆ. We have given priority. ವಿರೋಧ ಪಕ್ಷದವರು ಎಲ್ಲಾ ಕಲಾಪಗಳನ್ನು ಬದಿಗೊತ್ತಿ ಈ ಚರ್ಚೆಯನ್ನು ಕೈಗೆತ್ತಿಕೊಳ್ಳಬೇಕೆಂದು ಅವರು ಕೇಳಿಕೊಂಡಿದ್ದಾರೆ. ತಾವು ಅದೇಶ ನೀಡಿದಲ್ಲಿ ಇದೊಂದು ವಿಶೇಷ ಪ್ರಕರಣ ಎಂದು ಭಾವಿಸಿ ತಾವು ಅನುಮತಿ ನೀಡಬಹುದು, ತಮಗೆಲ್ಲರಿಗೂ ರೈತರ ಬಗ್ಗೆ ಎಷ್ಟು ಕಾಳಜಿ, ಕಕ್ಕುಲಾತಿ ಇದೆ. ಅದೇ ರೀತಿ ಸರ್ಕಾರಕ್ಕೂಕೂಡ ಇದೆ.

ರೈತರ ಪ್ರಶ್ನೆ ಬಂದಾಗ ನಾವು ನಮ್ಮ ಕಲಾಪ ಪದ್ದತಿ ಎಂದು ಹೇಳುತ್ತಾ ಕೂಡುವುದು ಸರಿಯಲ್ಲ ಎನ್ನುವುದು ನನ್ನ ಮನಸ್ಸಿನಲ್ಲಿಯೂ ಇರುವ ಹಿನ್ನೆಲೆಯಲ್ಲಿ, ಎರಡು ನಿಯಮಗಳಲ್ಲಿ ಏನು ವ್ಯತ್ಯಾಸ ಎನ್ನುವುದು ಎಲ್ಲರಿಗೂ ಗೊತ್ತು ಅದನ್ನು ನಾನು ಮತ್ತೆ ಹೇಳಲು ಹೋಗುವುದಿಲ್ಲ. ನಿಯಮ 68ರಲ್ಲಿ ಈಗ ಚರ್ಚೆ ಮಾಡಬೇಕು. ನಂತರ ಸರ್ಕಾರದಿಂದ ಉತ್ತರ ಕೊಡುತ್ತಾರೆ. ಈ ಚರ್ಚೆ ಮುಗಿದ ಮೇಲೆ ಪ್ರಶ್ನೋತ್ತರ ತೆಗೆದುಕೊಳ್ಳುತ್ತೇನೆ. ಕಬ್ಬು ಬೆಳೆಗಾರರ ಸಮಸ್ಯೆ ಮತ್ತು ಅವರಿಗೆ ಕೊಡಬೇಕಾದ ಬಾಕಿ ಹಣದ ಬಗ್ಗೆ ಮಾತ್ರ ಚರ್ಚೆ ಮಾಡಲಾಗುತ್ತದೆ. ನಂತರ ಸರ್ಕಾರದಿಂದ ಏನು ಉತ್ತರ ಬರುತ್ತದೆ ಎನ್ನುವುದನ್ನು ನೋಡೋಣ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ತಮ್ಮ ನಿರ್ಣಯವನ್ನು ನಾನು ಸ್ವಾಗತ ಮಾಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ನಾನು ಮಾನ್ಯ ಸಭಾಪತಿಗಳ ನಿರ್ಣಯವನ್ನು ಮಾನ್ಯ ಸಭಾನಾಯಕರ ನಿರ್ಣಯವನ್ನು ಸ್ವಾಗತ ಮಾಡುತ್ತೇನೆ, ಹಾಗೆಯೇ ಸರ್ಕಾರದ ಉತ್ತರದ ನಿರೀಕ್ಷೆಯಲ್ಲಿ ನಾವಿದ್ದೇವೆ. ರೈತರ ಆತ್ಮಹತ್ಯೆಯನ್ನು ತಪ್ಪಿಸುವ ರೀತಿಯಲ್ಲಿ ಉತ್ತರವನ್ನು

ನಾವು ನಿರೀಕ್ಷೆ ಮಾಡುತ್ತಿದ್ದೇವೆ. ಚರ್ಚೆ ಮಾಡಬೇಕು ಎನ್ನುವ ಕೇವಲ ಅದೊಂದೇ ಉದ್ದೇಶದಿಂದ ನಾವು ಹಠ ಮಾಡುತ್ತಿಲ್ಲ. ಸಕ್ಕರೆ ವಿಚಾರದಲ್ಲಿ ನಾನು ಇನ್ನು ಮಗು, ಆದರೆ ಸಕ್ಕರೆ ವಿಚಾರದಲ್ಲಿ ಮಾನ್ಯ ಎಸ್.ಆರ್.ಪಾಟೀಲ್‌ರವರು ಮುದುಕರು. ನಾನು ಜೀವನ ಪೂರ್ತಿ ತಿಂದಿರುವ ಸಕ್ಕರೆಗಿಂತ ದೊಡ್ಡ ಅನುಭವ ಅವರಿಗೆ ಸಕ್ಕರೆ ವಿಚಾರದಲ್ಲಿ ಇದೆ.

**ಶ್ರೀ ಎಸ್.ಆರ್.ಪಾಟೀಲ್:–** ನಿಮಗೆ ಸಕ್ಕರೆ ಖಾಯಿಲೆ ಇದೆಯೇ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಇಲ್ಲ ನನಗೆ ಸಕ್ಕರೆ ಖಾಯಿಲೆ ಇಲ್ಲ. ಅದು ತಮಗೂ ಬರಬಾರದು. ಹಾಗೆ ಕಬ್ಬನ್ನು ಬೆಳೆಯುವ ರೈತನಿಗೂ ಸಕ್ಕರೆ ಖಾಯಿಲೆ ಬರದ ಹಾಗೆ ತಾವು ನೋಡಿಕೊಳ್ಳಬೇಕು. ಸಕ್ಕರೆ ಖಾಯಿಲೆ ತಡೆಗಟ್ಟುತ್ತಿಲ್ಲ ಅವರು ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡುತ್ತಿದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್:–** ಸಕ್ಕರೆ ಖಾಯಿಲೆ ನಮಗೂ ಇಲ್ಲ, ನಿಮಗೂ ಇಲ್ಲ, ಇಂತಹ ಸಂದರ್ಭದಲ್ಲಿ ಕಬ್ಬು ಬೆಳೆಗಾರರ ಬಗ್ಗೆ ಸಕ್ಕರೆ ಸಿಹಿ ಆಗಿರುತ್ತದೆ ಹೊರತು ಕಹಿ ಆಗುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ನಿಮ್ಮ ಉತ್ತರ ಸಿಹಿಯಾ ಅಥವಾ ಕಹಿಯಾ, ರೈತ ಬದುಕಬೇಕೇ ಅಥವಾ ಆತ್ಮಹತ್ಯೆ ಮಾಡಿಕೊಳ್ಳಬೇಕೇಎನ್ನುವುದು ನಿಮ್ಮ ಉತ್ತರದಲ್ಲಿರುತ್ತದೆ ಎಂದು ಭಾವಿಸುತ್ತೇವೆ ನಾವು.ಮಾನ್ಯ ಸಭಾಪತಿಗಳೆ, ನಾನು ವಿಧಾನ ಪರಿಷತ್ತಿಗೆ ಬಂದಾಗಿನಿಂದ ಈ ವಿಚಾರವನ್ನು ಇಲ್ಲಿ ಚರ್ಚೆ ಮಾಡಿದ್ದೇನೆ. ಸಾಮಾನ್ಯ ಜನರ ವಿಚಾರಗಳನ್ನು ನಿಲುವಳಿ ಸೂಚನೆ ಮೂಲಕ ಏಕೆ ತೆಗೆದುಕೊಳ್ಳಬೇಕು ಎಂದರೆ, ಆ ವಿಚಾರದ ಬಗ್ಗೆ ಸರ್ಕಾರದ ಗಮನಕ್ಕೆ ತರಬೇಕು ಎಂದು. ಆದರೆ ಅನೇಕ ಸಾರಿ ಯಶ್ವಸಿಯಾಗುವುದಿಲ್ಲ. ಆದರೆ ಇವತ್ತು ಮಾನ್ಯ ದಿನೇಶ್ ಗುಂಡೂರಾವ್‌ರವರಿಗೆ, ಶ್ರೀಮತಿ ಉಮಾಶ್ರೀ ಯವರಿಗೆ ಮತ್ತು ಮಾನ್ಯ ಎಸ್.ಆರ್.ಪಾಟೀಲ್‌ರವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ದಿನೇಶ್ ಗುಂಡೂರಾವ್‌ರವರಿಗೆ, ಶ್ರೀಮತಿ ಉಮಾಶ್ರೀಯವರು ಮಾನ್ಯ ಎಸ್.ಆರ್.ಪಾಟೀಲ್‌ರವರಿಗೆ ಸಲಹೆ ಕೊಡದಿದ್ದರೆ ಅವರು ಒಪ್ಪಿಕೊಳ್ಳುತ್ತಿದ್ದರೋ ಇಲ್ಲವೊ ಗೊತ್ತಿಲ್ಲ.

**Sri S.R. PATIL:** I am basically a farmer. ನನ್ನ ತಂದೆ, ತಾತಾ, ಮುತ್ತಾತ ಎಲ್ಲರೂ ಕೃಷಿಕರು. ನಾನು ಕೃಷಿ ಕುಟುಂಬದಿಂದ ಬಂದವನು. ಮೊದಲು ನಾನು ರೈತ ನಂತರ ಮಂತ್ರಿ, ಶಾಸಕರ ಎಲ್ಲಾ. ಈ ಮಣ್ಣಿನ ಸಂಸ್ಕಾರದಲ್ಲಿ ಬಂದವನು. ನನಗೆ ಸಂಸ್ಕಾರವಿದೆ, ರೈತನ ನೋವು–ನಲಿವು, ಕಷ್ಟ–ಸುಖ ಎಲ್ಲಾ ಗೊತ್ತು. ನಾನು ಒಂದು ಕುಗ್ರಾಮದ ರೈತ ಕುಟುಂಬದಿಂದ ಬಂದವನು. ಸ್ವತ: ಕೃಷಿಕ. ಕಾನೂನು ಪದವಿ ಮುಗಿಸಿದ ಮೇಲೆ 5ವರ್ಷಗಳ ಕಾಲ ಕೃಷಿಯನ್ನು ಮಾಡಿದ್ದೇನೆ. ನನಗೆ ರೈತರ ಬಗ್ಗೆ ಅಪಾರವಾದ ಕಾಳಜಿ ಇದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಗಳೆ, ಎಲ್ಲರೂ ಮಾತನಾಡಿ ಮುಗಿಸಲಿ, ಸರ್ಕಾರ ಉತ್ತರ ಕೊಡುವಾಗ ಗಮನದಲ್ಲಿಟ್ಟುಕೊಳ್ಳಬೇಕು. ಇಡೀ ಕರ್ನಾಟಕದ ಜನತೆ ಸುವರ್ಣ ಸೌಧದ ಮುಂದೆ ಬಂದು ಹೋರಾಟ ಮಾಡುತ್ತಿದ್ದಾರೆ. ಸರ್ಕಾರ ಎರಡು ಗಂಟೆಯ ಒಳಗೆ ತನ್ನ ನಿರ್ಧಾರ ಏನು ಎನ್ನುವುದನ್ನು ತಿಳಿಸಬೇಕು. ನಂತರ ನಾವು ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎಂದು ಸರ್ಕಾರಕ್ಕೆ ರೈತರು ಗಡುವು ಕೊಟ್ಟಿದ್ದಾರೆ. ಈಗ ಒಂದು ಗಂಟೆಯಾಗುತ್ತಿದೆ. ಇಲ್ಲಿ ಚರ್ಚೆ ನಡೆಯುತ್ತಿರಲಿ, ಯಾರಾದರು ಒಬ್ಬರು ಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಎರಡು ಗಂಟೆಯವರೆಗೆ ಸಮಯ ಕೊಟ್ಟಿದ್ದಾರೆ ಎನ್ನುವ ಬಗ್ಗೆ ಮಾತನಾಡಿ. ನಿಮ್ಮ ಜೇಬಿಗೆ ತೊಂದರೆ ಕೊಡದಂತಹ ಸಮಯವಿದು, ನಿಮ್ಮ ಕೈಯಲ್ಲಿ ಇರುವ ಸಕ್ಕರೆಯನ್ನು treasury ಮುಖಾಂತರ ಕೊಟ್ಟು ಹರಾಜು ಹಾಕಿ ತುಂಬಿಸಿಕೊಳ್ಳುತ್ತೇವೆ ಎಂದು ಸಲಹೆ ಕೊಟ್ಟಿದ್ದೀರಿ. ಇದೇ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಮಾತನಾಡಿ, ಎರಡು ಗಂಟೆಯ ಒಳಗೆ ಖಂಡಿತವಾಗಿ ನಾವು ಹಣ ಬಿಡುಗಡೆ ಮಾಡಿದ್ದೇವೆ ಎನ್ನುವ ಘೋಷಣೆ ಮಾಡಿದರೆ, ಇಡೀ

ರಾಜ್ಯದಿಂದ ಬಂದಿರುವ ಕಬ್ಬು ಬೆಳೆ ಹೋರಾಟಗಾರರ ಹೋರಾಟಕ್ಕೆ ಈ ಸರ್ಕಾರ ಸ್ಪಂದಿಸುತ್ತಿದೆ ಎಂದು ಅರ್ಥವಾಗುತ್ತದೆ. ಇಲ್ಲದಿದ್ದರೆ ನೀವು ಏನಾದರೂ ಮಾಡಿಕೊಳ್ಳಿ, ಎಷ್ಟೇ ಧರಣಿ ಮಾಡಿ, ಎಷ್ಟೇ ಜನ ಆತ್ಮಹತ್ಯೆ ಮಾಡಿಕೊಳ್ಳಲಿ ನಾವು ರೈತರ ಪರ ಇದ್ದೇವೆ ಎನ್ನುವುದು ಬರೀ ಘೋಷಣೆಯಾಗುತ್ತದೆ ವಿನಃ ಆತ್ಮಹತ್ಯೆ ಪ್ರಕರಣಗಳು ಮುಂದುವರೆಯುತ್ತಲೇ ಇರುತ್ತವೆ. ರಾಜ್ಯದಲ್ಲಿ ಹೋರಾಟಗಳು ನಡೆಯುತ್ತಲೇ ಇರುತ್ತವೆ. ನಾನು ಈ ಸರ್ಕಾರಕ್ಕೆ ಒಂದು ಎಚ್ಚರಿಕೆಯನ್ನು ಕೊಡುತ್ತೇನೆ. ಎರಡೂವರೆ ವರ್ಷದಿಂದ ರೈತರು ತಾಳ್ಮೆಯಿಂದ, ಶಾಂತಿಯಿಂದ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಒಂದು ಹೋರಾಟ ಶಾಂತಿಯಿಂದ ನಡೆದರೆ, ಇನ್ನು ನಮ್ಮ ಜೀವನ ನಡೆಸಲು ಸಾಧ್ಯವೇ ಇಲ್ಲ ಎನ್ನುವ ನಿರಾಶೆ ರೈತರಿಗೆ ಬಂದಿದೆ. ನಿರಾಶೆ ಉಂಟಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ರೈತರು ತಾಳ್ಮೆಯಿಂದ ಹೋರಾಟ ಮಾಡುತ್ತಿದ್ದಾರೆ, ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಈ ಹೋರಾಟ ತಾಳ್ಮೆಯಿಂದ, ಶಾಂತಿಯಿಂದಲೇ ಮುಂದುವರೆಯುತ್ತದೆ ಎನ್ನುವ ಭಾವನೆಯನ್ನು ಇಟ್ಟುಕೊಳ್ಳಬೇಡಿ. ರೈತ ತನ್ನ ಮೈಯಲ್ಲಿ ಶಕ್ತಿ ಇರುವವರೆಗೆ ತಡೆದುಕೊಳ್ಳುತ್ತಾನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ರೈತರನ್ನು instigate ಮಾಡಿ ಆತ್ಮಹತ್ಯೆ ಮಾಡಿಕೊಳ್ಳಲು, ದಾಳಿ ಮಾಡುವಂತೆ, responsible leader ಆಗಿ ಈ ರೀತಿ ರೈತರನ್ನು instigate ಮಾಡುವುದರಿಂದ ಏನು ಸಂದೇಶ ಕೊಡಲು ಹೊರಟಿದ್ದಾರೆ. ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಮಾತನಾಡದೆ, ಪರಿಣಾಮ ನೆಟ್ಟಗಾಗುವುದಿಲ್ಲ ಎಂದು ಹೇಳಲು...

**ಶ್ರೀ ವಿ.ಸೋಮಣ್ಣ:–** ರೈತರು ಹೇಳಿರುವುದನ್ನು ಅವರು ಹೇಳಿದ್ದಾರೆ. ಅವರು ಹೇಳುತ್ತಿಲ್ಲ ಆ ಮಾತನ್ನು. ಸಭಾನಾಯಕರು ಯಾವ ರೀತಿಯಲ್ಲಿ ತೆಗೆದುಕೊಳ್ಳುತ್ತಾರೆ ನೋಡೋಣ. ನೀವು ಏಕೆ ಮಾತನಾಡುವುದು? ಉಗ್ರಪ್ಪನವರು ಮಂತ್ರಿಗಳೆ?

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ವಿ.ಸೋಮಣ್ಣ:–** ಅವರಿಗೆ ಕುಳಿತುಕೊಳ್ಳಲು ಹೇಳಿ, ಅವರೇನು ಮಂತ್ರಿಗಳಾ? ರೈತರು ಹೇಳಿರುವುದನ್ನು ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:–** ಅದು ಕಡತಕ್ಕೆ ಹೋಗುವುದು ಬೇಡ.

**ಸಭಾಪತಿಯವರು:–** ಅವರು ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿದ್ದಾರೆ. ನೀವು ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕು ಎನ್ನುವುದಾದರೆ ನನ್ನ ಅನುಮತಿಯನ್ನು ಪಡೆದು ಮಾತನಾಡಿ.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ.

**ಶ್ರೀ ವಿ.ಸೋಮಣ್ಣ:–** ಅವರಿಗೆ ಕುಳಿತುಕೊಳ್ಳಲು ಹೇಳಿ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:–** ಈಶ್ವರಪ್ಪನವರು ಹಿರಿಯ ನಾಯಕರು ಅವರಿಗೆ resonsibilities ಇದೆ.

**(ಗೊಂದಲ)**

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಮಾನ್ಯ ಸಭಾಪತಿಗಳೆ, ಸಮಸ್ಯೆಗಳ ಬಗ್ಗೆ ಚರ್ಚೆಯಾಗಲಿ.

**(ಗೊಂದಲ)**

**ಶ್ರೀ ವಿ.ಸೋಮಣ್ಣ:–** ರೈತರು ಗಡುವು ಕೊಟ್ಟಿದ್ದಾರೆ ಎಂದು ಅವರು ಹೇಳುತ್ತಿದಾರೆ. ಇದು ಬೆಂಕಿ ಇಡುವ ಕೆಲಸವೇ?

**(ಗೊಂದಲ)**

**ಶ್ರೀ ವೀರಣ್ಣ ಮತ್ತೀಕಟ್ಟಿ:–** ವಿಷಯದ ಬಗ್ಗೆ ಚರ್ಚೆಯಾಗಲಿ.

**ಶ್ರೀ ವಿ.ಸೋಮಣ್ಣ:–** ನಾವೇನು ಬೇಡ ಎಂದು ಹೇಳುತ್ತಿಲ್ಲ.

**(ಗೊಂದಲ)**

**ಡಾ||ಸಿ.ಎನ್. ಅಶ್ವಥ್‌ನಾರಾಯಣ:–** ಉಗ್ರಪ್ಪ ಸಚಿವರೇ? ಅವರು ಮಧ್ಯದಲ್ಲಿ ಮಾತನಾಡುವುದು? ಅವರೇನು ಸಂಬಂಧಪಟ್ಟ ಇಲಾಖೆಯ ಮಂತ್ರಿಗಳೇ?

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಹೇಳುತ್ತಾರೆ. ಅವರ ಅಭಿಪ್ರಾಯಗಳನ್ನು ನಾನು ಒಪ್ಪುವುದಿಲ್ಲ ಎನ್ನುವುದಾದರೆ, ನನ್ನ ಅನುಮತಿ ಪಡೆದು ಈ ಚರ್ಚೆಯಲ್ಲಿ ಭಾಗವಹಿಸಿ. ಅದಕ್ಕೆ ನಾನು ಅನುಮತಿಯನ್ನು ಕೊಡುತ್ತೇನೆ. ಅವರ ಅಭಿಪ್ರಾಯಗಳನ್ನೇ ಹೇಳಬಾರದು ಎನ್ನುವುದಾದರೆ ಕಷ್ಟವಾಗುತ್ತದೆ. ಅವರವರ ಅಭಿಪ್ರಾಯಗಳನ್ನು ಅವರು ಹೇಳಲಿ.

**(1.00 ಗಂಟೆ)**

**ಡಾ: ವೀರಣ್ಣ ಮತ್ತಿಕಟ್ಟಿ:–** ಮಾತನಾಡುವುದಕ್ಕೆಅಭ್ಯಂತರ ಏನೂ ಇಲ್ಲ, ಚರ್ಚೆಯಾಗಿ ಸಮಸ್ಯೆಯ ಮೂಲಕ್ಕೆ ಹೋಗಲಿ, ಆದರೆ there should not be a threatening. It is very bad.

**ಶ್ರೀ ಎಸ್.ಆರ್. ಪಾಟೀಲ್:–** ಏನೂ threatening ಅಲ್ಲ.

**ಡಾ||ಸಿ.ಎನ್. ಅಶ್ವಥ್‌ನಾರಾಯಣ:–** ಈಗ ಸತ್ತಿರುವುದಕ್ಕೆ ಅವರು ಕಾರಣವೇ?

**ಡಾ: ವೀರಣ್ಣ ಮತ್ತಿಕಟ್ಟಿ:–**ಅವರಿಗೆ ನಾಚಿಕೆಯಾಗುವುದಿಲ್ಲವೇ? ಗೊಬ್ಬರ ಮತ್ತು ಬೀಜ ಕೇಳುವುದಕ್ಕೆ ಬಂದವರಿಗೆ ಗುಂಡುಹೊಡೆದು ಕೊಂದರು. ಅವರನ್ನು ರೈತರೇ ಅಲ್ಲ ಎಂದರು, ಕಳ್ಳರು ಎಂದರು. ಅವರಿಗೆ ನಾಚಿಕೆ ಯಾಗುವುದಿಲ್ಲವೇ? ಈ ರಾಜ್ಯವನ್ನು ಕೊಳ್ಳೆ ಹೊಡೆದರು. ಅಧಿಕಾರತೆಗೆದುಕೊಂಡ ಮೇಲೆ ಅವರಿಗೆ ಬುದ್ಧಿ ಬಂದಿದೆ.ಈ ರಾಜ್ಯದಲ್ಲಿ ಆರೇಳು ವರ್ಷಅಧಿಕಾರಿ ಮಾಡಿ ಕೊಳ್ಳೆ ಹೊಡೆದರು.

**(ಗೊಂದಲ)**

**ಡಾ||ಸಿ.ಎನ್. ಅಶ್ವಥ್‌ನಾರಾಯಣ:–** ಮಾಲೀಕರಜೊತೆ ಶಾಮೀಲಾಗಿ ಲೂಟಿ ಹೊಡೆಯುತ್ತಿದ್ದಾರೆ.

**ಶ್ರೀ ನಾರಾಯಣ ಸಾ. ಭಾಂಡಗೆ:–** 65 ವರ್ಷಗಳ ಕಾಲ ದೇಶವನ್ನು ಲೂಟಿ ಹೊಡೆದರು.

**ಡಾ: ವೀರಣ್ಣ ಮತ್ತಿಕಟ್ಟಿ:–** 65 ವರ್ಷಗಳ ಕಾಲ ಈ ದೇಶವನ್ನು ಮುನ್ನಡೆಸಿದ್ದರಿಂದ ವಿಶ್ವದಲ್ಲಿಯೇ ಶ್ರೇಷ್ಠದೇಶವಾಗಿದೆ. ಇದು ಒಂದು ವರ್ಷದಲ್ಲಿ ಆಗಿದೆಯೇ? ಬುದ್ದಿ ಇಲ್ಲದೇ ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಭಾನುಪ್ರಕಾಶ್:–**ಈಗ instigate ಮಾಡಿ ಮಾತನಾಡುವ ಪರಿಸ್ಥಿತಿಗೆ ತಂದಿದ್ದುಯಾರು? ಎರಡು ವರ್ಷಗಳಿಂದ ಹಣಕೊಡದೇ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

**(ಗೊಂದಲ)**

**ಡಾ॥ಸಿ.ಎನ್. ಅಶ್ವಥ್‌ನಾರಾಯಣ:–** ಎರಡು ವರ್ಷಗಳಿಂದ ಸರ್ಕಾರಗೊರಕೆ ಹೊಡೆದುಕೊಂಡು ಕುಳಿತಿತ್ತು.

**ಶ್ರೀ ಎಸ್.ಆರ್. ಪಾಟೀಲ್:–** ನಾನು ಎಲ್ಲರಿಗೂ ಮನವಿ ಮಾಡುವುದೇನೆಂದರೆ,

**ಶ್ರೀ ಭಾನುಪ್ರಕಾಶ್:–** ಮಾನ್ಯ ಸಭಾಪತಿಯವರೇ, ತಾವು ನಿಯಮ 68ರಡಿಯಲ್ಲಿ ಚರ್ಚೆಗೆ ಅವಕಾಶ ಕೊಟ್ಟಿದ್ದು, ಅದರಲ್ಲಿ ಭ್ರಷ್ಟಾಚಾರದ ಬಗ್ಗೆ ಚರ್ಚೆ ಮಾಡಬೇಕೆಂದರೆ ಮಾಡೋಣ. ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಹಿರಿಯ ಸದಸ್ಯರು.

**ಡಾ: ವೀರಣ್ಣ ಮತ್ತಿಕಟ್ಟಿ:–**ಆವತ್ತಿನಜನಸಂಖ್ಯೆ ಎಷ್ಟು ಇತ್ತು? ಇವತ್ತು ದೇಶವನ್ನು ಶ್ರೇಷ್ಟ ದಿಕ್ಕನತ್ತ ತೆಗೆದುಕೊಂಡು ಹೋಗುವಲ್ಲಿ ಮಾರ್ಗದರ್ಶನ ಮಾಡಿ, ವಿಶ್ವದಲ್ಲಿಯೇ ಶ್ರೇಷ್ಟ ರಾಷ್ಟ್ರವನ್ನಾಗಿ ಮಾಡಿದ್ದೇವೆ. ಇವತ್ತು ಅವರು ಮಾತನಾಡುತ್ತಾರೆ.

**ಶ್ರೀ ಭಾನುಪ್ರಕಾಶ್:–** ನಾನು ಬಂದು 3 ವರ್ಷಗಳಾಗಿದ್ದು, ಮಾನ್ಯ ಸಭಾಪತಿಯವರು ಪ್ರಶ್ನೋತ್ತರ ವೇಳೆ ಬಿಟ್ಟು ಬೇರೆ ಎಂತಹ ಪರಿಸ್ಥಿತಿಯಲ್ಲಿ ತೆಗೆದುಕೊಂಡ ಉದಾಹರಣೆ ಇರಲಿಲ್ಲ. ಇವತ್ತು ಇಡೀ ರಾಜ್ಯದ ಪರಿಸ್ಥಿತಿ ನೋಡಿ ಅವಕಾಶ ಮಾಡಿಕೊಟ್ಟಿದ್ದಾರೆ.

**ಡಾ: ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ,...

**ಶ್ರೀ ಭಾನುಪ್ರಕಾಶ್:–** ನಾನು ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಅವರು senior. ನಾನು ಅವರಿಗೆ most junior. ಮಾನ್ಯ ಸಭಾಪತಿಯವರು ಕಬ್ಬಿನ ವಿಷಯ ಮತ್ತು ರೈತರ ಆತ್ಮಹತ್ಯೆ ಬಗ್ಗೆ ನಿಯಮ 68ರಡಿಯಲ್ಲಿ ಚರ್ಚೆಗೆ ಅವಕಾಶ ಕೊಟ್ಟಿದ್ದಾರೆ. ಭ್ರಷ್ಟಾಚಾರದ ಬಗ್ಗೆ ಚರ್ಚೆ ಮಾಡಬೇಕೆಂದರೆ ಮಾಡೋಣ. ಈಗ ತುರ್ತು ಏನೆಂದರೆ ರೈತರು ಸಾಯುತ್ತಿರುವುದರಿಂದ ಏನಾದರೂ ಪರಿಹಾರ ಕಂಡುಕೊಳ್ಳಬೇಕು. ಬೆಳಗಾವಿ ಅಧಿವೇಶನದಲ್ಲಿ ತಾವು ಅನುಮತಿ ಕೊಟ್ಟಿದ್ದೀರಿ. ಅದನ್ನು ಬಿಟ್ಟು ಚರ್ಚೆಯಲ್ಲಿ instigate ಮಾಡಿದ್ದಾರೆ, ಭ್ರಷ್ಟಾಚಾರ ಮಾಡಿದ್ದಾರೆ, ಜೈಲಿಗೆ ಹೋಗಿದ್ದಾರೆ ಎಂದರೆ ಯಾರ್‍ಯಾರು ಜೈಲಿಗೆ ಹೋಗಿದ್ದಾರೆ ಮತ್ತು ಯಾರು ಇನ್ನು ಜೈಲಿನಲ್ಲಿ ಇದ್ದಾರೆ ಎಂಬುದನ್ನು ಚರ್ಚೆ ಮಾಡೋಣ. ಈಗ ರೈತರ ಆತ್ಮಹತ್ಯೆ ಮತ್ತುಅವರಿಗೆ ಹಣಕೊಡುವ ಬಗ್ಗೆ ಇಚ್ಛೆ ಇದೆಯೇ? ಅದರ ಬಗ್ಗೆ ಚರ್ಚೆ ಮಾಡಿ. ರೈತರು ಆತ್ಮಹತ್ಯೆ ಮಾಡಿಕೊಳ್ಳದಂತೆ ಮಾಡಲು ಸಾಧ್ಯವಿದೆಯೇ ಎಂಬ ಬಗ್ಗೆ ಹೇಳಲಿ. ಅದನ್ನು ಬಿಟ್ಟು ಹಿಂದಿನ ವಿಷಯವನ್ನು ಏಕೆ ತೆಗೆಯುತ್ತಾರೆ?

**ಡಾ: ವೀರಣ್ಣ ಮತ್ತಿಕಟ್ಟಿ:–** ನಾನು ಅವರ ಮಾತನ್ನು ಒಪ್ಪುತ್ತೇನೆ. ಆದರೆ ನಾನು provoke ಮಾಡಲಿಲ್ಲ. ನಾನು ಎಲ್ಲರೂ ಮಾತನಾಡಿದ್ದರ ಬಗ್ಗೆ provoking language ಇರಬಾರದು ಎಂದು ಎಲ್ಲರ ಪರವಾಗಿ ಹೇಳಿದೆ. ಆದರೆ ಮಾನ್ಯ ಭಾಂಡಗೆಯವರು 65 ವರ್ಷ ಏನು ಮಾಡಿದರು ಎಂದು ಕೇಳಿದರು. ನಾವು ಏನು ಮಾಡಿದ್ದೇವೆ ಎಂದು ವಿಶ್ವಕ್ಕೆ ಗೊತ್ತಿದೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಬಹಳ ಪ್ರಮುಖವಾದ ಚರ್ಚೆ ನಡೆಯುತ್ತಿರುವುದರಿಂದ ವಿಷಯವು ವಿಷಯಾಂತರ ಆಗಬಾರದು. ಮಾನ್ಯ ವಿರೋಧ ಪಕ್ಷದ ನಾಯಕರು ರೈತರಿಗೆ ಆತ್ಮಸ್ಥೈರ್ಯವನ್ನು ಹೆಚ್ಚಿಸುವ ಕೆಲಸ ಆಗಬೇಕು ಎಂದು ಪ್ರಾರಂಭದಲ್ಲಿಯೇ ಹೇಳಿದರು. ಈ ಕೆಲಸವನ್ನು ಆಳುವ ಪಕ್ಷ, ವಿರೋಧ ಪಕ್ಷ ಸೇರಿದಂತೆ ಎಲ್ಲರೂ ಜೊತೆಯಲ್ಲಿದ್ದುಕೊಂಡು ಹೆಚ್ಚಿಸುವ ಕೆಲಸ ಆಗಬೇಕು ಎಂಬುದನ್ನು ಅಕ್ಷರಶಃ ಸ್ವಾಗತ ಮಾಡುತ್ತಿದ್ದೇನೆ. ಆದರೆ ಅವರು ಮಾತನಾಡುವಾಗ ಇದರ ಉತ್ತರ ಒಂದು ವೇಳೆ ಹಾಗೆ ಬಂದರೆ, ಹೀಗೆ ಬಂದರೆ ಎಂದೆಲ್ಲಾ ಹೇಳಿ, ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಕೃತಿ ಬೃಹದಾಕಾರವಾಗಿ ಬೆಳೆಯುತ್ತಿದೆ ಎನ್ನುವ ಭಾವನೆ ಬರುವಂತೆ ಹೇಳಿದಾಗ ಒಳ್ಳೆಯ ಸಂದೇಶ ಹೋಗುವುದಿಲ್ಲ. ನಾವೆಲ್ಲರೂ ಕೂಡಿಕೊಳ್ಳೋಣ. They are also part of government. ನಾವೆಲ್ಲರೂ ಜೊತೆಯಾಗಿ ಅನ್ನದಾತನ ಆತ್ಮಸ್ಥೈರ್ಯವನ್ನು ಹೆಚ್ಚಿಸುವ ಕೆಲಸದಲ್ಲಿ ಭಾಗಿಯಾಗಬೇಕಾಗಿದೆ. ಅವರು ಈ ರೀತಿ ಮಾಡಿಎಂದು ಸರ್ಕಾರಕ್ಕೆ ಒತ್ತಾಯ ಮಾಡಿ ಕೇಳಲಿ. ರೈತಪರ ಚಿಂತನೆ ಮಾಡುವ ಸರ್ಕಾರ ಸಕಾರಾತ್ಮಕವಾದ ಉತ್ತರ ಹೇಳಿ, ರೈತರ ಆತ್ಮಸ್ಥೈರ್ಯ ಹೆಚ್ಚಿಸಿ, ಆತ್ಮಹತ್ಯೆ ಆಗುವ ಕೆಲಸ ಆಗಬಾರದು. ಆದರೆ ನಮ್ಮ ಮಾತುಗಳು attempt to commit suicide ಎನ್ನುವಂತೆ ಪ್ರೇರಣೆ ಆಗಬಾರದು. ಈ ಸದನದಿಂದ ಅತ್ಯುತ್ತಮವಾದ ಸಂದೇಶ ಹೋಗಲಿ. ಸದನದ ಎಲ್ಲಾ ಗೌರವಾನ್ವಿತ ಸದಸ್ಯರು, there should not be abetment. ಅಂದರೆ ಆತ್ಯಹತ್ಯೆ ಮಾಡಿಕೊಳ್ಳಲು ಪ್ರೇರಣೆಯಾಗುವಂತಹ ಒಂದು ಶಬ್ದವನ್ನು ನಮ್ಮ ಬಾಯಿಂದ ಬರಬಾರದು ಎಂದರು. ನಾವೆಲ್ಲರೂ ಆತ್ಮಸ್ಥೈರ್ಯ ಹೆಚ್ಚಿಸುವಂತಹ ಕೆಲಸ ಮಾಡೋಣ. ಸರ್ಕಾರ ರೈತರ ಪರವಾಗಿದೆ. ರೈತರಿಗೆ ಹಿಂದೆಯೂ ನ್ಯಾಯ ಒದಗಿಸಿದ್ದೇವೆ, ಇಂದೂ ಒದಗಿಸುತ್ತೇವೆ ಮತ್ತು ಮುಂದೆಯೂ ಒದಗಿಸುತ್ತೇವೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಏಕೆ ಈ ಮಾತನ್ನು ಹೇಳಿದೆನೆಂದರೆ ಕರ್ನಾಟಕ ರಾಜ್ಯದ ರೈತರಿಗೆ ಆಡಳಿತ ಮತ್ತು ವಿರೋಧ ಪಕ್ಷ, ಪತ್ರಕರ್ತರು ಹಾಗೂ ಅಧಿಕಾರಿಗಳೆಲ್ಲರ ಪರವಾಗಿ ಮನವಿ ಮಾಡುವುದೇನೆಂದರೆ, ಎಂತಹ ಪರಿಸ್ಥಿತಿ ಬಂದರೂ ನಾವೆಲ್ಲರೂ ರೈತರ ಪರವಾಗಿದ್ದೇವೆ, ದಯವಿಟ್ಟು ಆತ್ಮಹತ್ಯೆ ಮಾಡಿಕೊಳ್ಳಬೇಡಿ ಎಂದು ಮನವಿ ಮಾಡುತ್ತೇನೆ. ಆದರೆ ಪ್ರಶ್ನೆ ಏನೆಂದರೆ ದಿನಾಂಕ 29/1/2013ರಂದು ಅಂದರೆ ಎರಡೂವರೆ ವರ್ಷ ಕಳೆಯಿತು, ರೈತ ಎಲ್ಲಿಯವರೆಗೂ ತಾಳ್ಮೆ ಇಟ್ಟು ಕೊಂಡಿರುತ್ತಾನೆ. ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಡುವುದಕ್ಕೂ ಒಂದು ವರ್ಷದ ಮೊದಲು ಕಬ್ಬನ್ನು ಬೆಳೆದಿದ್ದನು. ಎಲ್ಲೋ ಗೊಬ್ಬರ, ಬೀಜ ಮತ್ತು ಕೂಲಿ ಆಳುಗಳಿಗೆ ಕೊಡಲು ಸಾಲ ತಂದು ಕಬ್ಬನ್ನು ಹಾಕಿದ. ಅಂದರೆ ಮೂರುವರೆ ವರ್ಷಗಳಿಂದ ಆತ ತಾಳ್ಮೆಯಿಂದ ಇದ್ದಾನೆ. ಮಾನ್ಯ ಮುಖ್ಯಮಂತ್ರಿಯವರು ಎರಡೂವರೆ ವರ್ಷಗಳ ಹಿಂದೆ ಆಶ್ವಾಸನೆ ಕೊಟ್ಟಿದ್ದಕ್ಕಿಂತ ಹಿಂದೆ ಅಂದರೆ ಒಂದು ವರ್ಷದ ಹಿಂದೆ ಆತ ಆರ್ಥಿಕವಾಗಿ ಸಂಕಷ್ಟದಲ್ಲಿದ್ದಾನೆ. ಅವನು ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟರು, ಇನ್ನೇನು ಒಂದು ವಾರದಲ್ಲಿ ಹಣ ಸಿಗುತ್ತದೆ ಎಂಬ ವಿಶ್ವಾಸದಲ್ಲಿದ್ದನು. ಅವನು ಎಷ್ಟು ಸಮಯಎಂದು ಇರುತ್ತಾನೆ? ಆತನಿಗೂ ನಡೆಯಬೇಕಲ್ಲವೇ? ಸಾಲ ಕೊಟ್ಟವರು ಸುಮ್ಮನೆ ಬಿಡುವುದಿಲ್ಲ. ಸಾಲ ಕೊಟ್ಟವರು ರೈತ ಹೊಂದಿರುವ ಅರ್ಧ, ಒಂದೆ ಕರೆ ಜಮೀನನ್ನು ಜಪ್ತಿ ಮಾಡುವುದಕ್ಕೆ ಬರುತ್ತಾರೆ. ಮನೆಯಲ್ಲಿನ ಹೆಣ್ಣು ಮಕ್ಕಳ ಸಣ್ಣಪುಟ್ಟ ಬಂಗಾರ ಇದ್ದರೆ ಹರಾಜು ಹಾಕಿಸುತ್ತಾರೆ. ಒಂದು ಕಡೆ ಅಪಮಾನ ಮತ್ತೊಂದು ಕಡೆ ತಿನ್ನುವುದಕ್ಕೆ ಮನೆಯಲ್ಲಿ ಅನ್ನ ಇಲ್ಲ. ಮೂರೂವರೆ ವರ್ಷಗಳಿಂದ ತಾಳ್ಮೆಯಿಂದ ಇದ್ದ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಇದರ ಬಗ್ಗೆ ಮಾತನಾಡುವಾಗು nstigate ಮಾಡುವುದು, ಅವರಿಗೆ ಸ್ವಲ್ಪತೊಂದರೆ ಕೊಡಬೇಕೆಂಬ ಉದ್ದೇಶ ನನಗೆ ಇಲ್ಲ. ರೈತರಿಗೆ ಮತ್ತೆ ಮತ್ತೆ ಕಾಲಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳಬೇಡಿ ಎಂದು ಹೇಳುತ್ತೇನೆ. ಅವರ ಪರಿಸ್ಥಿತಿ ಹಾಗಿದೆ. ಮಾನ್ಯ ಮುಖ್ಯಮಂತ್ರಿಯವರ ಮಾತು ಹೋಯಿತು, ಮಾನ್ಯ ಸಕ್ಕರೆ ಸಚಿವರುಎಲ್ಲಾ ಸಕ್ಕರೆ

ಕಾರ್ಖಾನೆಗಳಿಗೆ ರೈತರ ಹಣ ಬಿಡುಗಡೆ ಮಾಡಲಿಲ್ಲ ಎಂದರೆಕ್ರಮ ತೆಗೆದುಕೊಳ್ಳುತ್ತೇವೆ, ಬೀಗ ಹಾಕುತ್ತೇವೆ, ಜೈಲಿಗೆ ಕಳುಹಿಸುತ್ತೇವೆ ಎಂದುಒಂದು ಸುತ್ತೋಲೆ ಕಳುಹಿಸುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಹೊರಡಿಸಿದ ಸುತ್ತೋಲೆಯನ್ನು ತೆಗೆದುಕೊಂಡ ಸಕ್ಕರೆ ಮಾಲೀಕರಿಗೆ ಸರ್ಕಾರದ ಬಗ್ಗೆ ಎಷ್ಟರ ಮಟ್ಟಿಗೆಗೌರವಇದೆ ಎಂದರೆ, ಆ ಸುತ್ತೋಲೆಯನ್ನು ತೆಗೆದುಕೊಂಡು ಕಿವುಚಿ ಕಸದಬುಟ್ಟಿಗೆ ಹಾಕಿದರು. ಇದು ಸರ್ಕಾರದ ಸುತ್ತೋಲೆಗೆ ಸಕ್ಕರೆ ಮಾಲೀಕರು ತೋರುವ ಗೌರವವಾಗಿದೆ. ಇದರ ಜೊತೆಗೆ ಕೋರ್ಟಿಗೆ ಸಹ ಹೋಗಿದ್ದಾರೆ. ಕೋರ್ಟು 'ಮೊದಲು ಸಕ್ಕರೆ ಮಾಲೀಕರಿಂದ ಬಾಕಿ ವಸೂಲಿ ಮಾಡಿರೈತರಿಗೆಕೊಡಿ' ಎಂದು ಆದೇಶ ಮಾಡಿತ್ತು. ಇದು ನಡೆದು ಎರಡೂವರೆ ವರ್ಷವಾಗಿದೆ. ಕೋರ್ಟಿನ ತೀರ್ಪಿಗೆ ಸರ್ಕಾರ ಬೆಲೆ ಕೊಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಮಾತಿಗೆ ಸ್ವತಃ ಮಂತ್ರಿಗಳೇ ಬೆಲೆ ಕೊಡುತ್ತಿಲ್ಲ. ಸ್ವತಃ ಮಾನ್ಯ ಮುಖ್ಯಮಂತ್ರಿಗಳೇ 'ನಾವು ಬಾಕಿ ಹಣವನ್ನು ವಸೂಲಿ ಮಾಡಿಕೊಡುತ್ತೇವೆ' ಎನ್ನುವ ಹೇಳಿಕೆಯನ್ನು ನೀಡುತ್ತಾರೆ. ಇದರಿಂದ ಜನರಿಗೆ ಸ್ವಲ್ಪ ವಿಶ್ವಾಸ ಉಂಟಾಯಿತು. ಇತ್ತೀಚೆಗೆ ಸಕ್ಕರೆ ಲಾಬಿ ನಡೆಯುತ್ತಿದೆ. ಸಚಿವ ಸಂಪುಟದಲ್ಲಿ ಸಕ್ಕರೆ ಮಾಲೀಕರು ಇದ್ದಾರೆ. ಅವರ ಲಾಬಿಯಲ್ಲಿ ಸರ್ಕಾರ ಇದೆ. ಕಾಂಗ್ರೆಸ್ ಮತ್ತು ಬಿ.ಜೆ.ಪಿ. ಶಾಸಕರ ಸಕ್ಕರೆ ಕಾರ್ಖಾನೆಗಳಿವೆ. ಅವರ ಲಾಬಿಯಲ್ಲಿ ಸರ್ಕಾರ ಇದೆ. ಸಕ್ಕರೆಯದೇ ಲಾಬಿಯಾಗಿದೆ. ಸಕ್ಕರೆ ಲಾಬಿಗೆ ಯಾವುದೇ ಪಕ್ಷಭೇದವಿಲ್ಲ. ಸಕ್ಕರೆ ಲಾಬಿಯ ಹಿಡಿತದಲ್ಲಿ ಸರ್ಕಾರಇದೆ. ಇವತ್ತು ಈ ಸರ್ಕಾರ 'ನಾವು ರೈತರ ಪರವಾಗಿದ್ದೇವೆ. ನಾವು ಪ್ರಾಮಾಣಿಕವಾಗಿದ್ದೇವೆ, ಯಾರನ್ನೂ ಬಿಡುವುದಿಲ್ಲ' ಎಂದು ಹೇಳಿಕೊಂಡು ಸಕ್ಕರೆಯನ್ನು ವಶಪಡಿಸಿ ಕೊಳ್ಳುವುದಕ್ಕೆ ಹೊರಟಿದೆ. ಎರಡೂವರೆ ವರ್ಷಗಳ ಹಿಂದೆಯೇ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಘೋಷಣೆ ಮಾಡಿದ ಮೇಲೆ, ಕೋರ್ಟ್ ಆರ್ಡರ್ ಆದ ಮೇಲೆಯೂ ಈ ಸರ್ಕಾರಯಾಕೆನಿದ್ದೆ ಮಾಡುತ್ತಿತ್ತು? ಸಕ್ಕರೆ ಕಾರ್ಖಾನೆಯ ಮಾಲೀಕರ ಲಾಬಿಯಲ್ಲಿ ಸರ್ಕಾರ ಇರಲಿಲ್ಲವೇ? ವಿಧಾನಮಂಡಲದ ಅಧಿವೇಶನ ಜೂನ್ 29ನೇ ತಾರೀಖಿನಂದು ಪ್ರಾರಂಭವಾಗುತ್ತದೆ. ಬಿ.ಜೆ.ಪಿ,ಜೆ.ಡಿ(ಎಸ್) ಮತ್ತುರೈತ ಸಂಘಗಳು ಹೋರಾಟವನ್ನು ಮಾಡುತ್ತವೆಂದು ಗೊತ್ತಾದ ಮೇಲೆ ತರಾತುರಿಯಲ್ಲಿ ಸರ್ಕಾರ ಸಚಿವ ಸಂಪುಟ ಸಭೆಯನ್ನು ಕರೆಯುತ್ತದೆ. ಒಂದು ಒಳ್ಳೆಯ ಕೆಲಸವನ್ನು ಮಾಡಿರುವುದಕ್ಕೆ ನಾನು ಇವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. 'ಉಗ್ರಾಣದಲ್ಲಿ ಸಂಗ್ರಹವಾಗಿರುವ ಸಕ್ಕರೆಯನ್ನು ಮುಟ್ಟುಗೋಲು ಹಾಕಿಕೊಳ್ಳಿ' ಎಂದು ಸಚಿವ ಸಂಪುಟ ಸಭೆಯಲ್ಲಿ ಸಲಹೆ ನೀಡಿದ ಪುಣ್ಯಾತ್ಮರಿಗೆ ನಾನು ಕೈಮುಗಿಯುತ್ತಿದ್ದೇನೆ. ಸಚಿವ ಸಂಪುಟದಲ್ಲಿರುವ ನಾಲ್ಕು ಜನ ಸಚಿವರಿಗೆ ಆ ಧೈರ್ಯವಿದೆ. ಅನಂತರ ಸಕ್ಕರೆ ಕಾರ್ಖಾನೆಗಳಲ್ಲಿ ಇದ್ದ ಸಕ್ಕರೆಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು.

ಸನ್ಮಾನ್ಯ ಸಭಾಪತಿಯವರೇ, ಹಿರಿಯರಾದ ಮಾನ್ಯ ಶಾಮನೂರು ಶಿವಶಂಕರಪ್ಪನವರ ಬಗ್ಗೆ ವೈಯಕ್ತಿಕವಾಗಿ ನಾನು ಟೀಕೆ ಮಾಡುತ್ತಿಲ್ಲ. ಆದರೆ, ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ನೀಡಿದ ಮರುದಿವಸವೇ ಅವರ ಹೇಳಿಕೆಯನ್ನು ಟೀಕೆ ಮಾಡಿ, 'ಯಾವುದೇ ಕಾರಣಕ್ಕೂ ಬಾಕಿ ಕೊಡುವುದಕ್ಕೆ ಆಗುವುದಿಲ್ಲ' ಎಂದು ಹೇಳುತ್ತಾರೆ. ಸ್ವಾಭಿಮಾನ ಇದ್ದಂತಹ ಮುಖ್ಯಮಂತ್ರಿಗಳಾಗಿದ್ದರೆ, 'ನನಗೆ ಕುರ್ಚಿಯ ಬಗ್ಗೆ ಆಸಕ್ತಿ ಇಲ್ಲ. ಮುಖ್ಯಮಂತ್ರಿಕುರ್ಚಿಯೇ ನನಗೆ ಎಲ್ಲವೂ ಅಲ್ಲ. ರೈತರ ಪರ ಮಾಡಿದ ಆದೇಶವನ್ನು ಸಕ್ಕರೆ ಕಾರ್ಖಾನೆಯ ಮಾಲೀಕರ ಪರವಾಗಿ ಮಾತನಾಡಿರುವವರ ರಾಜಿನಾಮೆಯನ್ನು ತೆಗೆದುಕೊಳ್ಳುತ್ತೇನೆ, ಇವರನ್ನು ಸಚಿವ ಸಂಪುಟದಿಂದ ಹೊರಗೆ ಹಾಕುತ್ತೇನೆ' ಎಂದು ಹೇಳಿದ್ದರೆ ಇಡೀ ಕರ್ನಾಟಕದ ಜನವರು ಇವರಿಗೆ ಶಹಬಾಷ್ ಹೇಳುತ್ತಿದ್ದರು. ಆದರೆ, ಮಾನ್ಯ ಮುಖ್ಯಮಂತ್ರಿಗಳು ಆ ಕೆಲಸವನ್ನು ಮಾಡಲಿಲ್ಲ. ಅವರಿಗೆ ಏನಾಗಿದೆ ಎನ್ನುವುದು ಗೊತ್ತಿಲ್ಲ. ಯಾರು ಏನು ಬೇಕಾದರೂ ಹೇಳಿ ಕೊಳ್ಳಬಹುದು, ಇನ್ನೂ ಮೂರು ವರ್ಷ

ನನ್ನ ಕುರ್ಚಿ ಅಲುಗಾಡಬಾರದು ಎನ್ನುವ ಭಾವನೆಯನ್ನು ತಳೆದಿದ್ದಾರೆ. ಯಾವುದೋ ಸಂದರ್ಭದಲ್ಲಿ ಲಾಟರಿ ಹೊಡೆದು ಅವರು ಮುಖ್ಯಮಂತ್ರಿಗಳಾಗಿ ಬಿಟ್ಟಿದ್ದಾರೆ.

**(ಗೊಂದಲ)**

**ಶ್ರೀಆರ್.ವಿ.ವೆಂಕಟೇಶ್(ಸರ್ಕಾರದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ,ರಾಜಕೀಯತೆವಲಿಗಾಗಿ ಈ ರೀತಿ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ತಾವು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸ್ವಲ್ಪ ಹೇಳಬೇಕಾಗುತ್ತದೆ. ಚರ್ಚೆಗಳ ಮೇಲೆ ತಾವು ನಿಯಂತ್ರಣವನ್ನು ಹೊಂದಬೇಕಾಗುತ್ತದೆ. ಶಾಸಕಾಂಗ ಪಕ್ಷದ ನಾಯಕರಾಗಿ ಮಾನ್ಯ ಮುಖ್ಯಮಂತ್ರಿಗಳು ಆಯ್ಕೆಯಾಗಿದ್ದಾರೆ, ಲಾಟರಿಯಲ್ಲಿಎತ್ತಿ ಅವರನ್ನು ಮುಖ್ಯಮಂತ್ರಿ ಮಾಡಿಲ್ಲ. ನಮ್ಮ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಕರ್ನಾಟಕ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ವಿರೋಧ ಪಕ್ಷದವರಿಗೆ ಏನೋ ನೆನಪಾಗುತ್ತಿದೆ ಎಂದು ಗೊತ್ತಾಗುತ್ತಿದೆ. ಬಹುಶಃ ಇವರುಆ ರೀತಿ ಮಾಡಿರಬಹುದು. ಮಾನ್ಯ ಸಿದ್ದರಾಮಯ್ಯನವರನ್ನು ನಮ್ಮ ಪಕ್ಷದ ನಾಯಕರಾಗಿ ಅವಿರೋಧವಾಗಿ ಅವರನ್ನು ಆಯ್ಕೆ ಮಾಡಿದ್ದೇವೆ. ಲಾಟರಿ ಹೊಡೆದು ಮುಖ್ಯಮಂತ್ರಿಗಳಾಗಿದ್ದಾರೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ. ಅದು ಸರಿಯಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ನಾನು ಆ ಅಭಿಪ್ರಾಯದಲ್ಲಿ ಹೇಳಲಿಲ್ಲ. ಲಾಟರಿ ಹೊಡೆದಂತೆ ಆಯಿತು ಎಂದು ಹೇಳಿದೆ.

**ಸಭಾಪತಿಯವರು:–** ಅವರ ಅಭಿಪ್ರಾಯವನ್ನು ಅವರು ಹೇಳುತ್ತಿದ್ದಾರೆ. ನಿಮ್ಮ ಅಭಿಪ್ರಾಯವನ್ನು ನೀವು ಹೇಳುತ್ತಿದ್ದೀರಿ.

**(ಗೊಂದಲ)**

**ಡಾ॥ ಶರಣಪ್ರಕಾಶ್‌ರುದ್ರಪ್ಪ ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಆ ಪದಗಳ ಪ್ರಯೋಗ ಈ ರಾಜ್ಯದ ಜನತೆಗೆ ಮಾಡಿರುವ ಅಪಮಾನವಾಗಿದೆ. ಜನರಿಂದ ಆಯ್ಕೆಯಾಗಿರುವ ನಾಯಕರಿಗೆ ಲಾಟರಿ ಹೊಡೆಯಿತು ಎನ್ನುವುದು ಸರಿಯಲ್ಲ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಅವಮಾನವಾಗಿದೆ. ಅವರು ಕ್ಷಮೆ ಕೇಳಬೇಕು.

**(ಗೊಂದಲ)**

**ಶ್ರೀ ಮತ್ತಿಕಟ್ಟಿ ವೀರಣ್ಣ :–** ಸನ್ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ ಸಾರ್ವತ್ರಿಕ ಚುನಾವಣೆ. .

**ಸಭಾಪತಿಯವರು:–** ಈಗ ಲಾಟರಿಯ ಬಗ್ಗೆ ಚರ್ಚೆ ನಡೆಯುತ್ತಿಲ್ಲ. ರೈತರ ಬಗ್ಗೆ ಮತ್ತು ಕಬ್ಬಿನ ಬಾಕಿ ನೀಡುವ ಬಗ್ಗೆ ಚರ್ಚೆ ನಡೆಯುತ್ತಿದೆ. ಮಾನ್ಯ ವೀರಣ್ಣ ಮತ್ತಿಕಟ್ಟಿಯವರೇ, ತಮಗೂ ಅವಕಾಶವನ್ನು ನೀಡುತ್ತೇನೆ. ಆಗ ತಾವು ಮಾತನಾಡಿ.

**(ಗೊಂದಲ)**

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಸನ್ಮಾನ್ಯ ಸಭಾಪತಿಯವರೇ, ಸಾರ್ವತ್ರಿಕ ಚುನಾವಣೆ ಮಾಡಿ ಆ ಚುನಾವಣೆಯಲ್ಲಿ ಜನರ ಆದೇಶವನ್ನು ಪಡೆದುಕೊಂಡು, ಮಾನ್ಯ ಸಿದ್ದರಾಮಯ್ಯನವರ ನಾಯಕತ್ವದಲ್ಲಿ ಬಹುಮತವನ್ನು ಪಡೆದುಕೊಂಡು ಸರ್ಕಾರವನ್ನು ರಚನೆ ಮಾಡಲಾಗಿದೆ. ಲಾಟರಿ ಹೊಡೆದದ್ದು ಮಾನ್ಯ ಡಿ.ವಿ.ಸದಾನಂದಗೌಡರಿಗೆ ಮತ್ತು ಮಾನ್ಯಜಗದೀಶ್ ಶೆಟ್ಟರ್‌ಅವರಿಗೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಯಾವರೀತಿಯಲ್ಲಿ ಲಾಟರಿ ಎನ್ನುವುದನ್ನು ಹೇಳುತ್ತೇನೆ.

**(ಗೊಂದಲ)**

**ಶ್ರೀ ಮತ್ತಿಕಟ್ಟಿ ವೀರಣ್ಣ :–** ಸಭಾಪತಿಯವರೇ, ಯಡಿಯೂರಪ್ಪನವರು ಬಹುಮತವನ್ನು ಗಳಿಸಿ ಕೊಳ್ಳಲಿಲ್ಲ. ನಾಚಿಕೆಯಾಗಬೇಕು ಅವರಿಗೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ., ಕೆಜೆ.ಪಿ. ಎಂದು ಹೊಡೆದು ಹೋದಕಾರಣ ಅವರು ಅಧಿಕಾರಕ್ಕೆ ಬಂದವರು. ಲೋಕಸಭೆ ಚುನಾವಣೆಯಲ್ಲಿ ನಾವೆಲ್ಲರೂ ಒಂದಾದೆವು. ಆಗ ನಮಗೆ 14 ಸ್ಥಾನಗಳು ಬಂದವು, ಕಾಂಗ್ರೆಸ್‌ಗೆ ಕೇವಲ9 ಸ್ಥಾನಗಳು ಮಾತ್ರ ದೊರೆತವು.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಲಾಟರಿ ಎಂದ ಕೂಡಲೇ ಅವರುಗಳು ಯಾಕೆ ಎದ್ದು ನಿಲ್ಲುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಕ್ರಿಕೆಟ್ ಲಾಟರಿ, ಬೆಟ್ಟಿಂಗ್ ಲಾಟರಿಗಳೂ ಇವೆ.

ಸನ್ಮಾನ್ಯ ಸಭಾಪತಿಯವರೇ, ಸಕ್ಕರೆ ಲಾಬಿಯಿಂದ ಇವತ್ತು ಆತ್ಮಹತ್ಯೆಗಳು ನಡೆಯುತ್ತಿವೆ. ಸಕ್ಕರೆ ಲಾಬಿಯ ಪ್ರಭಾವ ಸರ್ಕಾರದ ಮೇಲೆ ಬಿದ್ದಿದೆ. ಮಾನ್ಯ ಮುಖ್ಯಮಂತ್ರಿಗಳು ಕಬ್ಬು ಬೆಳೆಗಾರರ ಬಾಕಿ ಹಣ ಪಾವತಿಯ ಬಗ್ಗೆ ಘೋಷಣೆ ಮಾಡಿ ಸುಮಾರು ಎರಡೂವರೆ ವರ್ಷಗಳಾಗಿವೆ.

**ಶ್ರೀ ದಿನೇಶ್‌ಗುಂಡೂರಾವ್:–** ಸನ್ಮಾನ್ಯ ಸಭಾಪತಿಯವರೇ, ಎರಡೂವರೆ ವರ್ಷಗಳ ಹಿಂದೆ ನಮ್ಮ ಪಕ್ಷದ ಸರ್ಕಾರ ಈ ರಾಜ್ಯದಲ್ಲಿ ಅಧಿಕಾರದಲ್ಲಿಯೇ ಇರಲಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಇವರು ಅಧಿಕಾರಕ್ಕೆ ಬಂದು ಒಂದೂವರೆ ವರ್ಷಗಳಾಗಿರಬಹುದು. ಅದೇನು ಕಡಿಮೆ ಅವಧಿಯಲ್ಲ. ಇವರು ಅಧಿಕಾರಕ್ಕೆ ಬಂದು ಒಂದೂವರೆ ಫ಼ರ್ಷವಾಗಿರಬಹುದು. ಅದಕ್ಕೂ ಒಂದು ವರ್ಷದ ಮುಂಚೆ ರೈತರುಕಬ್ಬು ಬೆಳೆದಿದ್ದರು.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರುಅವಧಿಯನ್ನುಯಾವರೀತಿಯಲ್ಲಿ ಹೇಳುತ್ತಿದ್ದಾರೆ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. 2013–14ನೇ ಸಾಲಿನಲ್ಲಿ ನುರಿಸಿದ ಕಬ್ಬಿಗೆ ಬೆಲೆಯನ್ನು ನಿಗದಿ ಮಾಡಲಾಗಿತ್ತು. ನಮ್ಮ ಸರ್ಕಾರಅಧಿಕಾರಕ್ಕೆ ಬಂದುಇನ್ನೂಎರಡೂವರೆ ವರ್ಷಗಳಾಗಿಲ್ಲ.ಅಂಕಿಸಂಖ್ಯೆಗಳನ್ನು ಸರಿಯಾಗಿ ನೋಡಿ ಹೇಳಬೇಕಾಗುತ್ತದೆ. ತಪ್ಪು ಅಂಕಿ ಅಂಶಗಳು ಕಡತಕ್ಕೆ ಹೋಗಬಾರದು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಅವರು ಅಧಿಕಾರಕ್ಕೆ ಬಂದು ಒಂದೂವರೆ ವರ್ಷಗಳಾಗಿರಬಹುದು.

**ಶ್ರೀ ಆರ್.ವಿ.ವೆಂಕಟೇಶ್:–** ಸನ್ಮಾನ್ಯ ಸಭಾಪತಿಯವರೇ, ಅವರು ಹೇಳುತ್ತಿರುವುದು ನಿಜ. ಎರಡೂವರೆ ವರ್ಷಗಳ ಹಿಂದೆ ಇದ್ದಂತಹ ಸರ್ಕಾರ ಲಾಬಿಗೆ ಮಣಿದಿತ್ತು.

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರಿಗೆ ಅರಳೋ ಮರಳೋ ಆಗುತ್ತಿದೆ. ಜನರಲ್ಲಿ ಏನೋ ಒಂದು ರಾಜಕಾರಣ ಬೆರಸಬಹುದು ಎಂದು ಅವರು ಯೋಚನೆ ಮಾಡಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಸಕ್ಕರೆ ಲಾಬಿಯಿಂದ ಹೊರಗೆ ಬರಬೇಕೆನ್ನುವುದು ನಾನು ಪ್ರಾರ್ಥನೆಯಾಗಿದೆ. ಸಕ್ಕರೆ ಕಾರ್ಖಾನೆಯಲ್ಲಿರುವ ಸಕ್ಕರೆಯನ್ನು ಹರಾಜು ಮಾಡುವುದಕ್ಕೆತಡ ಮಾಡಿದರೆ ಸಕ್ಕರೆ ಲಾಬಿ ನಡೆಸುವವರು ಯಾವುದೋ ರೂಪದಲ್ಲಿ ಲಾಬಿ ನಡೆಸಿ ಆ ಸಕ್ಕರೆಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ.

**ಶ್ರೀ ಐವನ್ ಡಿ'ಸೋಜ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಸಕ್ಕರೆ ಲಾಬಿ, ಸಕ್ಕರೆ ಲಾಬಿ ಎಂದು ಹೇಳುತ್ತಿದ್ದರೆ ಅರ್ಥವೇನು?

**ಸಭಾಪತಿಯವರು:–** ಮಾನ್ಯ ಡಿಸೋಜಾರವರೇ, ಅವರು ಏನು ಹೇಳಬೇಕು ಎನ್ನುವುದನ್ನು ನೀವು ಯಾಕೆ ಹೇಳುತ್ತಿದ್ದೀರಿ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಇದರಲ್ಲಿ ಮಾನ್ಯ ಉಮೇಶ್‌ಕತ್ತಿಯವರು ಮತ್ತು ಮಾನ್ಯ ಮುರುಗೇಶ್ ನಿರಾಣಿಯವರು ಇದ್ದಾರೆ. ಅವರನ್ನು ಹಿಡಿತದಲ್ಲಿ ಇಟ್ಟು ಕೊಳ್ಳುವುದಕ್ಕೆ ಇವರಿಗೆ ಯೋಗ್ಯತೆ ಇಲ್ಲವೇ? ಅವರ ಲಾಬಿಯಲ್ಲಿ ಬಿದ್ದುಇವರು ಸಾಯುತ್ತಿದ್ದಾರೆ. ಅವರನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕೆ ಇವರಿಗೆ ಯೋಗ್ಯತೆ ಇಲ್ಲವೆ? ಅವರು ಹೇಳಿದಂತೆ ಕೇಳಿಕೊಂಡು ಬಿದ್ದಿರುತ್ತಾರೆ. ಇವರುಗಳು ಯಾಕೆ ಲಾಬಿಯ ಪರವಾಗಿ ಮಾತನಾಡುತ್ತಿದ್ದಾರೆ? ನಾನು ಮೊದಲೇ ಹೇಳಿದಂತೆ, ಬಿ.ಜೆ.ಪಿ.ಜೆ.ಡಿ(ಎಸ್) ಮತ್ತುಕಾಂಗ್ರೆಸ್ ಪಕ್ಷಗಳಿಗೆ ಅವಮಾನ ಮಾಡುವುದು ಬೇಡ. ನಾನು ಏತಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಈ ಸರ್ಕಾರ ಲಾಬಿಯ ಹಿಡಿತದಲ್ಲಿಇದೆ. ಇವತ್ತು ಸೀಜ್ ಮಾಡಿರುವ ಸಕ್ಕರೆಯನ್ನು ಹರಾಜು ಮಾಡದೇ ಸುಮ್ಮನೆ ಇಟ್ಟುಕೊಂಡರೆ, ಖಂಡಿತವಾಗಿಯೂ ಆ ಸಕ್ಕರೆ ಉಳಿಯುವುದಿಲ್ಲ.

ನಿಮಗೆ ಏಕೆ ತಕ್ಷಣ ನಿಮ್ಮ ಖಜಾನೆಯಿಂದ ಹಣವನ್ನು ಕೊಡಿ ಎಂದು ನಿಮಗೆ ಏಕೆ ಹೇಳುತ್ತಿದ್ದೇವೆಂದರೆ, ಹೊಟ್ಟೆ ನೋವು ಬಂದಾಗ ಔಷಧಿಯನ್ನು ತೆಗೆದುಕೊಳ್ಳಬೇಕೆಂದು ಯೋಚನೆ ಮಾಡುತ್ತಾರೆ. ಇದರಲ್ಲಿ ಸರ್ಕಾರದ ಹಣವನ್ನು ವಿನಿಯೋಗಿಸಿದಾಗ ಸರ್ಕಾರ ಅದರ ಬಗ್ಗೆ ಯೋಚನೆ ಮಾಡುತ್ತದೆ. ಈಗ ಅದು ಸರ್ಕಾರದ ದುಡ್ಡಲ್ಲ, ಅದು ರೈತರ ದುಡ್ಡು. ಈಗ ಹೇಗಾದರೂ ನಡೆಯಲಿ, ಯಾವ ಸಕ್ಕರೆ ಕಾರ್ಖಾನೆಯಾದರೂ ಆನಂದವಾಗಿರಲಿ, ನಮಗೇನಂತೆ ಎನ್ನುವ ರೀತಿಯಲ್ಲಿ ಇದ್ದೀರಿ. ಸರ್ಕಾರವೇನಾದರೂ ಸಹ ತನ್ನ ಖಜಾನೆಯಿಂದ ಹಣವನ್ನು ಕೊಟ್ಟಾಗ ಆ ಸಕ್ಕರೆಯನ್ನು ಮಾರಾಟ ಮಾಡುವುದಕ್ಕೆ ತಕ್ಷಣವೇ ಗಮನವನ್ನು ಕೊಡುತ್ತದೆ. ನಾನು ಅದಕ್ಕಾಗಿ ಪ್ರಾರ್ಥನೆ ಮಾಡುವುದೇನೆಂದರೆ, ನಾವು ಸಕ್ಕರೆಯನ್ನು ಮುಟ್ಟುಗೋಲು ಹಾಕಿಕೊಂಡೆವು, ಆದರೆ ಅವರು ಹೇಗೋ ಬಿಡಿಸಿಕೊಂಡು ಹೋದರು, ನಾವೇನು ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ನಾವು ರೈತರ ಪರ, ನಾವು ಯಾವತ್ತೂ ರೈತರನ್ನು ಬಿಟ್ಟುಕೊಡುವುದಿಲ್ಲ. ಅವರು ಹೇಗೋ ಸಕ್ಕರೆಯನ್ನು ತೆಗೆದುಕೊಂಡು ಹೋದರು, ನಾವೇನು ಮಾಡೋಣ ಎನ್ನುವ ಅಸಹಾಯಕ ಪರಿಸ್ಥಿತಿ ನಾಳೆಯ ದಿವಸ ಬರುತ್ತದೆ. ಆದ್ದರಿಂದ ದಯಮಾಡಿ ಸರ್ಕಾರ ತಕ್ಷಣವೇ ಖಜಾನೆಯಿಂದ ಹಣವನ್ನು ಬಿಡುಗಡೆ ಮಾಡಿದರೆ ಆಗ ಈ ಸರ್ಕಾರಕ್ಕೆ ರೈತರ ಬಗ್ಗೆ ವಿಶ್ವಾಸವಿದೆ ಎನಿಸುತ್ತದೆ. ಇವತ್ತು ರೈತನಿಗೆ ಆತ್ಮವಿಶ್ವಾಸವನ್ನು ತುಂಬಿ ಅವನ ಸಾವನ್ನು ತಡೆಯಬೇಕಾದರೆ ಇನ್ನೇನೇನು ಮಾಡಬೇಕೆಂದು ಈ ನಿಮಿಷದವರೆವಿಗೂ ಈ ಸರ್ಕಾರದಲ್ಲಿ ಯಾವುದೇ ಚಿಂತನೆ ನಡೆದಿಲ್ಲ. ರೈತ ಸತ್ತರೆ ಎಷ್ಟು ಪರಿಹಾರವನ್ನು ಕೊಡುತ್ತಾರೆ? ಇವರು ಎಷ್ಟು ಬೇಕಾದರೂ ಪರಿಹಾರವನ್ನು ಕೊಡುತ್ತಾರೆ. ಒಬ್ಬೊಬ್ಬ ರೈತ ಸತ್ತಾಗ

ಒಂದೊಂದು ರೀತಿಯ ಪರಿಹಾರವನ್ನು ಕೊಡುತ್ತಾರೆ. ಇಲ್ಲಿ ಬೆಳಗಾವಿಯಲ್ಲಿ ಕಳೆದ ಬಾರಿ ರೈತರ ಹೋರಾಟವಾಗುವಂಥ ಸಂದರ್ಭದಲ್ಲಿ ವಿಠ್ಠಲ ಅರಭಾವಿ ಎಂಬ ರೈತ ಆತ್ಮಹತ್ಯೆಯನ್ನು ಮಾಡಿಕೊಂಡಾಗ ಆತನ ಕುಟುಂಬದವರಿಗೆ 10 ಲಕ್ಷ ರೂಪಾಯಿ ಪರಿಹಾರವನ್ನು ಸರ್ಕಾರ ನೀಡಿತು. ಕೊನೆಗೆ ನಾಚಿಕೆಗೇಡಿನ ಒಂದು ಹೇಳಿಕೆಯನ್ನು ಕೊಡುತ್ತಾರೆ. ವಿಠ್ಠಲ ಅರಭಾವಿ ಎಂಬ ರೈತ ಆತ್ಮಹತ್ಯೆಯನ್ನು ಮಾಡಿಕೊಂಡಿಲ್ಲ, ಆತ ಹೆಂಡ ಕುಡಿದು ತೀರಿಕೊಂಡ ಎಂಬ ಹೇಳಿಕೆಯನ್ನು ಸರ್ಕಾರದವರು ನೀಡುತ್ತಾರೆ. ಇದು ಆ ರೈತನಿಗೆ ಮಾಡಿದಂಥ ಅಪಮಾನವಾಗುತ್ತದೆ. ಹಾಗಾದರೆ ಸ್ವಾಭಿಮಾನಿ ರೈತ ಆತ್ಮಹತ್ಯೆ ಮಾಡಿಕೊಂಡಾಗ 10 ಲಕ್ಷ ರೂಪಾಯಿಯ ಪರಿಹಾರವನ್ನು ಏಕೆ ಕೊಟ್ಟರು? ಸರ್ಕಾರಕ್ಕೆ ದುಡ್ಡು ಹೆಚ್ಚಾಗಿತ್ತಾ? ಹಾಗಾದರೆ ಹೆಂಡ ಕುಡಿದು ತೀರಿಕೊಂಡವರಿಗೆಲ್ಲಾ ಇವರು ಹಣವನ್ನು ಕೊಡುತ್ತಾರೆಯೇ? ಇದನ್ನು ಒಂದು ಸರ್ಕಾರವೆಂದು ನಾವು ಕರೆಯಬೇಕೇ? ಏನು ಬೇಕಾದರೂ ಮಾಡಬಹುದು. ಯಾರೋ ಅಲ್ಲಿಗೆ ಹೋಗಿ ಒಂದು ಹೇಳಿಕೆಯನ್ನು ಕೊಡುತ್ತಾರೆ. ಇನ್ಯಾರೋ ರೈತ ತೀರಿಕೊಂಡಾಗ 2 ಲಕ್ಷ ರೂಪಾಯಿಯನ್ನು ಕೊಡುತ್ತಾರೆ. ಮಾನ್ಯ ಬಸವರಾಜ ಹೊರಟ್ಟಿಯವರು ಒಳ್ಳೆಯ ಸಲಹೆಯನ್ನು ಕೊಟ್ಟಿರುತ್ತಾರೆ. ಆದರೆ ಅದನ್ನು ಅವರು ಕೇಳುವ ಹಾಗಿಲ್ಲ. ಕೇವಲ ಬಿಜೆಪಿ, ಜೆಡಿ(ಎಸ್) ಪಕ್ಷವಲ್ಲ, ಇಡೀ ದೇಶದಲ್ಲಿ ಕಾಂಗ್ರೆಸ್ಸನ್ನು ನಿರ್ನಾಮ ಮಾಡುವುದಕ್ಕೆ ಕಾಂಗ್ರೆಸ್ಸೇತರ ಪಕ್ಷಗಳೆಲ್ಲರೂ ಒಟ್ಟಿಗೆ ಸೇರಿಕೊಳ್ಳುತ್ತೇವೆ. ದೇಶವನ್ನು ಹಾಳು ಮಾಡಿದಂಥ ಪಕ್ಷ ಕಾಂಗ್ರೆಸ್ ಪಕ್ಷ. ಇದನ್ನು ನಿರ್ನಾಮ ಮಾಡುವುದಕ್ಕೆ ಬೇರೆ ಯಾವ ಪಕ್ಷದ ಜೊತೆಗೆ ಬೇಕಾದರೂ ನಾವು ಹೋಗುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಬಿಜೆಪಿ ಯನ್ನು ನಿರ್ನಾಮ ಮಾಡುವುದಕ್ಕೆ ಎಲ್ಲಾ ಪಕ್ಷದವರು ಕೂಡಿದ್ದಾರೆ ಎನ್ನುವುದನ್ನು ಅವರು ಮರೆತಿರುವ ಹಾಗೆ ಕಾಣುತ್ತದೆ. ದೇಶಾದ್ಯಂತ ಎಲ್ಲಾ ಪಕ್ಷಗಳು ಭಾರತೀಯ ಜನತಾ ಪಕ್ಷದ ವಿರುದ್ಧ ಒಂದಾಗಿ ಈ ದೇಶವನ್ನು ಅಸ್ಥಿರತೆಯಿಂದ ಪಾರು ಮಾಡಬೇಕೆಂದು ಚಿಂತನೆ ಮಾಡುತ್ತಿವೆ.

**ಸಭಾಪತಿಯವರು:–** ಈಗ ಆ ಚರ್ಚೆ ಬೇಡ, ರೈತರ ಬಗ್ಗೆ ಚರ್ಚೆ ಮಾಡೋಣ.

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಯಾವುದೇ ಪಕ್ಷವನ್ನು ಅದರಲ್ಲಿಯೂ ಕಾಂಗ್ರೆಸ್ ಪಕ್ಷವನ್ನು ಯಾರೂ ಕಿತ್ತೊಗೆಯುವುದಕ್ಕೆ ಶಕ್ತಿ ಇಲ್ಲ. ಒಂದು ವರ್ಷದಲ್ಲಿಯೇ ಅವರ graph ಇಳಿಯಲು ಪ್ರಾರಂಭಿಸಿದೆ. ಅವರು ನಮ್ಮ ಬಗ್ಗೆ ಮಾತನಾಡುತ್ತಿದ್ದಾರೆ. ಹಿರಿಯ ನಾಯಕರಾದ ಶ್ರೀ ಲಾಲ್ ಕೃಷ್ಣ ಅಡ್ವಾಣಿಯವರು ಏನು ನಡೆಯುತ್ತಿದೆ ಎಂದು ಹೇಳಿದರು. ಇಷ್ಟಾಗಿಯೂ ಸಹ ಅವರು ಮಾತನಾಡುತ್ತಿದ್ದಾರೆ. ಇವರಿಗೆ ನಾವು ಇನ್ನೇನು ಹೇಳೋಣ. ಕಾಂಗ್ರೆಸ್ ಈ ದೇಶದ ಒಂದು ಮೂಲ ಶಕ್ತಿ, ಕಾಂಗ್ರೆಸ್ ಪಕ್ಷ ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಿದೆ. ಕಾಂಗ್ರೆಸ್ ಈ ದೇಶಕ್ಕೆ ಆರ್ಥಿಕ ಸಂಪನ್ಮೂಲವನ್ನು ಕ್ರೋಢೀಕರಿಸಿದೆ. ವಿಶ್ವದಲ್ಲಿಯೇ 60 ವರ್ಷಗಳ ಕಾಲ ಶ್ರೇಷ್ಠ ಪ್ರಜಾಪ್ರಭುತ್ವ ರಾಷ್ಟ್ರವನ್ನಾಗಿ ಇಟ್ಟುಕೊಂಡು ಬಂದಿದೆ. ಬಿಜೆಪಿ ಪಕ್ಷ ಕೇಂದ್ರದಲ್ಲಿ ಆಡಳಿತಕ್ಕೆ ಬಂದು ಒಂದು ವರ್ಷವಾಗಿದೆ. ಅವರು ಐದು ವರ್ಷಗಳ ಕಾಲ ಆಡಳಿತವನ್ನು ಮಾಡಲಿ. ಆಗ ಅವರ ಯೋಗ್ಯತೆ ಗೊತ್ತಾಗುತ್ತದೆ. ಆಗ ಅವರು ಮಾತನಾಡಲಿ.

**ಶ್ರೀ ನಾರಾಯಣ ಸಾ.ಬಾಂಡಗೆ:–** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದಲ್ಲಿಯೂ ಸಹ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದೆ.

**ಡಾ॥ ಮತ್ತಿಕಟ್ಟಿ ವೀರಣ್ಣ:–** ಆಗ ಅವರಲ್ಲಿ ಕೇವಲ ಇಬ್ಬರು ಎಂಪಿಗಳು ಇದ್ದರು, ಈಗ ಅವರ ಪಕ್ಷವೇ ಅಧಿಕಾರದಲ್ಲಿದೆ. ಅದೇ ರೀತಿ ಕಾಂಗ್ರೆಸ್ ಪಕ್ಷವೂ ಸಹ ಮರಳಿ ಅಧಿಕಾರಕ್ಕೆ ಬರುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:–** ಕಾಂಗ್ರೆಸ್ ಪಕ್ಷಕ್ಕೆ 50 ವರ್ಷಗಳಾಗಿದೆ. ಅದಕ್ಕೆ ವಯಸ್ಸಾಯಿತು, ಸುಮ್ಮನೆ ಕುಳಿತುಕೊಳ್ಳಲಿ ಎಂದು ನಾನು ಹೇಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಇವರಿಗೆ ಒಂದು ಪಾಲಿಸಿ ಇಲ್ಲ. ಸರ್ಕಾರ ಆಗ ಕಬ್ಬು ಬೆಳೆಗಾರನಾದ ವಿಠ್ಠಲ ಅರಭಾವಿ ಆತ್ಮಹತ್ಯೆ ಮಾಡಿಕೊಂಡ ನಂತರ ಆತನ ಕುಟುಂಬದವರಿಗೆ 10 ಲಕ್ಷ ರೂಪಾಯಿ ಪರಿಹಾರವನ್ನು ಘೋಷಣೆ ಮಾಡಿತು. ಇತ್ತೀಚೆಗೆ ತೀರಿಕೊಂಡ ರೈತ ಶ್ರೀ ಗುರುನಾಥ್ ಚಾಪ್‌ಗಾವಿ ಈತನ ಕುಟುಂಬದವರಿಗೆ ಒಂದು ಲಕ್ಷ ರೂಪಾಯಿ ಪರಿಹಾರವನ್ನು ಸರ್ಕಾರ ಘೋಷಣೆ ಮಾಡಿ ಕೈ ತೊಳೆದುಕೊಂಡಿತು. ಅದೇ ರೀತಿ ಮೈಸೂರಿನಲ್ಲಿ ತೀರಿಕೊಂಡ ರೈತನ ಕುಟುಂಬದವರಿಗೆ ಒಂದು ಮೊತ್ತದ ಪರಿಹಾರವನ್ನು ಸರ್ಕಾರ ಘೋಷಣೆ ಮಾಡಿತು. ಆತ್ಮಹತ್ಯೆ ಮಾಡಿಕೊಂಡು ತೀರಿಕೊಂಡ ರೈತನಿಗೆ ಇಷ್ಟು ಹಣ ಪರಿಹಾರವನ್ನು ಕೊಡುತ್ತೇವೆಂದು ನಿಗದಿಗೊಳಿಸಲು ಸರ್ಕಾರಕ್ಕೆ ಶಕ್ತಿ ಇಲ್ಲವೆಂದರೆ, ಇದನ್ನು ನಾವು ಒಂದು ಸರ್ಕಾರವೆಂದು ಕರೆಯಬೇಕೇ? ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಕೊಡುವ ಪರಿಹಾರದಲ್ಲಿಯೂ ಸಹ ತಾರತಮ್ಯವನ್ನು ಮಾಡುತ್ತಾರೆಯೇ? ರೈತರನ್ನು ಸಾಯಿಸುವುದು ಇವರೇ, ನಂತರ ಅವರ ಕುಟುಂಬ ವರ್ಗದವರಿಗೆ ಪರಿಹಾರವನ್ನು ಕೊಡುವುದರಲ್ಲಿಯೂ ಸಹ ಈ ರೀತಿಯ ತಾರತಮ್ಯವನ್ನು ಮಾಡುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಒಂದು ವಿಚಿತ್ರವಾದ ಸರ್ಕಾರ ನಡೆಯುತ್ತಿದೆ. ಇವರ ಹೇಳಿಕೆಗೆ ಬೆಲೆ ಇಲ್ಲದೇ ಇರುವಂಥ ಸಂದರ್ಭ, ಇವರ ಮಂತ್ರಿಗಳು ಇವರ ಮಾತನ್ನು ಕೇಳದೇ ಇರುವಂಥ ಸಂದರ್ಭ... ದಿನದಿನೇ ಆತ್ಮಹತ್ಯೆ ಹೆಚ್ಚಾಗುತ್ತಿದೆ ಎಂದ ತಕ್ಷಣ "ಆತ್ಮಹತ್ಯೆಗೆ ಪ್ರೇರಣೆ" ಎಂದು ಹೇಳುತ್ತಾರೆ. ಇವತ್ತು ರೈತರು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದಾರೆ. ನಂತರ ಅವರು ಶಾಂತಿಯಿಂದ ಸರ್ಕಾರದ ಮೊರೆ ಹೋಗುತ್ತಾರೆ. ಆದರೆ ನಾಳೆಯ ದಿವಸ ಮಂತ್ರಿಗಳು, ಮುಖ್ಯಮಂತ್ರಿಗಳು, ಸಕ್ಕರೆ ಸಚಿವರು ಹೋಗಬೇಕಾದರೆ ರೈತರು ಕೋಲು ಹಿಡಿದುಕೊಂಡು ರಸ್ತೆಯಲ್ಲಿಯೇ ನಿಲ್ಲಿಸುತ್ತಾರೆ. ರೈತರು ಇವರ ಕೈ–ಕಾಲನ್ನು ಮುರಿಯುತ್ತಾರೆ. ಮಂತ್ರಿಗಳು ಎಲ್ಲಿಗೆ ಹೋದರೂ ಸಹ ಜನ ಇವರ ಕೈ–ಕಾಲನ್ನು ಮುರಿಯುತ್ತಾರೆ ಎಂಬುದನ್ನು ಇವರು ನೆನಪಿಟ್ಟುಕೊಳ್ಳಲಿ.

**ಡಾ॥ಶರಣಪ್ರಕಾಶ್ ರುದ್ರಪ್ಪ ಪಾಟೀಲ್:–** ಮಾನ್ಯ ಸಭಾಪತಿಯವರೆ, ಇದು ಬಹಳ ಪ್ರಚೋದನಕಾರಿಯಾದಂಥ ಮಾತು ಮತ್ತು ರಾಜಕೀಯ ಪ್ರೇರಿತವಾದಂಥ ಮಾತಾಗಿದೆ. ಹಿರಿಯರು ಈ ರೀತಿ ಮಾತನಾಡುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ರೈತರು ಸಾಯುತ್ತಿದ್ದಾರೆ, ಅದರ ಬಗ್ಗೆ ಇವರು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಆದರೆ ಇವರು ಇದನ್ನು ರಾಜಕೀಯ ಪ್ರೇರಿತ ಎಂದು ಹೇಳುತ್ತಾರೆ.

**ಡಾ॥ಶರಣಪ್ರಕಾಶ್ ರುದ್ರಪ್ಪ ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾವು ಮಾತನಾಡುವಾಗ ಏನು ಮಾತನಾಡುತ್ತಿದ್ದೇವೆ ಎನ್ನುವುದರ ಬಗ್ಗೆ ನಮಗೆ ಜ್ಞಾನವಿರಬೇಕು.

**ಶ್ರೀ ಐವಾನ್ ಡಿ'ಸೋಜಾ:–** ಆ ರೀತಿ ಹೇಳಿದ್ದೇನೆಂದು ಧೈರ್ಯವಾಗಿ ಹೇಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೂ ಸಹ ಇವರಿಗೆ ಮೈ ಮೇಲೆ ಜ್ಞಾನವಿಲ್ಲ. ಬದುಕಿರುವ ರೈತರ ಬೆಳೆಗೆ ಸರಿಯಾದ ಪರಿಹಾರ ಸಿಗುತ್ತಿಲ್ಲ. ರೈತರು ಭಿಕ್ಷೆಯನ್ನು ಕೇಳುತ್ತಿಲ್ಲ.

**ಡಾ॥ಶರಣಪ್ರಕಾಶ್ ರುದ್ರಪ್ಪ ಪಾಟೀಲ್:–**ರೈತರಿಗೆ ಸಾಂತ್ವನ ಹೇಳಿ ಧೈರ್ಯ ತುಂಬುವುದು ಬಿಟ್ಟು ಪ್ರಚೋದನಕಾರಿಯಾಗಿ ಮಾತನಾಡುತ್ತಿದ್ದಾರೆ. ಮಾನ್ಯ ಈಶ್ವರಪ್ಪನವರು ಉಪ ಮುಖ್ಯಮಂತ್ರಿಗಳಾಗಿದ್ದವರು.

ಹೇಗೆ ಮಾತನಾಡುತ್ತಿದ್ದೇನೆ ಎಂಬ ಬಗ್ಗೆ ಅವರಿಗೆ ಪರಿಜ್ಞಾನವಿಲ್ಲ. ಬಿಜೆಪಿ ಯವರಿಗೆ ರೈತರು ಸತ್ತಿರುವ ಬಗ್ಗೆ ಕಾಳಜಿ ಇಲ್ಲ, ರಾಜಕೀಯ ಮಾಡುವುದಕ್ಕೆ ಹೊರಟಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಸುಮಾರು ಒಂದೂವರೆ ವರ್ಷಗಳಿಂದ ರೈತರಿಗೆ ಹಣವನ್ನು ಕೊಟ್ಟಿಲ್ಲವಲ್ಲ, ಇವರಿಗೆ ಮೈ ಮೇಲೆ ಜ್ಞಾನವಿದೆಯೇ? ಇವರಿಗೆ ಮೈ ಮೇಲೆ ಜ್ಞಾನವಿಲ್ಲ, ಎಚ್ಚರಿಕೆ ಇಲ್ಲ. ನಾನೊಂದು ಸರ್ಕಾರವನ್ನು ನಡೆಸಿಕೊಂಡು ಹೋಗುತ್ತೇನೆಂದು ಸರ್ಕಾರವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಇದು ನಡೆಯುವುದಿಲ್ಲ. ಈಗ ನಾನು ಹೇಳುವುದಿಷ್ಟೇ. ಈ ಸರ್ಕಾರ ಯಾವಾಗ ಹಣವನ್ನು ಕೊಡುತ್ತದೆ ಎಂಬುದನ್ನು ಹೇಳಬೇಕು. ರೈತರಿಗೆ ಕೊಡಬೇಕಾದಂಥ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದರೆ ಈ ಸರ್ಕಾರ ಉಳಿಯುತ್ತದೆ. ರೈತರಿಗೆ ಕೊಡಬೇಕಾದ ಹಣ ಕೊಡುವುದು ಇವರ ಕರ್ತವ್ಯ ಅಲ್ಲವೆಂದು ಇವರಿಗೆ ಅನ್ನಿಸಿಬಿಟ್ಟಿದೆ. ಆದರೆ ಇವರು ಭಾಷಣಗಳನ್ನು ಮಾತ್ರ ರೈತರ ಪರವಾಗಿ ಮಾಡುತ್ತಾರೆ. ಸಭಾನಾಯಕರಿಂದ ಹಿಡಿದು ಮುಖ್ಯಮಂತ್ರಿಗಳವರೆವಿಗೂ ನಾವು ರೈತರ ಪರವಾಗಿದ್ದೇವೆ ಎಂದು ಹೇಳುತ್ತಾ ಭಾಷಣಗಳ ಮೇಲೆ ಭಾಷಣವನ್ನು ಮಾಡುತ್ತಿದ್ದಾರೆ. ಈಗಾಗಲೇ ಸುಮಾರು ಒಂದೂವರೆ ವರ್ಷಗಳಾಗಿವೆ. ರೈತರಿಗೆ ಇವರು ಕೊಡಬೇಕಾದ ಹಣವನ್ನು ಕೊಡಲೇಬೇಕೆಂದು ವಿಧಾನ ಮಂಡಲದಲ್ಲಿ ತೀರ್ಮಾನವನ್ನು ಮಾಡಲಿ. ವಿಧಾನ ಸಭೆ ಅಥವಾ ವಿಧಾನ ಪರಿಷತ್ ಎಂದರೆ ಅದು ಒಂದು ಪ್ರಜಾಪ್ರಭುತ್ವದ ದೇವಸ್ಥಾನವಾಗಿದೆ. ಈ ದೇವಸ್ಥಾನದಲ್ಲಿ ಕೊಟ್ಟಂಥ ಆಶ್ವಾಸನೆಯನ್ನು ಈಡೇರಿಸುವಂಥ ಯೋಗ್ಯತೆ ಈ ಸರ್ಕಾರಕ್ಕಿಲ್ಲವೆಂದರೆ, ಇವರಿಗೆ ಏನಾದರೂ ನೋವಾಗುವಂಥ ಮಾತು ಹೇಳಿದ ತಕ್ಷಣ ಇವರಿಗೆ ಸಿಟ್ಟು ಬರುತ್ತದಲ್ಲ, ರೈತ ಹೇಗೆ ತನ್ನ ಜೀವನವನ್ನು ಮಾಡುತ್ತಿರಬೇಕು, ಅವನು ಹೇಗೆ ಬದುಕುತ್ತಿರಬಹುದು. ಬ್ಯಾಂಕ್‌ನವರು ರೈತನ ಆಸ್ತಿಯನ್ನು ಹರಾಜು ಹಾಕುವುದಕ್ಕೆ ಬಂದಾಗ, ಆತನ ಹೆಂಡತಿ–ಮಕ್ಕಳ ಬಂಗಾರವನ್ನು ಹರಾಜು ಹಾಕುವುದಕ್ಕೆ ಬಂದಾಗ ಆತ ಹೇಗೆ ಸ್ವಾಭಿಮಾನದಿಂದ ಬದುಕಬೇಕು? ಇವರಿಗೆ ಏನೋ ಒಂದು ಮಾತು ಹೇಳಿದ ತಕ್ಷಣ ಸಿಟ್ಟು ಬಂದುಬಿಟ್ಟಿತಲ್ಲಾ, ನಿಮ್ಮ ಯೋಗ್ಯತೆಗೆ ತಕ್ಕ ಹಾಗೆ ಮಾತನಾಡಿ ಎಂದು ಹೇಳುತ್ತಾರಲ್ಲಾ, ಇವರಿಗೆ ಈ ಮಾತನ್ನು ಹೇಳುವುದಕ್ಕೆ ಯೋಗ್ಯತೆ ಇದೆಯೇ? ಇವರಿಗೆ ಈ ಮಾತನ್ನು ಹೇಳುವುದಕ್ಕೆ ಯೋಗ್ಯತೆ ಇಲ್ಲ.

ನಾನು ಹೇಳುವುದು ಇಷ್ಟೇ. ಚರ್ಚೆಗೆ ಅವಕಾಶ ಬೇಕೆಂದರೆ ನಾವು ಚರ್ಚೆ ಮಾಡೋಣ. ಸರ್ಕಾರ ಸಕ್ಕರೆ ಕಾರ್ಖಾನೆ ಮಾಲೀಕರಿಂದ ಸಕ್ಕರೆಯನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ ಮತ್ತು ಇನ್ನುಳಿದವರಿಗೆ ನೋಟಿಸ್ ಕೊಟ್ಟಿದ್ದಾರೆ. ಸಕ್ಕರೆಯನ್ನು ಮುಟ್ಟುಗೋಲು ಹಾಕಿಕೊಂಡು, ಸರ್ಕಾರದ ಬಳಿ ಇರುವ 1,575 ಕೋಟಿ ರೂಪಾಯಿಯ ಸಕ್ಕರೆಯನ್ನು ಒಂದು ಕೆ.ಜಿ.ಗೆ 20 ರೂಪಾಯಿಯಂತೆ ಮಾರಿದರೂ ಸಹ ಅಷ್ಟು ದುಡ್ಡಾಗುತ್ತದೆ. ಅದನ್ನು ಸರ್ಕಾರ ಇಟ್ಟುಕೊಳ್ಳಲಿ. ನಾಳೆ–ನಾಡಿದ್ದರಲ್ಲಿ ಪ್ರಕ್ರಿಯೆಯನ್ನು ಪ್ರಾರಂಭ ಮಾಡಲಿ. ಆ ಹಣ ಕೈಗೆ ಬರುವ ತನಕ ಇವರ ಖಜಾನೆಯಲ್ಲಿರುವಂಥ ಹಣವನ್ನು ಆ ರೈತರಿಗೆ ಕೊಡುತ್ತೇವೆಂದು ಇವರು ಘೋಷಣೆಯನ್ನು ಮಾಡಬೇಕು. ಸರ್ಕಾರ ಘೋಷಣೆಯನ್ನು ಮಾಡಲಿಲ್ಲವೆಂದರೆ ರೈತರ ಪರವಾಗಿರುವ ನಮ್ಮ ಹೋರಾಟವನ್ನು ಯಾವ ಕಾರಣಕ್ಕೂ ಸಹ ನಾವು ನಿಲ್ಲಿಸುವುದಿಲ್ಲ. ರೈತರಿಗೆ ಪ್ರಾರ್ಥನೆ ಮಾಡುತ್ತೇವೆ, ಅದೇ ರೀತಿ ಸರ್ಕಾರದವರು ಸಹ ರೈತರಿಗೆ ಪ್ರಾರ್ಥನೆಯನ್ನು ಮಾಡುತ್ತಾರೆ. ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಎಲ್ಲಾ ಸ್ವಾಮೀಜಿಗಳು ಸಹ ಹೇಳುತ್ತಿದ್ದಾರೆ. ದಯವಿಟ್ಟು ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಡಿ, ಧೈರ್ಯವಾಗಿರಿ ಎಂದು ಹೇಳುತ್ತಿದ್ದಾರೆ. ರೈತ ಹೇಗೆ ಅವನ ಹೆಂಡತಿ–ಮಕ್ಕಳನ್ನು ಸಾಕಬೇಕು ಅಥವಾ ವಯಸ್ಸಿಗೆ ಬಂದಿರುವಂಥ ಮಗಳನ್ನು ಅವನು ಹೇಗೆ ಮದುವೆ ಮಾಡಬೇಕು? ಹೇಗಿದ್ದರೂ ಕಬ್ಬು ಬೆಳೆದಿದೆ. ಹಗಲು–ರಾತ್ರಿ, ಬಿಸಿಲು–ಮಳೆಯಲ್ಲಿ ಹೆಂಡತಿ, ಮಕ್ಕಳು ಮನೆ–ಮಂದಿ ಎಲ್ಲಾ ಪ್ರಾಣ ಕೊಟ್ಟು ಬೆಳೆದಿರುವ ಕಬ್ಬಿಗೆ ನನ್ನ ಕೈಗೆ ದುಡ್ಡು ಬರುತ್ತದೆ ಎನ್ನುವ ನಂಬಿಕೆ ಇರುವಂಥ ಆ ರೈತನಿಗೆ

ಸುಮಾರು ಒಂದೂವರೆ ವರ್ಷಗಳಿಂದ ಹಣವನ್ನು ಕೊಟ್ಟಿಲ್ಲವೆಂದರೆ ಇವರು ಇನ್ನೂ ಸಹ ರೈತರ ಪರವಾಗಿ ಇದ್ದೇರೆಯೇ?

**1.30 ಗಂಟೆ)**

ನೀವು ರೈತರ ಪರ ಹೌದೋಅಲ್ಲವೋ, ಸಕ್ಕರೆ ಕಾರ್ಖಾನೆ ಮಾಲೀಕರಪರ ಹೌದೋ ಅಲ್ಲವೋ ಎಂದು ತೀರ್ಮಾನ ಮಾಡುವಂತಹ ದಿನ ಇದಾಗಿದೆ. ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯದೇ ಹೋದರೆ ಮುಂದಿನ ಅಧಿವೇಶನಕ್ಕೂ ಇದೇ ಸ್ಥಿತಿ ಎದುರಾಗುತ್ತದೆ. ಆ ಸಕ್ಕರೆ ಮತ್ತೆ ಸಕ್ಕರೆ ಕಾರ್ಖಾನೆಯ ಮಾಲೀಕರ ಕೈಗೆ ಹೋಗುತ್ತದೆ. ರೈತ ಮತ್ತೆ ಬೀದಿಗೆ ಬರುತ್ತಾನೆ. ಇನ್ನು ಎಷ್ಟು ಜನರೈತರು ಸಾಯುತ್ತಾರೋಗೊತ್ತಿಲ್ಲ. ಎಷ್ಟು ಜನರೈತರು ಸಾಯಬೇಕು ಎಂದು ನಿಮಗೆ ಅಪೇಕ್ಷೆಇದೆ? ಇವತ್ತು ನಾವು ಹಣ ಬಿಡುಗಡೆ ಮಾಡುತ್ತೇವೆ ಎಂದು ಸರ್ಕಾರ ಹೇಳಬೇಕು. ಸಕ್ಕರೆ ಮಾರಾಟ ಮಾಡುತ್ತೀರೋ ಅಥವಾ ಮಾಲೀಕರ ಲಾಬಿಯ ಕೈಯೊಳಗೆಯೇ ಇರುತ್ತೀರೋ ಅದು ನಿಮಗೆ ಬಿಟ್ಟಿದ್ದು. ರೈತರಿಗೆಕೊಡಬೇಕಾದ 2013–14ರ ಸಾಲಿನದುಡ್ಡನ್ನು ಇವತ್ತೇ ಕೊಡುತ್ತೇವೆ ಎಂದು ಹೇಳಬೇಕು. ಕೇವಲ ಆಶ್ವಾಸನೆ ಕೊಟ್ಟರೆಯಾರೂ ನಂಬುವುದಿಲ್ಲ. ನಾವೂ ನಂಬಲ್ಲ, ರೈತರೂ ನಂಬಲ್ಲ, ರೈತ ಹೋರಾಟಗಾರರು ನಂಬುವುದಿಲ್ಲ, ಜನರೂ ನಂಬುವುದಿಲ್ಲ. ಕೇವಲ ಸುಳ್ಳಿನ ಆಶ್ವಾಸನೆಗಳನ್ನು ಕೊಡುತ್ತಾರೆ ಎನ್ನುವ ಭಾವನೆ ಜನರಲ್ಲಿ ಬಂದಿದೆ. ಯಾವತ್ತು ರೈತರಿಗೆ ದುಡ್ಡುಕೊಡುತ್ತೀರಿ ಎನ್ನುವುದನ್ನು ಹೇಳಬೇಕು. ಇವತ್ತೇಕೊಡುತ್ತೀರಾ ದಯವಿಟ್ಟು ಹೇಳಿ. ಮುಖ್ಯಮಂತ್ರಿಗಳು ಹೇಗೆ ತಯಾರಾಗಿದ್ದಾರೋ ಗೊತ್ತಿಲ್ಲ.2 ಗಂಟೆಗೆ ರೈತರ ಹೋರಾಟ ಆರಂಭವಾಗುತ್ತದೆ. ರೈತರು ಕೊಟ್ಟಿರುವಂತಹ ಗಡುವು ಏನಿದೆ, ಆ ಗಡುವನ್ನು ಹೊಟ್ಟೆಉರಿಯಿಂದ ಕೊಟ್ಟಿದ್ದಾರೆ. ಅವರ ಹೊಟ್ಟೆಗೆ ಬೆಂಕಿ ಬಿದ್ದಿದೆ. ಸರ್ಕಾರ ಅವರರಕ್ಷಣೆಗೆ ಹೋಗುತ್ತಿಲ್ಲ. ವಿರೋಧ ಪಕ್ಷವಾಗಿ ನಾವು ಅವರ ಪರಇದ್ದೇವೆ, ನಮ್ಮ ಕರ್ತವ್ಯ ನಾವು ಮಾಡುತ್ತಿದ್ದೇವೆ. ಒಂದೂವರೆ ವರ್ಷದ ಕೆಳಗೆ ಇದೇ ವಿಧಾನಪರಿಷತ್ತಿನಲ್ಲಿ ಏನು ಆಶ್ವಾಸನೆ ಕೊಟ್ಟಿದ್ದರೋ, ಕೋರ್ಟಿನ ಆರ್ಡರ್ ಪ್ರಕಾರ ಮಾಡುತ್ತೇವೆ ಎಂದು ಹೇಳಿದ್ದಿರೋ ಅದರಂತೆ, ನಿಮ್ಮ ಕೈಯಲ್ಲಿರುವ ಸಕ್ಕರೆಯನ್ನು ತಕ್ಷಣ ಹರಾಜು ಹಾಕಿ ಅಥವಾ ಅದನ್ನು ಇಟ್ಟುಕೊಂಡು ನಿಮ್ಮ ಖಜಾನೆಯಿಂದ ಬಾಕಿ ಹಣ ಕೊಟ್ಟು ರೈತರ ಆತ್ಮಹತ್ಯೆಯ ಸರಣಿಯನ್ನು ನಿಲ್ಲಿಸಬೇಕು. ನೀವೇ ಆಶ್ವಾಸನೆ ಕೊಟ್ಟಂತೆ ರೈತರಿಗೆ ಕೊಡಬೇಕಾದ ಬಾಕಿ ಏನಿದೆ . . . ರೈತನಿಗೆ ನೀವು ಭಿಕ್ಷೆಕೊಡುತ್ತಿಲ್ಲ, ದಾನ ಕೊಡುತ್ತಿಲ್ಲ ಅಥವಾ ಅನುದಾನ ಕೊಡುತ್ತಿಲ್ಲ. ರೈತರಿಗೆ ಕೊಡಬೇಕಾಗಿರುವಂತಹ ಹಣವನ್ನು ಇವತ್ತೇ ಕೊಡುತ್ತೇವೆ ಎಂದು ಸರ್ಕಾರ ಘೋಷಣೆ ಮಾಡಬೇಕು. ನಿಮ್ಮ ಉತ್ತರವನ್ನು ನೋಡಿಕೊಂಡು ನಮ್ಮ ಮುಂದಿನ ಹೆಜ್ಜೆಯನ್ನು ಇಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ವಿರೋಧ ಪಕ್ಷದ ನಾಯಕರು ಸಾಕಷ್ಟು ರೈತಪರ ಚಿಂತನೆ ವ್ಯಕ್ತ ಮಾಡಿದರು. ರೈತರ ಹೊಟ್ಟೆ ಉರಿಯುವಂತಾಗಿದೆ, ಹಾಗೆ–ಹೀಗೆ ಎಂಬ ಮಾತುಗಳನ್ನು ಹೇಳಿದರು. ಸದನದ ಗಮನಕ್ಕೆ ನಾನು ಒಂದು ವಿಷಯತರ ಬಯಸುತ್ತೇನೆ. 2013–14ನೇ ಇಸವಿಯ ಪೂರ್ವದಲ್ಲಿ, ಮಾನ್ಯ ಈಶ್ವರಪ್ಪನವರ ಪಕ್ಷದ ಸರ್ಕಾರ ಇದ್ದಾಗ ಸಕ್ಕರೆ ಬೆಲೆ ಕ್ವಿಂಟಾಲ್‌ಗೆರೂ. 3200–3300 ಇತ್ತು. ಸಕ್ಕರೆ ಬೆಲೆ ರೂ.3200 ಇದ್ದಾಗ ಪ್ರತಿಒಂದು ಮೆಟ್ರಿಕ್‌ಟನ್ ಕಬ್ಬಿಗೆ ನಿಗದಿ ಮಾಡಿದ ಬೆಲೆ ರೂ. 2200.00. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದನಂತರ, ಸಕ್ಕರೆ ಬೆಲೆ ರೂ. 2600 ಕ್ಕಿಂತಕಡಿಮೆ ಬೆಲೆ ಇದ್ದರೂ, ನಾವು ಸಕ್ಕರೆ ಕಾರ್ಖಾನೆ ಮಾಲೀಕರಿಗೆ, ರೂ.2500 ಕೊಡಬೇಕು ಎಂದು ಹೇಳಿ ಅದರ ಜೊತೆ ನಮ್ಮ ಮುಖ್ಯಮಂತ್ರಿಗಳು ರೂ.150 ಕೊಟ್ಟುಬಿಟ್ಟು ರೂ.2650 ಪ್ರತಿ ಮೆಟ್ರಿಕ್‌ಟನ್ ಕಬ್ಬಿಗೆ ಕೊಡುವಂತಹ ವ್ಯವಸ್ಥೆ ಮಾಡಿದೆವು. ಆದರೆ, ಸಕ್ಕರೆ ಬೆಲೆ ರೂ. 3300 ಇದ್ದಾಗ, ಅವರೇ ಅಧಿಕಾರದಲ್ಲಿದ್ದಾಗ, ಅನೇಕ ಜನ ಸಕ್ಕರೆ ಮಾಲೀಕರು ಅಂದಿನ ಸಚಿವ ಸಂಪುಟದಲ್ಲಿದ್ದ ಸಂದರ್ಭದಲ್ಲಿ ಸಕ್ಕರೆಗೆರೂ. 3300 ಬೆಲೆ ಇದ್ದಾಗ ಕಬ್ಬಿಗೆರೂ.2500 ಬೆಲೆ ನಿಗದಿ

ಮಾಡಿದ್ದರು. ಆದರೆ ನಾವು, ಪ್ರತಿಕ್ವಿಂಟಾಲ್ ಸಕ್ಕರೆ ಬೆಲೆ ರೂ.2600 ಇದ್ದಾಗ ನಮ್ಮ ಸರ್ಕಾರ 2650 ನಿಗದಿ ಮಾಡಿತ್ತು. ಅಂದರೆ ಇದರಿಂದ ಯಾರು ರೈತರ ಪರವಾಗಿದ್ದಾರೆ ಎನ್ನುವುದು ಗೊತ್ತಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಗಳೆ, ನಮ್ಮ ಮನೆಯ ಪಕ್ಕದಲ್ಲಿ ನಡದಂಥ ಘಟನೆಯ ಬಗ್ಗೆ ಮಾನ್ಯ ಸಭಾನಾಯಕರ ಗಮನ ಸೆಳೆಯುತ್ತೇನೆ. ನಮ್ಮ ಮನೆಯ ಪಕ್ಕದಲ್ಲಿ ಒಬ್ಬ ಕುಡುಕನಿದ್ದ. ಆತಯಾವಾಗಲೂ ತನ್ನ ಹೆಂಡತಿಯನ್ನು ಹೊಡೆಯುತ್ತಿದ್ದ. ಏತಕ್ಕೆ ಹೆಂಡತಿಯನ್ನು ಯಾವಾಗಲೂ ಹೊಡೆಯುತ್ತೀಯೆ ಎಂದು ಕೇಳಿದೆ. ಆಗ ಆತ, ನಾನು ಯಾವಾಗಲೋ ಹಿಂದೆ, ರೇಷ್ಮೆ ಸೀರೆ ತಂದುಕೊಡುತ್ತೇನೆ ಎಂದು ಹೇಳಿದ್ದೆ. ಹಾಗಂತ ನಾನು ಮನೆಗೆ ಹೋದಾಗಲೆಲ್ಲಾ ಕೇಳುತ್ತಿದ್ದಳು. ರೇಷ್ಮೆ ಸೀರೆಯನ್ನು ತಂದುಕೊಡುತ್ತೇನೆ ಎಂದು ನೀವೇ ಹೇಳಿದ್ದಿರಲ್ಲಾ ಎಂದು ಆ ಹೆಂಡತಿ ಕೇಳಿದರೆ, ಆತ, ಹೌದು ತಂದು ಕೊಡುತ್ತೇನೆ ಎಂದು ಹೇಳಿದ್ದೆ, ಅದಕ್ಕೋಸ್ಕರ ಮತ್ತೆ ಮತ್ತೆ ಅದನ್ನೇ ಕೇಳುತ್ತಿಯಾ ಎಂದು ಹೆಂಡತಿಗೆ ಹೊಡೆಯುತ್ತಿದ್ದ. ಹಾಗೆಯೇ, ರೂ. 2600ಗಳನ್ನು ಕೊಡುತ್ತೇವೆ ಎಂದು ನೀವೇ ಘೋಷಣೆ ಮಾಡಿದ್ದೀರಿ, ನಾವು ಆ ರೀತಿ ಕೇಳಿರಲಿಲ್ಲ. ಆ ಕುಡುಕಕೂಡ ಹೆಂಡತಿಗೆ ಪ್ರೀತಿಯಿಂದ, ವಿಶ್ವಾಸದಿಂದ, ನಿನಗೆ ಒಳ್ಳೆಯ ರೇಷ್ಮೆ ಸೀರೆ ಕೊಡುತ್ತೇನೆ ಎಂದು ಹೇಳಿದ್ದ. ಆದರೆ ಒಂದು ಸಲವೂ ತಂದುಕೊಡಲಿಲ್ಲ. ಕೇಳಿದಾಗಲೆಲ್ಲಾ ಹೊಡೆಯುತ್ತಿದ್ದ. ಹಾಗಾದರೆ ಅವನನ್ನು ಹೆಂಡತಿ ಪರಎಂದು ಹೇಳಬೇಕೇ? ಆ ಕುಡುಕ ಎಷ್ಟರಮಟ್ಟಿಗೆ ಹೆಂಡತಿಯ ಪರವಾಗಿ ಇದ್ದನೋ ಹಾಗೆಯೇ, ಕುಡುಕನಿಗೂ ಮೀರಿ ನೀವು ರೈತರ ಪರ ಎಂದು ಹೇಳುವಂತಹ ಸ್ಥಿತಿಗೆ ಬಂದಿದ್ದೀರಿ, ಅದು ನಿಮ್ಮ ಹಣೆಬರಹವಾಗಿದೆ.

ಶ್ರೀ **ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ಪ್ರತಿಕ್ವಿಂಟಾಲ್ ಸಕ್ಕರೆಗೆರೂ. 3300 ಬೆಲೆ ಇದ್ದಾಗ ಇವರು ಪ್ರತಿ ಮೆಟ್ರಿಕ್‌ಟನ್ ಕಬ್ಬಿಗೆರೂ.2500ಗಳನ್ನು ಕೊಡಿಸಿದ್ದರು. ಆಗ ಇವರು ರೈತರ ಪರವಾಗಿದ್ದರೆ ರೂ.3400ಗಳನ್ನು ಕೊಡಿಸಬೇಕಾಗಿತ್ತು. ಮಾನ್ಯ ಸಭಾಪತಿಗಳೆ, ನೀತಿ ಹೇಳುವವರು ನೀತಿವಂತರಾಗಿರಬೇಕು. One who seeks equity should do equity.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಪ್ರಕಾಶ್ ಹುಕ್ಕೇರಿಯವರು ಲೋಕಸಭೆಯ ಎಂಪಿ ಆಗಿ ಗೆಲ್ಲಬೇಕಿತ್ತು, ಆದಕ್ಕೋಸ್ಕರ, ಸಕ್ಕರೆ ಬೆಲೆಯನ್ನು ಎಷ್ಟು ಬೇಕಾದರೂ ಬರೆದುಕೊಳ್ಳಿ, ಎಷ್ಟು ಬೇಕಾದರೂ ತೆಗೆದುಕೊಳ್ಳಿ ಎಂದು ಘೋಷಣೆ ಮಾಡಿಬಿಟ್ಟರು. ರಾಜಕಾರಣ ಮಾಡಿದ್ದರಿಂದ ಇವತ್ತು ರಾಜ್ಯದಲ್ಲಿ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ, ಇದಕ್ಕೆ ಕಾಂಗ್ರೆಸ್ ಸರ್ಕಾರವೇ ಕಾರಣವಾಗಿದೆ. ದಯವಿಟ್ಟು ಇದನ್ನು ಗಮನದಲ್ಲಿಟ್ಟು ಕೊಳ್ಳಬೇಕು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ಸುಮಾರು 15 ದಿನಗಳಿಂದ ರಾಜ್ಯದ ವಿವಿಧ ಕಡೆ ರೈತರು ಹೋರಾಟ ಮಾಡುತ್ತಿದ್ದಾರೆ. ನಾವು, ಅಧಿವೇಶನ ಪ್ರಾರಂಭದ ಪೂರ್ವದಲ್ಲೇ ಸರ್ಕಾರ ರೈತರ ಪರತನ್ನ ನಿಲುವನ್ನು ತಾಳುತ್ತದೆ ಎಂದು ಭಾವಿಸಿದ್ದೆವು. ಮಾನ್ಯ ಸಭಾನಾಯಕರೆ, ನೀವು ಗೋಡೌನ್‌ಗಳಲ್ಲಿರುವ ಸಕ್ಕರೆಯನ್ನೇನು ಸೀಜ಼್ ಮಾಡಿದ್ದೀರೋ ಅದನ್ನು ಮಾರಾಟ ಮಾಡಿದರೆ ಅದರಿಂದರೂ. 600 ಕೋಟಿ ಬರುತ್ತದೆ. ರೈತರಿಗೆ ಕೊಡುವ ಬಾಕಿ ರೂ. ಸುಮಾರು 450 ಕೋಟಿ ಇದೆ. ಸಕ್ಕರೆ ಮಾಲೀಕರು ಮತ್ತು ನೀವು ಏನಾದರೂ ಮಾಡಿಕೊಳ್ಳಿ. ಆದರೆ ಸರ್ಕಾರದಿಂದರೂ. 450 ಕೋಟಿ ಬಾಕಿ ಕೊಡುತ್ತೇವೆ ಎಂದು ಘೋಷಣೆ ಮಾಡಿ. ಹೀಗೆ ಮಾಡಿದರೆತಪ್ಪೇನು? ನಿಮ್ಮಕಡೆ ಸೀಜ಼್ ಮಾಡಿದ ಸಕ್ಕರೆ ಇದೆ. ರೈತರಿಗೆ ಕಷ್ಟದ ಸ್ಥಿತಿ ಬಂದಾಗ ಅವರ ಸಹಾಯಕ್ಕೆ ನೀವೇಕೆ ಇಂತಹ ಹೆಜ್ಜೆಯನ್ನಿಡಬಾರದು? ರೂ. 450 ಕೋಟಿದುಡ್ಡು ಸರ್ಕಾರಕ್ಕೆ ದೊಡ್ಡದೇನೂ ಅಲ್ಲ. ಮೊನ್ನೆ ನಾವು ಅಂಕಲಗಿಗೆ ಹೋಗಿದ್ದೆವು. ಅಲ್ಲಿನ ಒಬ್ಬ ರೈತ 40 ಟನ್ ಕಬ್ಬು ಬೆಳೆದಿದ್ದಾನೆ. ಎಂ.ಕೆ.ಹುಬ್ಬಳ್ಳಿ ಶುಗರ್ ಫ್ಯಾಕ್ಟರಿಗೆ ಹಾಕಿದ್ದಾನೆ. ಕಾನೂನಿನ ಪ್ರಕಾರ ರೈತ ಫ್ಯಾಕ್ಟರಿಗೆ ಕಬ್ಬನ್ನು

ಕೊಟ್ಟ 14 ದಿನಗಳ ಒಳಗೆ ಬಿಲ್ ಪಾವತಿ ಮಾಡಬೇಕು. ಅವನಿಗೆ 6 ತಿಂಗಳಾದರೂ ಹಣ ಪಾವತಿ ಮಾಡಿಯೇ ಇಲ್ಲ. ಆಗ ಆ ರೈತ ಇದ್ದತನ್ನ ಎತ್ತುಗಳನ್ನು ಮಾರುವ ಪರಿಸ್ಥಿತಿ ಉಂಟಾಗುತ್ತದೆ. ಕಬ್ಬನ್ನು ತೆಗೆದುಕೊಂಡು ಹೋಗಬೇಕಾದರೆ ಗ್ಯಾಂಗ್‌ನವರು ಏನು ಮಾಡುತ್ತಾರೆ, ಟ್ರಕ್‌ನವರು ಏನು ಮಾಡುತ್ತಾರೆ, ಟ್ರ್ಯಾಕ್ಟರ್‌ನವರು ಏನು ಮಾಡುತ್ತಾರೆ ಎನ್ನುವುದು ನಮ್ಮೆಲ್ಲರಿಗೂ ಗೊತ್ತಿದೆ. ಕೊಡುವ ರೂ.2500 ಅಥವಾ ರೂ.2600 ಗಳನ್ನು ಬಿಟ್ಟು ಪ್ರತಿಟನ್‌ಗೆ ಮತ್ತೆ ಎಷ್ಟು ಖರ್ಚು ಆಗುತ್ತದೆ ಎನ್ನುವುದುಗೊತ್ತಿದೆ, ಲಗಾನಿ ಎಷ್ಟು ಕೊಡುತ್ತೇವೆ ಎನ್ನುವುದು ನಮಗೆ ಗೊತ್ತಿದೆ, ನಮ್ಮನ್ನೂ ಬಿಡುವುದಿಲ್ಲ. 1 ಟ್ರಕ್ ಹೋದರೆ ಸುಮಾರು ರೂ.2000 ಕೊಡಬೇಕಾಗುತ್ತದೆ. 1 ಟ್ರ್ಯಾಕ್ಟರ್‌ಗೆ ಸುಮಾರು ರೂ.12000 ಕೊಡಬೇಕು ಮತ್ತು ಗ್ಯಾಂಗ್‌ನವರಿಗೂ ಕೊಡಬೇಕಾಗುತ್ತದೆ. ಯಾವ ರೈತ ಸತ್ತನೋ ಆತನ ಅಣ್ಣ, ಒಂದು ವೇಳೆ ನಮಗೆ ದುಡ್ಡು ಬಂದಿದ್ದರೆ ಈ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ ಎಂಬ ಮಾತನ್ನು ಹೇಳಿದ. ಗೋಡೌನ್‌ನಲ್ಲಿ ದಾಸ್ತಾನಿರುವ ಸಕ್ಕರೆಯನ್ನು ಸೀಜ಼್ ಮಾಡಿದ್ದೀರಿ. ಆ ಸಕ್ಕರೆ ನಿಮ್ಮ ಕಡೆ ಇದೆ. ಈ ಹಿನ್ನೆಲೆಯಲ್ಲಿ ಒಂದು ಸೂಕ್ತ ತೀರ್ಮಾನ ಕೈಗೊಳ್ಳುವುದನ್ನು ಬಿಟ್ಟು ಸುಮ್ಮನೆ ಎಲ್ಲರ ಕೈಯಲ್ಲು ಏಕೆ ಬೈಸಿಕೊಳ್ಳುತ್ತಿದ್ದೀರಿ? ನಿಮಗಿರುವ ತೊಂದರೆ ಏನು?ರೂ. 450 ಕೋಟಿದೊಡ್ಡ ಮೊತ್ತವೇ? ಸಾವಿರಾರು ಕೋಟಿ ಸಾಲಗಳನ್ನು ಮನ್ನಾ ಮಾಡುತ್ತೀರಿ, ಆ ಭಾಗ್ಯ, ಈ ಭಾಗ್ಯಗಳನ್ನು ಕೊಡುತ್ತೀರಿ. ಕಬ್ಬು ಬೆಳೆಯುವ ರೈತನ ಸಮಸ್ಯೆ ಪರಿಹರಿಸಲು ನಿಮಗೆ ಸಾಧ್ಯವಾಗುವುದಿಲ್ಲವೇ? ನಿಮ್ಮ ಹತ್ತಿರ ರೂ.450 ಕೋಟಿಗಳಿಲ್ಲವೇ? ರೂ. 800 ಕೋಟಿಗಳನ್ನು ಮಾಫಿ ಮಾಡುತ್ತೀರಿ, ಸಾವಿರಾರುಕೋಟಿ ರೂಪಾಯಿಗಳನ್ನು ಮಾಫಿ ಮಾಡುತ್ತೀರಿ, ರೂ.2400 ಕೋಟಿಖರ್ಚು ಮಾಡಿ ಮನೆ ಕಟ್ಟಿಸಿಕೊಡುವುದಕ್ಕೆ ಹೋಗುತ್ತೀರಿ. ಹೀಗಿರುವಾಗ ಕೇವಲ ರೂ.450ಕೋಟಿ ಹಣಕೊಡುವುದಕ್ಕೆ ಆಗುವುದಿಲ್ಲವೇ? ನಿಮ್ಮನ್ನು ಟೀಕೆ ಮಾಡುತ್ತಿಲ್ಲ. ದಯವಿಟ್ಟು ನೀವೇ ಪ್ರಾಮಾಣಿಕತೆಯಿಂದ ಹೇಳಿ. ಮಾನ್ಯ ಸಭಾನಾಯಕರೇ ನೀವು ವಿರೋಧ ಪಕ್ಷದ ನಾಯಕರಾಗಿದ್ದಾಗ ರೈತರ ಪರವಾಗಿ ಏನೇನು ಮಾತನಾಡಿದ್ದೀರಿ ಎನ್ನುವುದನ್ನು ದಯವಿಟ್ಟು ನೆನಪು ಮಾಡಿಕೊಳ್ಳಿ. ರೂ. 450 ಕೋಟಿಗಳಿಲ್ಲದೆ ಸರ್ಕಾರ ದಿವಾಳಿಯಾಗಿದೆಯೇ? ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತೇ ನೀವು ರೂ.450 ಕೋಟಿರಿಲೀಸ್ ಮಾಡಿ, ಆಗುತ್ತಿರುವ ಗಲಾಟೆಯನ್ನು ನಿಲ್ಲಿಸಿ. ಸಕ್ಕರೆಕಾರ್ಖಾನೆ ಮಾಲೀಕರಿಂದ ನೀವು ತೆಗೆದುಕೊಳ್ಳುತ್ತೀರೋ ಬಿಡುತ್ತೀರೋ ನಿಮಗೆ ಸಂಬಂಧಪಟ್ಟಿದ್ದು. ಇಲ್ಲಿ ನಾಟಕ ನಡೆಯುತ್ತಿದೆ. ನಾವು ಕೀಲಿ ಹಾಕಿದ ಹಾಗೆ ಮಾಡುತ್ತೇವೆ, ನೀವು ಅಳುವ ಹಾಗೆ ಮಾಡಿ, ನಾವು ಕರೆದ ಹಾಗೆ ಮಾಡುತ್ತೇವೆ ಎನ್ನುವ ಸ್ಥಿತಿ ಇದೆ. ಸರ್ಕಾರಕ್ಕೆ ರೂ.450 ಕೋಟಿ ಭಾರವೇ? ಸಕ್ಕರೆಯನ್ನು ಏಕೆ ಸೀಜ಼್ ಮಾಡಿದಿರಿ? ದಯವಿಟ್ಟು ಉತ್ತರ ಹೇಳಿ. ಸೀಜ಼್ ಮಾಡಿದ ಸಕ್ಕರೆ ನಿಮ್ಮಕಡೆ ಇದೆ, ಅದಕ್ಕೆ ಸೆಕ್ಯೂರಿಟಿ ಇದೆ. ಅದರದುಡ್ಡು ಸರ್ಕಾರಕ್ಕೆ ಬರುತ್ತದೆ. ಹಾಗಿರುವಾಗ ಸರ್ಕಾರ ತಕ್ಷಣವೇ ಖಜಾನೆಯಿಂದ ಬಾಕಿ ಹಣವನ್ನು ಕೊಡಬೇಕು. ಸರ್ಕಾರ ಬಾಕಿ ಕೊಟ್ಟರೆ ಧರಣಿ, ಗಲಾಟೆ, ಹೊಡೆದಾಟ–ಬಡೆದಾಟ, ಲಾಠಿಚಾರ್ಜ್ ಯಾವುದೂ ಇರುವುದಿಲ್ಲ.

ಸಕ್ಕರೆಯನ್ನೇಕೆ ಜಪ್ತಿ ಮಾಡಿದ್ದೀರಿ? ಸಕ್ಕರೆ ಏಕೆ ಜಪ್ತಿ ಮಾಡಿದ್ದೀರಿ ಎಂಬುದಕ್ಕೆ ಮೊದಲು ಉತ್ತರ ಹೇಳಿ. ಸಕ್ಕರೆ ಜಪ್ತಿ ಮಾಡಿದ ನಂತರ ಇವತ್ತು ಸಕ್ಕರೆ ನಿಮ್ಮ ಕಡೆ ಇರುವುದರಿಂದ ಅದನ್ನು ಹರಾಜು ಮಾಡಿದರೆ ಇಂತಿಷ್ಟು ದುಡ್ಡು ಬರುತ್ತದೆ ಎನ್ನುವಂತಹ ಒಂದು ಸೆಕ್ಯೂರಿಟಿ ಕೂಡ ಇದೆ. ಆದ್ದರಿಂದ ಸರ್ಕಾರ ರೈತರ ಬಾಕಿ ಹಣವನ್ನು ಕೊಟ್ಟುಬಿಡಲಿ, ರೈತರು ಇಷ್ಟೆಲ್ಲಾಗಲಾಟೆ, ಪ್ರತಿಭಟನೆ, ಹೊಡೆದಾಟ, ಬಡಿದಾಟ ಪೊಲೀಸ್ ಲಾಠಿಚಾರ್ಜ್ ಇವೆಲ್ಲಾ ಏಕೆ ಬೇಕು? ಸರ್ಕಾರಕ್ಕೆ ಏನು ತೊಂದರೆ ಎಂಬುದನ್ನು ಹೇಳಿ? ನಾವು ಪ್ರಾಮಾಣಿಕವಾಗಿ ಮಾತನಾಡೋಣ, ರಾಜಕಾರಣ ಮಾತನಾಡುವುದು ಬೇಡ. 450 ಕೋಟಿರೂಪಾಯಿ ಹಣ ಬಿಡುಗಡೆ ಮಾಡುವ ಶಕ್ತಿ ಸರ್ಕಾರಕ್ಕಿಲ್ಲವೆ? ಇಲ್ಲದಿದ್ದರೆ, ನಮ್ಮ ಕಡೆ ಹಣ ಇಲ್ಲ, ನಮಗೆ ಹಣ ಕೊಡುವುದಕ್ಕಾಗುವುದಿಲ್ಲ, ಸರ್ಕಾರ ದಿವಾಳಿಯಾಗಿದೆ ಎಂಬುದನ್ನಾದರೂ ಹೇಳಿ. 450 ಕೋಟಿರೂಪಾಯಿ

ಕೊಡುವುದಕ್ಕಾಗುವುದಿಲ್ಲವೆಂದರೆ ಸರ್ಕಾರಕ್ಕೆ ಏನು ಹೇಳಬೇಕು? ನಿಮಗೆಮಾನ ಇಲ್ಲ, ಮರ್ಯಾದೆ ಇಲ್ಲ ಎಂದು ಹೇಳಿದರೆ ಅದಕ್ಕೂ ನೀವೇನಾದರೂ ಮಾತನಾಡುತ್ತೀರಿ. ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಸಕ್ಕರೆಯನ್ನು ಜಪ್ತಿ ಮಾಡಿ ನಿಮ್ಮ ಸೆಕ್ಯೂರಿಟಿಯಲ್ಲಿ ಇಟ್ಟುಕೊಂಡಿದ್ದೀರಿ. 450 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಪ್ರಕಟ ಮಾಡಿ. ಸದನದಲ್ಲಿ ನಾವು ಮಾತನಾಡುವುದು, ನಿಮಗೆ ಬೈಯ್ಯುವುದು, ನೀವು ನಮಗೆ ಬೈಯ್ಯುವುದು, ಹೊರಗೆ ರೈತರು ಪ್ರತಿಭಟನೆ ಮಾಡುವುದು, ಗಲಾಟೆ ಮಾಡುವುದು ಇವೆಲ್ಲಾ ಬೇಡವೇ ಬೇಡ.450 ಕೋಟಿರೂಪಾಯಿ ಹಣವನ್ನು ಈಗಿಂದೀಗಲೇ ನಾವು ಬಿಡುಗಡೆ ಮಾಡುತ್ತೇವೆ, ರೈತರ ಬಾಕಿ ಎಲ್ಲವನ್ನು ಕೊಟ್ಟು ಬಿಡುತ್ತೇವೆ, ಇನ್ನುಳಿದ ವಿಚಾರಗಳು ಸಕ್ಕರೆ ಮಾಲೀಕರು ಮತ್ತು ನಮ್ಮ ನಡುವೆ ಇದ್ದು, ಅದನ್ನು ತೆಗೆದುಕೊಳ್ಳುವುದು, ಬಿಡುವುದು ನಮಗೆ ಬಿಟ್ಟಂತಹ ವಿಚಾರ ಎನ್ನುವ ಮಾತನ್ನು ನೀವೇಕೆ ಹೇಳಬಾರದು? ಹೇಳುವುದಕ್ಕೆ ತೊಂದರೆ ಏನು? ಸದನ ನಡೆಯುತ್ತಿರುವುದು ಎಲ್ಲರಿಗೂ ಗೊತ್ತಿದೆ. ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ನಡೆದ ಪ್ರತಿಭಟನೆಯಲ್ಲಿ ವಿಠಲ ಅರಭಾವಿ ಆತ್ಮಹತ್ಯೆ ಪ್ರಕರಣ, ಗಲಾಟೆ ಎಲ್ಲಾ ಆಯಿತು. ಈಗ ಕೂಡ ಕಳೆದ ಐದಾರು ದಿವಸಗಳಿಂದ ಏನಾಗಿದೆ ಎಂಬುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. 'ಎಲ್ಲರೂ ಅವರೇ ಬಿಡಿ, ಅಧಿಕಾರಿಗಳು ಸುಮ್ಮನೆ ಮಾತನಾಡುತ್ತಾರೆ, ವಿರೋಧ ಪಕ್ಷದ ಸ್ಥಾನದಲ್ಲಿರುವ ಬೇರೆ ಬೇರೆ ಪಕ್ಷದ ರಾಜಕಾರಣಿಗಳು ಸುಮ್ಮನೆ ಮಾತನಾಡುತ್ತಾರೆ, ಪಾದಯಾತ್ರೆ ಮಾಡುತ್ತಾರೆ, ಆದರೆ ಸರ್ಕಾರದವರು ಸ್ಪಂದಿಸುವುದಿಲ್ಲ ಎಂದು ರಾಜಕಾರಣಿಗಳ ಬಗ್ಗೆ ಇವತ್ತು ಸರಿಯಾದ ಅಭಿಪ್ರಾಯ ರೈತರಿಗಿಲ್ಲ. ರೈತರಜೊತೆ ನಾವು ಚರ್ಚೆ ಮಾಡಿದಾಗಇದೇ ಮಾತನ್ನು ಹೇಳುತ್ತಾರೆ. ಒಟ್ಟಾರೆ ಜನಪ್ರತಿನಿಧಿಗಳಾದಂಥವರು, ರಾಜಕಾರಣ ಮಾಡುವಂಥವರು, ಸರ್ಕಾರ ನಡೆಸುವಂಥವರು ಎಲ್ಲರೂ ಕೂಡಿ ಒಟ್ಟಾರೆ ಇದಕ್ಕೊಂದು ಇತಿಶ್ರೀ ಹಾಡಬೇಕಾದರೆ ಈಗಿಂದೀಗಲೇ 450 ಕೋಟಿರೂಪಾಯಿಯನ್ನು ಬಿಡುಗಡೆ ಮಾಡಿ ರೈತರಿಗೆ ವಿತರಿಸಬೇಕೆಂಬುದು ನನ್ನ ಒತ್ತಾಯವಾಗಿದ್ದು, ಅನಂತರ ಸರ್ಕಾರ ಅದನ್ನು ಕಾರ್ಖಾನೆಗಳಿಂದ ತೆಗೆದುಕೊಳ್ಳಬಹುದು ಎನ್ನುವ ಸಲಹೆಯನ್ನು ನಾನು ಕೊಡಬಯಸುತ್ತೇನೆ.

450 ಕೋಟಿರೂಪಾಯಿ ಸರ್ಕಾರಕ್ಕೆ ಯಾವ ಲೆಕ್ಕ? ಇಷ್ಟೆಲ್ಲಾಗುದ್ದಾಟ, ಹೋರಾಟ, ಗಲಾಟೆಗಳೆಲ್ಲಾ ಏಕೆ? ಸರ್ಕಾರದಿಂದ 450 ಕೋಟಿರೂಪಾಯಿ ಬಿಡುಗಡೆ ಮಾಡದಿರುವಷ್ಟು ನೀವು ಅಯೋಗ್ಯವಾಗಿದ್ದೀರಾ? ಉಳಿದೆಲ್ಲವನ್ನೂ ಬಿಟ್ಟು ಯಾವುದರಲ್ಲಾದರೂ ತೆಗೆದುಕೊಡಿ. ಸರ್ಕಾರ ಕೆಲವು ಜನಪ್ರಿಯ ಕಾರ್ಯಕ್ರಮಗಳನ್ನೇನು ಜಾರಿಗೊಳಿಸುತ್ತಿದೆ ಅವುಗಳನ್ನು ಬೇಕಾದರೆ ನಿಲ್ಲಿಸಿ, ಅದರಿಂದ ಏನೂ ಆಗುವುದಿಲ್ಲ. ಜನಪ್ರಿಯ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ ಮಾತ್ರಕ್ಕೆ ನಿಮಗೆ ಎಲ್ಲರೂಮತ ನೀಡುವುದಿಲ್ಲ, ಬಹಳ ಜನರೇನೂ ನಿಮಗೆ ಶಹಬಾಸ್‌ಗಿರಿ ಕೊಡುವುದಿಲ್ಲ, ಎಲ್ಲರು ಬೈಯ್ಯುವುದನ್ನು ನಾವು ನೋಡಿದ್ದೇವೆ. ಆ ಹಿನ್ನೆಲೆಯಲ್ಲಿ ನಾನು ಹೆಚ್ಚಿಗೆ ಮಾತನಾಡುವುದಿಲ್ಲ, ದಯಮಾಡಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಈಗ ಇರುವಂತಹ ಹಣವನ್ನು ರೈತರಿಗೆ ಬಿಡುಗಡೆ ಮಾಡಿ ಮುಂದಾಗುವಂತಹ ಅನಾಹುತವನ್ನು ತಪ್ಪಿಸಿಬಿಡೋಣ. ಆಮೇಲೆ ನೀವು ಸಕ್ಕರೆಕಾರ್ಖಾನೆಯವರ ಜೊತೆಯಲ್ಲಿ ಕುಳಿತುಕೊಂಡು ಚರ್ಚೆ ಮಾಡಿ ಏನು ಮಾಡಿಕೊಳ್ಳುತ್ತೀರೋ ಮಾಡಿಕೊಳ್ಳಿ. ಬೇಕಾದರೆನೀವು ಸಕ್ಕರೆಕಾರ್ಖಾನೆಯವರಿಗೆ ಆ 450 ಕೋಟಿರೂಪಾಯಿಯನ್ನು ಮಾಫಿ ಮಾಡಿಬಿಡಿ, ಅವರಿಗೆ ಬಿಟ್ಟುಬಿಡಿ. ಆದರೆ ರೈತರಿಗೆ ಕೊಡಬೇಕಾದ ಬಾಕಿ ಹಣವನ್ನು ನಿಲ್ಲಿಸಿಕೊಳ್ಳುವುದು ಒಳ್ಳೆಯದಲ್ಲ, ಆದ್ದರಿಂದ ಇವತ್ತೇ ಈಗಿಂದೀಗಲೇ 450 ಕೋಟಿರೂಪಾಯಿಯನ್ನು ತಕ್ಷಣ ಬಿಡುಗಡೆ ಮಾಡುವಂತಹ ಒತ್ತಾಯವನ್ನು ನಾನು ಮಾಡುತ್ತೇನೆ. ಸರ್ಕಾರ ಇದನ್ನು ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದು ಕೊಳ್ಳಬಾರದು. ವಿರೋಧ ಪಕ್ಷದವರು ಹೇಳಿದ್ದಕ್ಕೆ ಬಿಟ್ಟರು ಎನ್ನುವ ಹೆಗ್ಗಳಿಕೆಯೇನೂ ನಮಗೆ ಬೇಡ. Suomoto ನಾವು ಹೇಳಿಬಿಡುತ್ತೇವೆ, ಸರ್ಕಾರವೇ ಬಹಳ ದೊಡ್ಡ ಮನಸ್ಸು ಮಾಡಿ ಅವರೇ ರೈತರಕಷ್ಟವನ್ನು ನೋಡಲಾರದೆ 450 ಕೋಟಿರೂಪಾಯಿ ಬಿಡುಗಡೆ ಮಾಡಿಬಿಟ್ಟರು ಎಂದು

ನಾವು ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇವೆ. ಆದ್ದರಿಂದ ದಯಮಾಡಿ ಸರ್ಕಾರ ಈ ಕೆಲಸವನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

**ಶ್ರೀ ರಾಮಚಂದ್ರಗೌಡ(ಪದವೀಧರರಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ಪ್ರಶ್ನೋತ್ತರ ವೇಳೆಗಿಂತ ಮುಂಚೆ ಈ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಸಭಾನಾಯಕರಿಗೆ ನಾನು ಅಭಿನಂದಿಸುತ್ತೇನೆ. ಇವತ್ತಿಗೆ ಸರಿಯಾಗಿ ಒಂದು ವರ್ಷ ಏಳು ತಿಂಗಳ ಹಿಂದೆ ಅಂದರೆ, ದಿನಾಂಕ:29–11–2013 ರಂದು ಮಧ್ಯಾಹ್ನ 12.30 ಗಂಟೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಇದೇ ಸದನದಲ್ಲಿ ಉತ್ತರಕೊಟ್ಟರು. ಉತ್ತರಕೊಡುವಾಗ "ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಾಗ ರೈತರ ಪ್ರತಿಟನ್ ಕಬ್ಬಿಗೆ 2400 ರೂಪಾಯಿಗಳನ್ನು ನಿಗದಿ ಮಾಡಲಾಗಿತ್ತು, ಈ ವರ್ಷ ಅದಕ್ಕಿಂತ ಕಡಿಮೆ ಮಾಡುವುದು ಬೇಡ ಎನ್ನುವ ಅಭಿಪ್ರಾಯಕ್ಕೆ ಬರಲಾಯಿತು. ಕಳೆದ ವರ್ಷ ಸಕ್ಕರೆ ಬೆಲೆ 3200 ರೂಪಾಯಿಗಳಿಂದ 3400 ರೂಪಾಯಿಗಳವರೆಗೆ ಇತ್ತು. ನಾವು 2400 ರೂಪಾಯಿಗಳನ್ನೇ ನಿಗದಿ ಮಾಡಿದೆವು. ರೈತರ ವಾದವೆಂದರೆ, ಈ ವರ್ಷಗೊಬ್ಬರದ ಬೆಲೆ ಜಾಸ್ತಿಯಾಗಿದೆ, ಕೂಲಿ ಕೂಡ ಜಾಸ್ತಿಯಾಗಿದೆ, ಸಕ್ಕರೆ ಬೆಲೆ ಕಡಿಮೆಯಾಗಿದ್ದರೂ cultivation cost ಜಾಸ್ತಿಯಾಗಿರುವುದರಿಂದ ಕಳೆದ ವರ್ಷಕ್ಕಿಂತ ಈ ಮೊತ್ತ ಕಡಿಮೆಯಾಗಬಾರದು ಎನ್ನುವುದಾಗಿತ್ತು" ಎಂದು ಹೇಳಿದ್ದಾರೆ. ನಾವು ಜನರನ್ನು ಜನಾರ್ಧನ ಎಂದು ಹೇಳುತ್ತೇವೆ, ಜನಾರ್ಧನ ಎಂದರೆ ದೇವರು. 'ಕೊಟ್ಟಭಾಷೆಗೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು' ಎನ್ನುವಂತಹ ಒಂದು ಮಾತಿದೆ. ಇವತ್ತು ಆ ಜನ ಮೆಚ್ಚಿಲ್ಲ. ಭಾಷೆ ಕೊಟ್ಟಿದ್ದಾರೆ, ಕೊಡಬೇಕು ಅಷ್ಟೇ. ರೈತರ ಕಷ್ಟ, ಸಂಕಷ್ಟ ಎಷ್ಟಿದೆ ಎಂಬುದು ಸರ್ಕಾರಕ್ಕೂಗೊತ್ತಿದೆ. ಬಹುತೇಕ ನಾವೆಲ್ಲರೂ ರೈತರ ಮಕ್ಕಳು. ಯಾವುದೋ ಒಂದು ಪುಣ್ಯದಿಂದ ಈ ಸದನಕ್ಕೆ ನಾವು ಸದಸ್ಯರಾಗಿ ಬಂದಿದ್ದೇವೆ. ಈ ಸದನದ ಸದಸ್ಯರಾಗಿ ನಮ್ಮ ಘನತೆ, ಗೌರವಗಳನ್ನು ಉಳಿಸಿಕೊಂಡು ಕೆಲಸ ಮಾಡಬೇಕಾಗುತ್ತದೆ. ಪುಸಲಾಯಿಸಿದ ಮಾತ್ರಕ್ಕೆ ಯಾರೂ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಅಂತಹ ಮಾತುಗಳನ್ನಾಡುವುದು ಕೂಡಸರಿಯಲ್ಲ ಎಂದು ನಮ್ಮ ಮಿತ್ರರಿಗೆ ತಮ್ಮ ಮುಖಾಂತರ ಹೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ಎಲ್ಲರೂ ಹೇಳಿದ ಹಾಗೆ ಅಧಿವೇಶನ ನಡೆಸುತ್ತೇವೆಂದು ಘೋಷಣೆ ಮಾಡಿದಾಗಲೇ ಬಹುತೇಕ ರೈತರು ಈ ಭಾಗದಲ್ಲಿ ಕಬ್ಬನ್ನು ಬೆಳೆಯುತ್ತಾರೆ. ಅವರಿಗೆ ಆಘಾತವಾಗಿರುವಂತಹ ಈ ಸಂದರ್ಭದಲ್ಲಿ ಇಷ್ಟು ಹೊತ್ತಿಗಾಗಲೇ ಘೋಷಣೆ ಮಾಡಿಅವರ ಹಣವನ್ನು ಕೊಟ್ಟು ಬಿಡಬಹುದಾಗಿತ್ತು. ಸಕ್ಕರೆ ಜಪ್ತಿ ಮಾಡಿದ್ದಾರೆ. ಸರ್ಕಾರ ಸಕ್ಕರೆಯನ್ನು ಜಪ್ತಿ ಮಾಡಿದರೂ ಕೂಡ ಅವೆಲ್ಲಾ ಬ್ಯಾಂಕ್‌ಗಳಲ್ಲಿ ಈಗಾಗಲೇ pledge ಆಗಿದೆ. ಎಲ್ಲಾ ಬ್ಯಾಂಕ್‌ನವರು ಅದರ ಮೇಲೆ ಹಿಡಿತಇಟ್ಟು ಕೊಂಡಿದ್ದಾರೆ. ಆದರೂ ಕೂಡ ಸಾರ್ವಜನಿಕ ಹಿತಾಸಕ್ತಿಯಿಂದ ಸರ್ಕಾರ ಅದನ್ನು overrule ಮಾಡಬಹುದು. ಜನಶಕ್ತಿಯೇ ಮುಖ್ಯ.

**ಶ್ರೀ ಕೃಷ್ಣಭೈರೇಗೌಡ:–** ಶುಗರ್ ಕಂಟ್ರೋಲ್ ಆರ್ಡರ್ ಪ್ರಕಾರವಾಗಿ ನಾವು ರಿಕವರಿ ನೋಟಿಸ್‌ನ್ನು ಇಶ್ಯೂ ಮಾಡಿರುವುದು. ಆ ಆರ್ಡರ್ ಪ್ರಕಾರವಾಗಿ ಮೊದಲನೆ ಹಕ್ಕು ರೈತರಿಗೆ ಬರುತ್ತದೆ. ಇದನ್ನು ಕಾನೂನಾತ್ಮಕವಾಗಿಯೇ ಮಾಡಿರುವುದು.

Sri RAMACHANDRAGOWDA:-Mr.Chairman sir, I thank the Hon'ble Minister. He is aware of it.

Sri S.R.PATIL:- Mr.Chairman sir, Hon'ble Supreme Court has ruled in that effect. The first priority will go to the farmer.

Sri RAMACHANDRAGOWDA:-Mr.Chairman sir, yes. The Constitution overrules all other rules.

**ಶ್ರೀ ಎಸ್.ಆರ್.ಪಾಟೀಲ್:–** ಸರ್ವೋಚ್ಚ ನ್ಯಾಯಾಲಯದ ನಿರ್ಣಯಕೂಡ ನಿಮ್ಮ ಮಾತುಗಳಿಗೆ ಪೂರಕವಾಗಿದೆ.

**ಶ್ರೀಕೃಷ್ಣಭೈರೇಗೌಡ:–** ಮಾನ್ಯ ಪಾಟೀಲ್‌ರವರು ಹೇಳಿದ ಹಾಗೆ ಸುಪ್ರೀಮ್‌ಕೋರ್ಟ್ Moneylenders Act ಪ್ರಕಾರ ಮೊದಲನೇ ಕ್ಲೈಮ್ ಸಾಲಗಾರದ್ದು ಎಂದು ಬರುತ್ತದೆ.

**ಶ್ರೀ ರಾಮಚಂದ್ರಗೌಡ:–** ನಿಮ್ಮ ಸರ್ಕಾರ ದಿನಾಂಕ:28–5–2013 ರಲ್ಲಿ ಬಂತು. ಆರು ತಿಂಗಳೊಳಗಾಗಿ ಒಳ್ಳೆಯ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಲಾಟರಿಯಿಂದ ಬಂದರು ಎಂದು ಹೇಳುವುದಿಲ್ಲ. He has earned his position. Yes, he has earned his position. Because, he has worked in almost all the fields and he has come up.

**ಶ್ರೀ ಐವನ್ ಡಿ'ಸೋಜಾ:–** ಅದನ್ನು ವಿರೋಧ ಪಕ್ಷದ ನಾಯಕರಿಗೆ ಹೇಳಬೇಕು. Sri RAMACHANDRAGOWDA:-Mr.Chairman sir, I don't deny it.

**ಶ್ರೀ ಐವನ್ ಡಿ'ಸೋಜಾ:–**ಅದು ವಿರೋಧ ಪಕ್ಷದ ನಾಯಕರಿಗೆಗೊತ್ತಿರಬೇಕು.

Sri RAMACHANDRAGOWDA:-Mr.Chairman sir, he has earned that position. Everyone of us have earned our position. I will tell you one incident. After my Intermediate, I went to one Professor. I asked him a seat for joining the Bachelor of Engineering course. ನೀವು ನನಗೆ ರೆಕಮಂಡೇಷನ್ ಮಾಡಬೇಕು, ಸೀಟ್ ಕೊಡಬೇಕುಎಂದು ಕೇಳಿದೆ.ಅವರು ಹೇಳಿದರು: **"**Mr.Gowda, you cannot get it. You must earn it." Immediately I joined B.Sc., I earned it and again I joined the Bachelor of Engineering course. ಯಾರಾದರು ಒಬ್ಬರು ಹೇಳಿದರೆ ಅದರಿಂದ ಪಾಠಕಲಿಯಬೇಕೇ ವಿನಹ ಏನೋ ಹೇಳುವುದರಿಂದ ಪ್ರಯೋಜನ ಆಗುವುದಿಲ್ಲ. I earned it and joined the Bachelor of Engineering course. ಇವತ್ತು ಸರ್ಕಾರಜಪ್ತಿ ಮಾಡಿರುವಂತಹ ಸಕ್ಕರೆಯ ಒಟ್ಟು ಬೆಲೆ ಏನಾಗುತ್ತದೆ ಅದು ಸರ್ಕಾರದಿಂದ ರೈತರಿಗೆ ಎಷ್ಟು ಬಾಕಿಯನ್ನು ಕೊಡಬೇಕೋ ಅದಕ್ಕಿಂತ ಜಾಸ್ತಿಯೇ ಇದೆ. ಸಾರ್ವಜನಿಕವಾಗಿ ಭಾಷಣ ಮಾಡುವಾಗ ನಾನು ಒಂದು ಮಾತನ್ನೇನು ಹೇಳುತ್ತಿದ್ದೆನೆಂದರೆ ಅಶ್ವಂ ನೈವ ಗಜಂ ನೈವ, ವ್ಯಾಘ್ರ್ಯಂ ನೈವ ಚ ನೈವ ಅಜಾಪುತ್ರಂ ಬಲಿಂದದ್ಯಾತ್ ದೈವೋದುರ್ಬಲ ಘಾತಕಃ ನಮ್ಮೂರಿನಲ್ಲಿ ಒಂದು ಮಾರಮ್ಮನಗುಡಿ ಇದೆ. ಆ ಗುಡಿಗೆ ಊರಿನಜನ ಯಾವುದೋ ಕಾಯಿಲೆ ಬಂದಾಗ, ತಾಯಿ ನಿನಗೆ ಬಲಿ ಕೊಡುತ್ತೇವೆ, ಕುದುರೆಯನ್ನು ತೆಗೆದುಕೊಂಡು ಬಂದು ಬಲಿ ಕೊಡುತ್ತೇವೆ ಎಂದು ಹೇಳುತ್ತಾರೆ. ಆ ದೇವರ ಹತ್ತಿರ ಕುದುರೆಯನ್ನು ತೆಗೆದುಕೊಂಡು ಬಂದರೆ ಆ ದೇವರು ಕುದುರೆ ಬೇಡ ಎಂದು ಹೇಳುತ್ತದೆ. ಈ ದೇವರು ಕುದುರೆ ಬೇಡ ಎಂದು ಹೇಳುತ್ತಾಳೆ ಎಂದು ಒಂದು ಆನೆ ತೆಗೆದುಕೊಂಡು ಬಂದರು. ಆನೆಯನ್ನು ತೆಗೆದು ಕೊಂಡು ಬಂದರೆ ಆನೆಯೂ ಬೇಡ ಎಂದು ಹೇಳುತ್ತಾಳೆ. ಜನ ಅಂದುಕೊಂಡರು ಇವೆರದುಕುದುರೆ ಮತ್ತು ಆನೆ ಹುಲ್ಲು ಮೇಯುತ್ತವೆ, ಅದಕ್ಕೋಸ್ಕರ ದೇವರು ಬೇಡ ಎಂದು ಹೇಳುತ್ತಿದ್ದಾಳೆ ಎಂದು ಒಂದು ಹುಲಿಯನ್ನು ಬಲಿ ಕೊಡುವುದಕ್ಕೆ ತೆಗೆದುಕೊಂಡು ಬಂದರು. ಮಾಂಸತಿನ್ನುವುದರಿಂದ ಬಹಳ ಶಕ್ತಿಯಾಗಿದೆ ಎಂದು. **'**ಅಶ್ವಂ ನೈವ ಗಜಂ ನೈವ, ವ್ಯಾಘ್ರ್ಯಂ ನೈವ ಚ ನೈವ**'** ಹುಲಿಯಾದರೆ ಬೇಡವೇ ಬೇಡ ಎಂದು ಹೇಳಿತು. ತಾಯಿ

ನಾವೇನು ತಪ್ಪು ಮಾಡಿದ್ದೇವೆ, ನಿನಗೇನು ಬೇಕು ಎಂದು ಕೇಳುತ್ತಾರೆ. 'ಅಜಾ ಪುತ್ರಂ ಬಲಿಂದದ್ಯಾತ್ ದೈವೋದುರ್ಬಲ ಘಾತಕಃ" ಆಡಿನ ಮರಿಯನ್ನು ಬಲಿ ಕೊಟ್ಟರೆ ನನಗೆ ಸಾಕು ಎಂದು ದೇವರು ಹೇಳಿತು.

ಬೇಸರ ಮಾಡಿಕೊಳ್ಳಬೇಡಿ.ಇವತ್ತುಟಾಟಾ ನೈವ, ಬಿರ್ಲಾ ನೈವ, ಸಕ್ಕರೆಕಾರ್ಖಾನೆ ಮಾಲೀಕ ನೈವ ಚ ನೈವ, ರೈತ ಪುತ್ರಂ ಬಲಿಂ ದದ್ಯಾತ್ಕಾಂಗ್ರೆಸ್ ಸರ್ಕಾರೋದುರ್ಬಲ ಘಾತಕಃ" ಆ ರೀತಿಆಗಬಾರದುಎಂದು ಹೇಳುತ್ತಿದ್ದೇನೆ.

**(ಗೊಂದಲ)**

ನೋಡಿ, ಆ ರೀತಿ ಆಗಬಾರದು ಎಂದು ನಾನು ಹೇಳುತ್ತಿದ್ದೇನೆ. ಇವತ್ತು ಏನಾಗುತ್ತಿದೆ ಎಂದು ನೋಡಿ. ನಾನು ನಿಮ್ಮೆಲ್ಲರನ್ನೂ appreciate ಮಾಡುತ್ತಿದ್ದೇನೆ. ನೀವು ಯಾರೂ ಸಹ ಕಳಪೆಯಿಲ್ಲ. ಇವತ್ತು ತೆರಿಗೆ ಹಾಕುವಾಗ, ಟಾಟಾ ಮೇಲೆ, ಬಿರ್ಲಾ ಮೇಲೆ ಸೇರಿದಂತೆ ಎಲ್ಲರೂ ಮೇಲೂ ತೆರಿಗೆಯನ್ನು ಹಾಕುತ್ತಾರೆ. ಆದರೆ, ರೈತ ಕುಡಿಯುವ ಸಾರಾಯಿ ಮೇಲೆ, ಅವನು ಸೇದುವ ಬಿಡಿ–ಸಿಗರೇಟ್ ಮೇಲೆ ಹಾಕುವಂತಹ ತೆರಿಗೆ ಎಷ್ಟು ಪರ್ಸೆಂಟ್ಇದೆ ಎಂದು ನಿಮಗೆ ಗೊತ್ತೇ? 10 ರೂಪಾಯಿಯ ಸಾರಾಯಿಗೆ 25 ರೂಪಾಯಿಗಳ ತೆರಿಗೆಯನ್ನು ವಿಧಿಸುತ್ತಾರೆ. 250% ತೆರಿಗೆಯನ್ನು ಹಾಕುತ್ತಾರೆ. ಅದಕ್ಕೋಸ್ಕರ ನಾನು ಏನು ಹೇಳುತ್ತಿದ್ದೇನೆಂದರೆ ಯಾರಿಗೆ ಎಷ್ಟೆಷ್ಟು ಪರ್ಸೆಂಟೇಜ್ ಹಾಕುತ್ತಿದ್ದಾರೆನ್ನುವುದನ್ನು ನಾನು ನಿಮಗೆ ಹೇಳುತ್ತಿದ್ದೇನೆ. ನೋಡಿ, ರೈತ ಹೊಗೆಸೊಪ್ಪನ್ನು ಬೆಳೆಯುತ್ತಾನೆ.ಆ ಹೊಗೆಸೊಪ್ಪಿಗೆ ಬೆಲೆಯಿಲ್ಲ. ಆ ಹೊಗೆಸೊಪ್ಪಿನಿಂದಬೀಡಿ ಮಾಡುತ್ತಾನೆ, ಸಿಗರೇಟ್ ಮಾಡುತ್ತಾನೆ. ಅದರ ಬೆಲೆ ಗಗನಕ್ಕೇರುತ್ತದೆ. ತೆರಿಗೆ ಎಲ್ಲಿಗೆ ಬೀಳುತ್ತದೆ? ಹೊಗೆಸೊಪ್ಪನ್ನು ಬೆಳೆದಂತಹ ರೈತನಿಗೆ ಬೆಲೆಯಿಲ್ಲ, ರೈತ ಬೆಳೆದಂತಹ ಕಬ್ಬಿಗೆ ಬೆಲೆಯಿಲ್ಲ. ಸಕ್ಕರೆಗೆ ಬೆಲೆ.ರೈತ ಬೆಳೆದಂತಹ ಹತ್ತಿಗೆ ಬೆಲೆಯಿಲ್ಲ. ಬಟ್ಟೆಗೆ ಬೆಲೆ ಇದೆ. ಹೀಗಾಗಿ, ನಾವು ನೀವು ಕುಳಿತು, ಪರಸ್ಪರ ಈ ಬಗ್ಗೆ ಚರ್ಚೆ ಮಾಡಬೇಕಲ್ಲವೇ? ಇವತ್ತುಕಬ್ಬಿನಲ್ಲಿ ಬರಿ ಸಕ್ಕರೆ ಬರುತ್ತದೆಯೇ, ಕಬ್ಬಿನಲ್ಲಿ molasis ಬರುತ್ತದೆ, co-generation ಇದೆ, ಇನ್ನು ಕೆಲವು ಕಡೆಗಳಲ್ಲಿ Ethane, Methane ಮುಂತಾದ by-products ಇವೆ. ಈ by-products ಮೇಲೆ ಸರ್ಕಾರ ಹಾಕುವಂತಹ ತೆರಿಗೆ ಸುಮಾರು 3500 ಕೋಟಿ ರೂಪಾಯಿಗಳ ಮೇಲೆ ಇದೆ. ಕಬ್ಬು ಬೆಳೆದ ರೈತನಿಂದಲೇ ನಮಗೆ ತೆರಿಗೆ ಬರುವುದಾಗಿದೆ. ಗಿರಿಣಿ ಮಾಲೀಕನಿಂದಲೂ ತೆರಿಗೆ ಬರುತ್ತದೆ. ಆದರೆ, ಗಿರಣಿ ಮಾಲೀಕನಿಗೆ ಆ ಟ್ಯಾಕ್ಸ್ ಹೋಗುವುದಿಲ್ಲ. ಅದು ಸರ್ಕಾರಕ್ಕೆ ಬರುತ್ತದೆ. ಗಿರಣಿ ಮಾಲೀಕ ಇವತ್ತು helpless at that position. So, the Government is in a positive position. ಆದ್ದರಿಂದ, ಇವತ್ತು ಕೊಡಬೇಕಾಗಿರುವ 450 ಕೋಟಿ ರೂಪಾಯಿಗಳನ್ನು ಕೊಡಲಿಕ್ಕೆ ಈಗಾಗಲೇ ನೀವೇ ಒಪ್ಪಿಕೊಂಡಿದ್ದೀರಿ. ಆ ಹಣವನ್ನು ಕಷ್ಟವೋ, ಸುಖವೋ ಕೊಟ್ಟುಬಿಡಬೇಕು. ವಿಶೇಷವಾಗಿ, ಈ ಕೇತ್ರದಲ್ಲಿ ಸುಮಾರು 70 ಭಾಗದಷ್ಟು ಎಲ್ಲಿ ಹೋಗಿ ನೋಡಿದರೂ ಸಹ ಕಬ್ಬು ಬೆಳೆಯುತ್ತಾರೆ. ಅಥವಾ ಇನ್ನು ಮುಂದೆ ಇಷ್ಟು ಕಬ್ಬನ್ನು ಬೆಳೆಯಬೇಕು, ಇಷ್ಟು ಕಬ್ಬನ್ನು ಬೆಳೆಯಬಾರದು ಎಂದು ನಿಯಂತ್ರಣವನ್ನಾದರೂ ತರುವಲ್ಲಿ ಕ್ರಮ ಕೈಗೊಂಡು ಈ ಸಮಸ್ಯೆ ಮತ್ತೆ ಬರದಂತೆ ಮಾಡಬೇಕು. ಇದರ ಬಗ್ಗೆ ಕುಳಿತುಕೊಂಡು ಚರ್ಚೆ ಮಾಡಿದರೆ ಸಾಧ್ಯ ಇದೆ. ಎಲ್ಲೆಲ್ಲಿ ಎಷ್ಟೆಷ್ಟು ಯಾವ್ಯಾವ ಬೆಳೆಯನ್ನು ಬೆಳೆಯಬೇಕೆನ್ನುವುದನ್ನು ತೀರ್ಮಾನ ಮಾಡಬೇಕು. ಇವತ್ತು ಬೇರೆ ಎಲ್ಲವನ್ನು ಮಾತನಾಡುವುದು ಅವಶ್ಯಕತೆಯಿಲ್ಲ. ಪ್ರಸ್ತುತ ಕೇವಲ 450 ಕೋಟಿ ರೂಪಾಯಿಗಳನ್ನು ಕೊಡಬೇಕು. 1,20,000ಕೋಟಿ ರೂಪಾಯಿಗಳ ಬಜೆಟ್ ಇರುವಂತಹ ಈ ಸರ್ಕಾರಕ್ಕೆ ಇದುಯಾವ ಲೆಕ್ಕ? It is a throw money. ಇವತ್ತು ರೇಷ್ಮೆ ಬೆಳೆಗಾರರು ತೊಂದರೆಯಲ್ಲಿದ್ದಾರೆ, ತೊಗರಿ ಬೆಳೆಗಾರರು ತೊಂದರೆಯಲ್ಲಿದ್ದಾರೆ, ಎಲ್ಲಾ ಬೆಳೆಗಾರರು ಕಷ್ಟದಲ್ಲಿದ್ದು, ಎಲ್ಲರೂ ದುಡ್ಡನ್ನು ಕೇಳುತ್ತಾರೆ. ಇದಕ್ಕೆ ಏನಾದರೊಂದು ಪರಿಹಾರ ಹುಡುಕಬೇಕಲ್ಲವೇ? ಸಧ್ಯಕ್ಕೆ ಇಲ್ಲಿಂದ ಬೆಂಗಳೂರಿಗೆ ನಾವು ಹೋಗಬೇಕಾಗಿದೆ.

ಹೋಗುವಂತಹ ಸಮಯದಲ್ಲಿ ನಾವು ನಗು–ನಗುತ್ತಾ ಹೋಗೋಣ. ದಯವಿಟ್ಟು ಯಾವುದೇ ಪ್ರೆಸ್ಟೀಜ್ ಇಟ್ಟುಕೊಳ್ಳಬೇಡಿ. ಈ ವಿಚಾರದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ದಯಮಾಡಿ, ಈ 450 ಕೋಟಿ ರೂಪಾಯಿಗಳನ್ನು ಕೊಡುವುದರ ಮೂಲಕ ರೈತನಿಗೆ ಸಧ್ಯಕ್ಕೆ ಸಮಾಧಾನ ಮಾಡಿ. ಅದರೂ ರೈತ ಸಮಾಧಾನವಾಗುವುದಿಲ್ಲ. ಬಹಳ ದಿನಗಳಿಂದ ಆಸ್ಪತ್ರೆಯಲ್ಲಿದ್ದಾರೆ. ರೈತ ಸಾಲ ಮಾಡಿ ಅವನು ಸಾಯುತ್ತಾನೆ ಅಂದರೆ, ಅವನು ಸಾಲಕ್ಕೆ ಮಾತ್ರವಲ್ಲ, ಆ ನೋವಿಗೆ ಅವನು ಇನ್ನು ಜಾಸ್ತಿ ಕುಡಿಯುತ್ತಾನೆ. ನೋವು ತಾಳಲಾರದೇ ಜಾಸ್ತಿ ಕುಡಿದು ಕುಡಿದು ಅದರ ಜತೆಗೆ ಪಾಶಾಣ ತೆಗೆದುಕೊಂಡು ಸತ್ತು ಹೋಗುತ್ತಾನೆ. ಯಾರೋ ಒಬ್ಬರು ಏನು ಹೇಳುತ್ತಿದ್ದರು ಎಂದರೆ, ಯಾವುದಾದರೂ ಔಷಧಿ ಮಾರುವಂತಹ ಸರ್ಕಾರಿ ಅಂಗಡಿಯಲ್ಲಿ ತಿಗಣೆಯ ಔಷಧಿ, ಹೆಗ್ಗಣದ ಔಷಧಿ, ಇದೆಯೇ ಎಂದು ಕೇಳಿದರೆ, ಸ್ಟಾಕ್ ಇಲ್ಲ, ಎಲ್ಲವೂ ಬೆಳಗಾಂಗೆ ಹೋಗಿದೆ ಎಂದು ಹೇಳುತ್ತಾರೆ. ಏಕೆಂದರೆ, ಇಲ್ಲಿಗೆ ರೈತರು ಬರುತ್ತಾರೆ, ಅವರು ಈ ಔಷಧಿಯನ್ನು ತೆಗೆದುಕೊಳ್ಳುತ್ತಾರೆ. ನಾನು ತಮಾಶೆಗೋಸ್ಕರ ಹೇಳುವಂತಹ ಮಾತು ಇದಾಗಿದೆ. ಯಾರನ್ನೋಕುಚೋದ್ಯ ಮಾಡುವುದಕ್ಕೋಸ್ಕರ ಹೇಳುವಂತಹ ಮಾತು ಇದಾಗಿಲ್ಲ. ಆ ರೀತಿ ಆಗಬಾರದು. ಈ ವಿಚಾರವಾಗಿ ಮಧ್ಯಾಹ್ನದವರೆಗೂ ಸಮಯವನ್ನು ತೆಗೆದುಕೊಂಡಿದ್ದಾರೆ. ಸಂಜೆ ಒಳಗಾದರೂ ಸಹ ತಾವೂ ಈ ನಿಟ್ಟಿನಲ್ಲಿ ಒಂದು ತುರ್ತು ಕ್ಯಾಬಿನೆಟ್ ಮೀಟಿಂಗ್ ಕರೆದು ಅಲ್ಲಿ ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ಈ ಹಣವನ್ನು ಬಿಡುಗಡೆ ಮಾಡಿಬಿಟ್ಟರೆ ರೈತ ನೆಮ್ಮದಿ ಯಾಗಿರುತ್ತಾನೆ, ನಾವು ಸಹ ನೆಮ್ಮದಿ ಯಾಗಿ ಇರುತ್ತೇವೆ ಎಂದು ಹೇಳಿ ನಾನು ಸನ್ಮಾನ್ಯ ಸಭಾಪತಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಸಿ.ಹೆಚ್.ವಿಜಯಶಂಕರ್(ವಿಧಾನಸಭಾಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೆ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟತಮಗೆ ಧನ್ಯವಾದಗಳು. ಈ ಒಂದು ವಿಶೇಷವಾದ ಸನ್ನಿವೇಶದಲ್ಲಿ ರೈತರ ಸಮಸ್ಯೆ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಬಹಳಷ್ಟು ಹಿರಿಯ ಸದಸ್ಯರು ಇದರ ಬಗ್ಗೆ ಮಾತನಾಡಿ, ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಈಗ ನಾನು ದೀರ್ಘವಾಗಿ ಮಾತನಾಡಲಿಕ್ಕೆ ಬಯಸುವುದಿಲ್ಲ. ನಾನು ನೇರವಾಗಿ 1,2,3,4 ಎಂದು ಪ್ರಮುಖ ವಿಷಯಗಳನ್ನು ಮಾತ್ರ ಮಂಡನೆ ಮಾಡಿ, ಸರ್ಕಾರದ ಗಮನವನ್ನು ಸೆಳೆದು, ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಮಾನ್ಯ ಸಭಾಪತಿಯವರೆ, ಮೊದಲನೆಯದಾಗಿ, ಇವತ್ತಿನ ಈ ಸನ್ನಿವೇಶದಲ್ಲಿ ಮತ್ತು ಈ ಸಮಸ್ಯೆ ಪರಿಹಾರವಾಗಬೇಕಾದರೆ, ನಾವು ಪ್ರಮುಖವಾಗಿ ಎರಡು ವಿಷಯಗಳನ್ನು ಗಮನಿಸಬೇಕಾಗಿದೆ. ಒಂದನೆಯದಾಗಿ, ಸರ್ಕಾರ ರೈತನಿಗೋಸ್ಕರ ಘೋಷಣೆ ಮಾಡಿದಂತಹ ಹಣ. ಘೋಷಣೆ ಮಾಡಿದಂತಹ ಹಣ ಎಷ್ಟು ಬಾಕಿ ಇದೆ, ಸರ್ಕಾರವೇ ಘೋಷಣೆ ಮಾಡಿದಂತಹ ಹಣ. ಬಾಕಿಯಿರುವ ಹಣ 450 ಕೋಟಿ ರೂಪಾಯಿಗಳೆಂದು ಮಾನ್ಯ ಹಿರಿಯ ಸದಸ್ಯರುಗಳಾದ ಶ್ರೀ ಬಸವರಾಜ ಹೊರಟ್ಟಿಯವರು ಮತ್ತುಶ್ರೀ ರಾಮಚಂದ್ರಗೌಡರವರು ಹೇಳಿದರು. ಅದು 450 ಕೋಟಿ ರೂಪಾಯಿಗಳಾಗುವುದಿಲ್ಲ. ಅದು 950 ಕೋಟಿ ರೂಪಾಯಿಗಳಾಗುತ್ತದೆ. ಈ 950 ಕೋಟಿ ರೂಪಾಯಿಗಳು ರೈತರಿಗೋಸ್ಕರ ಘೋಷಣೆ ಮಾಡಿದಂತಹ ಹಣ. ಘೋಷಣೆ ಮಾಡಿದಂತಹ ಈ ಬಾಕಿ ಹಣವನ್ನು ಸರ್ಕಾರ ಇದುವರೆವಿಗೂ ಕೊಟ್ಟಿಲ್ಲ. ಸರ್ಕಾರ ಘೋಷಣೆ ಮಾಡಿದಂತಹ ಹಣ ಮೊದಲು ಪಾವತಿಯಾಗಬೇಕು. ಸರ್ಕಾರ ತಾನು ರೈತನಿಗೆ ಕೊಡಬೇಕಾದ ಹಣವನ್ನು ನಾನು ಕೊಟ್ಟಿದ್ದೇನೆ, ನನ್ನಿಂದ ಯಾವುದೇ ಹಣ ಬಾಕಿಯಿಲ್ಲ ಎನ್ನುವ ಸ್ಪಷ್ಟವಾದ ಮಾತು ಮೊದಲು ರೈತನಿಗೆ ಹೋಗಿ ತಲುಪಬೇಕು. ಇದು ಮೊದಲನೆಯ ವಿಚಾರ.

ಎರಡನೆಯದಾಗಿ, ಕಬ್ಬನ್ನು ರೈತರಿಂದ ತೆಗೆದುಕೊಂಡು, ಕಬ್ಬನ್ನು ಅರೆದು, ಸಕ್ಕರೆಯನ್ನು ಮಾಡಿ, ತಮ್ಮ ಗೋದಾಮುಗಳಲ್ಲಿ ಸಕ್ಕರೆಯನ್ನು ತುಂಬಿಕೊಳ್ಳುತ್ತಾರೆ. ರೈತನಕಬ್ಬು ಬಂದು ಒಂದು–ಒಂದೂವರೆ

ವರ್ಷವಾದರೂ ಸಹ ರೈತನಿಗೆ ಕೊಡಬೇಕಾದ ಬಾಕಿಯನ್ನು ಕಾರ್ಖಾನೆಯವರು ಕೊಟ್ಟಿರುವುದಿಲ್ಲವೋ ಆ ಬಾಕಿ ಹಣವನ್ನೂ ಸಹ ಕೊಡಿಸುವಂತಹ ಹಿನ್ನೆಲೆಯಲ್ಲಿ ಸರ್ಕಾರಗಮನ ಕೊಡಬೇಕು. ಅದಕ್ಕಾಗಿ, ಇವತ್ತು ಸಕ್ಕರೆಯನ್ನು seize ಮಾಡಬೇಕೆನ್ನುವುದಾಗಿದೆ. ಇವತ್ತು ನೀವು ಸಕ್ಕರೆಯನ್ನು seize ಮಾಡಿತಮ್ಮ ವಶಕ್ಕೆ ತೆಗೆದುಕೊಳ್ಳುತ್ತಿದ್ದೀರಿ, ಅದೇನು ಕಾರ್ಖಾನೆಯವರು ರೈತನಿಗೆ ಕೊಡಬೇಕಾದ ಬಾಕಿ ಹಣ ಇದೆ, ಆ ಬಾಕಿಗೋಸ್ಕರ ಇವತ್ತು ಸಕ್ಕರೆಯನ್ನು seize ಮಾಡುತ್ತಿದ್ದೀರಿ. ಇದು ಎರಡನೆಯ ಭಾಗ.

ರೈತರಿಗೆ ಸರ್ಕಾರ ಕೊಡಬೇಕಾದಂತಹ ಹಣ, ಎರಡನೆಯದಾಗಿ, ಸಕ್ಕರೆ ಫ್ಯಾಕ್ಟರಿಯವರು ಕೊಡಬೇಕಾದಂತಹ ಹಣ. ಈ ಎರಡುಕಡೆಯೂ ಸಹ ಇವತ್ತಿನ ದಿವಸ ನಾವು ಗಮನ ಕೊಡಬೇಕಾಗಿದೆ. ಅಂದರೆ, ರೈತ ಇವತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದೇನೆಂದರೆ, ಈ ಹಣವನ್ನು ಸರ್ಕಾರ ಕೊಡಬೇಕು, ಈ ನಿಟ್ಟಿನಲ್ಲಿ ಸರ್ಕಾರ ವಿಶೇಷವಾಗಿ ಸಹಾಯ ಮಾಡಬೇಕು, ಸರ್ಕಾರ ನಮಗೆ ವಿಶೇಷವಾದ ಅನುಕೂಲ ಮಾಡಬೇಕು, ಫ್ಯಾಕ್ಟರಿಯವರು ವಿಶೇಷವಾಗಿ ನಮ್ಮ ಸಹಾಯಕ್ಕೆ ಬರಬೇಕೆಂದೇನೂ ಇಲ್ಲ. ಇವತ್ತು ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ನಿಜವಾಗಿಯೂ ನಮಗೆ ಅವಮಾನವಾಗಿ ನಾವು ತಲೆತಗ್ಗಿಸಿ ನಿಲ್ಲಬೇಕಾಗುತ್ತದೆ. ರೈತನಿಗೆ ಬರಬೇಕಾದ ಬಾಕಿ ಹಣ, ಸರ್ಕಾರಘೋಷಣೆ ಮಾಡಿದಂತಹ ಹಿನ್ನೆಲೆಯಲ್ಲಿ ಬರಬೇಕಾದ ಹಣ. ಎರಡನೆಯದಾಗಿ, ಕಾರ್ಖಾನೆಗಳು ಕಬ್ಬನ್ನು ರೈತರಿಂದ ತೆಗೆದುಕೊಂಡು, ಕಾರ್ಖಾನೆಗಳಿಂದ ಏನು ಬಾಕಿ ರೈತನಿಗೆ ಬರಬೇಕಾಗಿದೆ ಆ ಬಾಕಿ ಹಣಕ್ಕಾಗಿ ಇವತ್ತು ಒತ್ತಾಯ ಮಾಡಿರೈತ ಬೀದಿಗಿಳಿಯುತ್ತಿರುವುದನ್ನು ನಾವು ಕಾಯುತ್ತಿದ್ದೇವೆ. ರೈತ ಆ ಹಣಕ್ಕೋಸ್ಕರ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿರುವುದನ್ನು ನಾವು ಕಾಣುತ್ತಿದ್ದೇವೆ.

**ಶ್ರೀ ಕೃಷ್ಣ ಬೈರೇಗೌಡ(ಕೃಷಿ ರಾಜ್ಯ ಸಚಿವರು):–** ಮಾನ್ಯ ಸಭಾಪತಿಯವರೆ, ಈ ವಿಚಾರದಲ್ಲಿ ಒಂದು ಸ್ಪಷ್ಟೀಕರಣ ಕೊಡಲಿಕ್ಕೆ ಬಯಸುತ್ತಿದ್ದೇನೆ. ಸರ್ಕಾರ ಏನು ಭರವಸೆಕೊಟ್ಟಿತ್ತು, ಅದರಲ್ಲಿ ಯಾವುದೂ ಬಾಕಿಯಿಲ್ಲ.

**ಶ್ರೀ ಸಿ.ಎಚ್.ವಿಜಯಶಂಕರ್:–** 100 ರೂಪಾಯಿಗಳು ಬಾಕಿ ಇದೆ.

**ಶ್ರೀ ಕೃಷ್ಣ ಬೈರೇಗೌಡ:–** ಅದನ್ನೂ ಪಾವತಿ ಮಾಡಲಾಗಿದೆ.

**ಶ್ರೀ ಸಿ.ಎಚ್.ವಿಜಯಶಂಕರ್:–** 100 ರೂಪಾಯಿಗಳು ಬಾಕಿ ಇದೆ. ತಾವು 250 ರೂಪಾಯಿಗಳನ್ನು ಘೋಷಣೆ ಮಾಡಿದ್ದೀರಿ. ಅದರಲ್ಲಿ 100 ರೂಪಾಯಿಗಳು ಇನ್ನು ಬಾಕಿ ಇದೆ.

**ಶ್ರೀ ಕೃಷ್ಣ ಬೈರೇಗೌಡ:–** 307 ಕೋಟಿ ರೂಪಾಯಿಗಳನ್ನು ಪಾವತಿಸಿದ್ದೇವೆ. ಒಟ್ಟಾರೆ, ಸರ್ಕಾರ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಾವು ಏನು 1,173 ಕೋಟಿ ರೂಪಾಯಿಗಳ ಭರವಸೆಯನ್ನು ಕೊಟ್ಟಿದ್ದೆವು, ಅಷ್ಟು ವೆಚ್ಚವನ್ನು ಸರ್ಕಾರ ಸಂಪೂರ್ಣವಾಗಿ ಭರಿಸಿದೆ. ಕಾರ್ಖಾನೆಗಳು ಕೊಡಬೇಕಾದ ಹಣ ಬಾಕಿಯಿದ್ದು, ಅದನ್ನು ಕೊಡಬೇಕಾಗಿದೆ. ಅದರ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ. ಆ ಒಂದು ವಿಷಯದಲ್ಲಿ ಅದನ್ನು ಸಂಪೂರ್ಣವಾಗಿ ನಾವು ಸಹ ಒಪ್ಪುತ್ತೇವೆ. ಆದರೆ, ಸರ್ಕಾರ ಏನು ಭರವಸೆಯನ್ನು ಕೊಟ್ಟಿತ್ತು, ಸರ್ಕಾರದ ಭರವಸೆಯನ್ನು ನಾವು ಖಂಡಿತವಾಗಿ ಈಡೇರಿಸಿದ್ದೇವೆ ಎನ್ನುವುದು ಒಂದು ಸ್ಪಷ್ಟೀಕರಣ.

**(2.00 ಗಂಟೆ)**

**ಶ್ರೀ ಸಿ.ಹೆಚ್. ವಿಜಯಶಂಕರ್:–** ಮಾನ್ಯ ಸಭಾಪತಿಯವರೆ, ಇಲ್ಲಿ ಒಂದು ಸಣ್ಣಕರೆಕ್ಷನ್ ಇದೆ. ತಾವು ಮತ್ತೊಮ್ಮೆ ಈ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ತೆಗೆದುಕೊಳ್ಳಿ.ತಾವು 250 ರೂಪಾಯಿ ಹಣವನ್ನು

ಘೋಷಣೆ ಮಾಡಿದ್ದೀರಿ. ಈ ಪೈಕಿ ಅವರಿಗೆ ತಲುಪಿರುವಂಥಾದ್ದು ಕೇವಲ 150 ಮಾತ್ರ. ಇನ್ನೂ 100 ರೂಪಾಯಿ ಬಾಕಿ ಇರುತ್ತದೆ.

**ಶ್ರೀ ಕೃಷ್ಣ ಬೈರೇಗೌಡ:–** ಮಾನ್ಯ ಸಭಾಪತಿಯವರೆ, ಇದು ಸಕ್ಕರೆ ಸಚಿವಾಲಯಕ್ಕೆ ಬರುವುದಾದರೂ ಸಹ ನಾನೂ ಕೂಡ ಈ ಬಗ್ಗೆ ಸ್ಪಷ್ಟೀಕರಣವನ್ನು ತರಿಸಿಕೊಳ್ಳುತ್ತೇನೆ. ನನ್ನ ಹತ್ತಿರವಿರುವ ಮಾಹಿತಿ ಪ್ರಕಾರವಾಗಿ ನೂರುರೂಪಾಯಿತೆರಿಗೆ ವಿನಾಯ್ತಿ. ಸರೀಯೇ? ಅದರದ್ದು 300 ಕೋಟಿರೂಪಾಯಿ ಆಗುತ್ತದೆ. ಇದಕ್ಕೆ ತೆರಿಗೆ ವಿನಾಯ್ತಿಯನ್ನು ಕೊಟ್ಟಿದ್ದೇವೆ. ಈ ವೆಚ್ಚವನ್ನು ಸರ್ಕಾರ ಭರಿಸಿದ ಹಾಗಾಯಿತು. 150 ರೂಪಾಯಿಯಂತೆ ಪ್ರೋತ್ಸಾಹಧನ ಕೊಡುವುದು ಏನು ಇದೆ ಅದಕ್ಕೆ 565 ಕೋಟಿರೂಪಾಯಿ ಆಗುತ್ತದೆ. ಇದನ್ನೂ ಕೂಡ ನಾವು ಪಾವತಿ ಮಾಡಿದ್ದೇವೆ. ತದನಂತರ ನಾವು ಮತ್ತೊಂದು ತೀರ್ಮಾನವನ್ನು ತೆಗೆದು ಕೊಂಡಿದ್ದು ಪ್ರೋತ್ಸಾಹ ಧನವಾಗಿ ಹೊಂದಾಣಿಕೆ ಮೊತ್ತವೆಂದು ಇನ್ನೂ 100 ರೂಪಾಯಿ ಕೊಡುವ ಬಗ್ಗೆ ತೀರ್ಮಾನವನ್ನು ಮಾಡಿದ್ದೆವು. ಕಾರ್ಖಾನೆಗಳವರು ಈ ಮೊತ್ತವನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಕಳೆದ ಬಾರಿ ಅಧಿವೇಶನ ನಡೆದಂತಹ ಸಂದರ್ಭದಲ್ಲಿ ತಾವೆಲ್ಲರೂ ಒತ್ತಾಯ ಮಾಡಿದಿರಿ, ಸರ್ಕಾರಕೂಡ ಇದಕ್ಕೆ ಒಪ್ಪಿ 307.94 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆದರೂ ಕೂಡತಾವು ಹೇಳಿದ ಮೇಲೆ ಮತ್ತೊಂದು ಬಾರಿ ನಾನು ಸ್ಪಷ್ಟೀಕರಣವನ್ನು ತರಿಸಿಕೊಳ್ಳುತ್ತೇನೆ.

**ಶ್ರೀ ಸಿ.ಹೆಚ್. ವಿಜಯಶಂಕರ್:–** ಇಲ್ಲಿಮೂರು ಭಾಗಇದೆ. ದಯವಿಟ್ಟು ಇದರಲ್ಲಿ ಗೊಂದಲ ಬೇಡ. ತಾವು ಕಾರ್ಖಾನೆಗಳಿಗೆ 100 ರೂಪಾಯಿತೆರಿಗೆ ಬಾಕಿಯನ್ನು ಕೊಟ್ಟಿದ್ದೀರಿ. ಆದರೆ ನೀವು ರೈತರಿಗೆ 250 ರೂಪಾಯಿಯನ್ನು ಬೆಂಬಲ ಬೆಲೆ ರೂಪದಲ್ಲಿ ಪ್ರೋತ್ಸಾಹಧನವನ್ನಾಗಿ ನೀಡುವ ಬಗ್ಗೆ ಘೋಷಣೆ ಮಾಡಿದ್ದೀರಿ. ತೆರಿಗೆ ಬಾಕಿಯನ್ನು ಬಿಟ್ಟು ಬಿಡಿ. ಆದರೆ ಈ 250 ರೂಪಾಯಿಯಪೈಕಿ 150 ರೂಪಾಯಿಯನ್ನು ಮಾತ್ರ ನೀಡಿದ್ದೀರಿ. ಇನ್ನೂ ನೂರುರೂಪಾಯಿ ಬಾಕಿ ಇದೆ. ಈ ಹಣ ರೈತನಿಗೆ ತಲುಪಬೇಕು. ಮಾನ್ಯ ಹೊರಟ್ಟಿಯವರು ಹಾಗೂ ಮಾನ್ಯ ರಾಮಚಂದ್ರಗೌಡರವರು ಮಾತನಾಡುತ್ತಿದ್ದಾಗ ಈಬಾಕಿ ಮೊತ್ತ 450 ಕೋಟಿರೂಪಾಯಿ ಇದೆ ಈ ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ಹೇಳಿದರು. ಆದರೆ, ಅದು 450 ಕೋಟಿರೂಪಾಯಿ ಬರುತ್ತದೆಯೋ 950 ಕೋಟಿ ಬರುತ್ತದೆ ಯೋಗೊತ್ತಿಲ್ಲ. ಆದರೆ ತಾವು ತಮ್ಮಿಂದ ರೈತರಿಗೆ ಪ್ರೋತ್ಸಾಹಧನವನ್ನಾಗಿ ಕೊಡುತ್ತೇವೆಂದು ಹೇಳಿದ್ದಿರಿ, ಅದು ಏನು ಬಾಕಿ ಆಗಿದೆ ಅದನ್ನು ಪೂರ್ಣವಾಗಿ ಬಿಡುಗಡೆ ಮಾಡುತ್ತೇವೆ ಎಂಬ ಸ್ಪಷ್ಟ ಮಾತು ಸರ್ಕಾರದಿಂದ ಬರಬೇಕಾಗಿದೆ. ಎರಡನೆಯದಾಗಿ ಹೇಳುವುದಾದರೆ ಕಬ್ಬನ್ನು ನುರಿಸಿ ಆದ ಮೇಲೆ ಕಾರ್ಖಾನೆಗಳವರಿಂದ ರೈತರಿಗೆ ಏನು ಬಾಕಿ ಹಣ ಬರಬೇಕಾಗಿದೆ ಅದನ್ನೂ ಕೂಡಕೊಡಿಸುವ ವ್ಯವಸ್ಥೆಯನ್ನು ಮಾಡಬೇಕು. ವಿರೋಧ ಪಕ್ಷದ ನಾಯಕರಾದ ಮಾನ್ಯ ಈಶ್ವರಪ್ಪನವರು ಮಾತನಾಡುವಾಗ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಸರ್ಕಾರ ರೈತರ ಪರವಾಗಿ ಇದೆ ಎಂದು ಹೇಳುವುದಾದರೆ, ಸಕ್ಕರೆಯನ್ನು ಹರಾಜು ಮಾಡಬೇಕಾಗುತ್ತದೆ. ಆದರೆ ಈ ಸಕ್ಕರೆಯನ್ನು ಹರಾಜು ಮಾಡುವುದಕ್ಕೆ 2–3 ತಿಂಗಳಾಗಬಹುದು. ಆ ಸಕ್ಕರೆಯನ್ನು ಹರಾಜು ಮಾಡಿ ಆ ಹಣವನ್ನು ನೀವು ಖಜಾನೆಗೆ ತೆಗೆದುಕೊಳ್ಳಿ. ಜಿಲ್ಲಾಧಿಕಾರಿಗಳಿಗೆ ಆ ಜವಾಬ್ದಾರಿಯನ್ನುಕೊಡಿ. ಆ ಹರಾಜು ಹೇಗೆ ಹೇಗೆ ಆಗುತ್ತದೆ, ಹಾಗೆ ಸರ್ಕಾರದ ಖಜಾನೆಗೆ ಹಣ ಬರುತ್ತದೆ. ಆದರೆ ಈಗ ತತಕ್ಷಣ ರೈತರ ಆತ್ಮಹತ್ಯೆ ನಿಲ್ಲಬೇಕಾದರೆ, ಈ ಕಾರ್ಖಾನೆಗಳವರು ಹಣವನ್ನು ಕೊಡಬೇಕಾಗಿದೆ ಆ ಹಣವನ್ನು ಸರ್ಕಾರ ನೇರವಾಗಿಕೊಡಲಿ. ನಾಳೆಯಿಂದಲೇ ಸಂಧಾನ ಮಾಡುತ್ತೇವೆ ಎಂಬ ಭರವಸೆಯನ್ನುಕೊಡಿ. ಪೇಮೆಂಟ್ ನಾಳೆಯಿಂದಲೇ ಪ್ರಾರಂಭವಾಗಲಿ. ಹೇಗಿದ್ದರೂ ಸಕ್ಕರೆ ನಿಮ್ಮ ವಶದಲ್ಲಿಯೇ ಇದೆ. ಇದನ್ನು ಹರಾಜು ಹಾಕುವುದಕ್ಕೆ 2–3 ತಿಂಗಳಾಗಬಹುದು. ಸರ್ಕಾರಕ್ಕೆ ಹಣವಂತೂ ಬಂದೇ ಬರುತ್ತದೆ. It's only a book adjustment. ಈ ಒಂದು ಸಣ್ಣ ಸಹಾಯವನ್ನು ರೈತರ ಪರವಾಗಿ ಸರ್ಕಾರ ಮಾಡಬೇಕಾದಂತಹ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ

ಸೃಷ್ಟಿಯಾಗಿರುವಂತಹ ಸಮಯದಲ್ಲಿ ರೈತರ ಪರವಾಗಿ ನಾವು ಇದ್ದೇವೆ ಸಕ್ಕರೆಯನ್ನು ನಾವು ಹರಾಜು ಹಾಕಿಕೊಂಡು ನಮ್ಮ ಖಜಾನೆಗೆ ಹಣವನ್ನು ತೆಗೆದುಕೊಳ್ಳುತ್ತೇವೆ ಎಂದು ರೈತರಿಗೆ ಒಂದು ಆಶ್ವಾಸನೆಯನ್ನು ತುಂಬುವಂತಹ ಕೆಲಸವನ್ನು ನೀವು ಮಾಡಬೇಕಾಗಿದೆ. ಆ ರೈತರು ಅವರಿಗೆ ಬಾಕಿ ಹಣ ಬರಲಿಲ್ಲವೆನ್ನುವ ಕಾರಣಕ್ಕಾಗಿ ವಿಷ ಕುಡಿಯುವ ಪರಿಸ್ಥಿತಿ ನಿರ್ಮಾಣವಾಗಿದೆ ಆ ಹಿನ್ನೆಲೆಯಲ್ಲಿ ಸರ್ಕಾರದವರು ನಾವು ರೈತರ ಪರವಾಗಿ ಇದ್ದೇವೆ, ನಮ್ಮ ಖಜಾನೆಯಿಂದ ಹಣವನ್ನು ತುಂಬಿಕೊಟ್ಟು ಸಕ್ಕರೆ ಹರಾಜಿನಿಂದ ಹಣವನ್ನು ಖಜಾನೆಗೆ ತುಂಬಿಸಿ ಕೊಳ್ಳುತ್ತೇವೆ ಎನ್ನುವ ಒಂದು ಸಣ್ಣ ಹೆಜ್ಜೆಯನ್ನು ಇಡುವ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರರೈತರ ಪರವಾಗಿ ಭರವಸೆಯ ಮಾತನ್ನಾಡಬೇಕು ಎಂದು ತಮ್ಮ ಮೂಲಕ ಸರ್ಕಾರದವರಲ್ಲಿ ವಿನಂತಿ ಮಾಡುತ್ತೇನೆ. ಈ ವಿಚಾರ ಇಲ್ಲಿ ಬಂದಿದೆ. ಮೂರನೆಯದಾಗಿ, ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಈ ರೈತರ ಆತ್ಮಹತ್ಯೆಗೆ ನಾವು ಪ್ರೇರಣೆ ಕೊಡುತ್ತಾ ಹೋದರೆ ಇನ್ನೂ ಕೂಡ ಆತ್ಮಹತ್ಯೆ ಜಾಸ್ತಿಯಾಗುತ್ತದೆ. ಸರ್ಕಾರ ರೈತರ ಆತ್ಮಹತ್ಯೆಗೆ ಪ್ರೇರಣೆಕೊಟ್ಟ ಹಾಗಾಗುತ್ತದೆ. ದಯವಿಟ್ಟು ಈ ರೀತಿಯ ಭಾವನೆ ನಿಮ್ಮ ಮನಸ್ಸಿನಲ್ಲಿ ಇದ್ದರೆ ದಯವಿಟ್ಟು ಆ ತಪ್ಪು ಭಾವನೆಯನ್ನು ತಲೆಯಿಂದ ತೆಗೆದು ಹಾಕಿ. ನನಗೆ ಹಣ ಬರುತ್ತದೆ ಎನ್ನುವ ಕಾರಣಕ್ಕೋಸ್ಕರ ಜೀವ ಕಳೆದುಕೊಳ್ಳುವ ಸಲುವಾಗಿ ವಿಷವನ್ನು ಕುಡಿಯುವ ಸ್ಥಿತಿ ನಮ್ಮ ದೇಶದಲ್ಲಿ ಇಲ್ಲ. ಅದರಲ್ಲೂ ಕೂಡ ಅನ್ನದಾತನಲ್ಲಿ ಆ ಒಂದು ಭಾವನೆ ಇಲ್ಲ. ಮಾನವೀಯತೆಯ ಕಾರಣಕ್ಕೋಸ್ಕರ ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಯಾವ ನೊಂದ ಕುಟುಂಬದ ಯಜಮಾನನು ಆತ್ಮಹತ್ಯೆಯನ್ನು ಮಾಡಿಕೊಂಡರೆ ಆ ಮನೆಯ ಪರಿಸ್ಥಿತಿ ಹೇಗೆ ಇರುತ್ತದೆ ಎಂಬುದನ್ನು ತಾವೇ ಯೋಚನೆ ಮಾಡಿ ನೋಡಿ.ಆ ಸನ್ನಿವೇಶಕ್ಕೆ ಸಿಲುಕಿ ಹೋದಂತಹ ಆಕುಟುಂಬದ ಮನೆಯ ಯಜಮಾನ ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾದ ಮೇಲೆ ಆ ಮನೆಯ ಕುಟುಂಬದ ವಾತಾವರಣ, ಸ್ಥಿತಿ ಏನಾಗಬಹುದು ನೀವೇ ಲೆಕ್ಕ ಹಾಕಿ. ಆ ಮನೆಯ ಹೆಂಗಸರು, ಮಕ್ಕಳ ಗತಿ ಏನಾಗಬಹುದು ಲೆಕ್ಕ ಹಾಕಿ. ಒಂದು ಕಡೆಯಲ್ಲಿ ಸಾಲದ ಹೊರೆ ಮತ್ತೊಂದು ಕಡೆಯಲ್ಲಿ ಮನೆಯ ಯಜಮಾನನನ್ನು ಕಳೆದುಕೊಂಡಂತಹ ವಾತಾವರಣ ಇರುತ್ತದೆ. ಯಾರು ಈ ಒಂದು ಪರಿಸ್ಥಿತಿಯನ್ನು ಎದುರಿಸಬೇಕಾಗಿತ್ತೋ ಆತನೇ ವಿಷ ಕುಡಿದು ಹೋದ ಮೇಲೆ ಆ ಮನೆಯಲ್ಲಿ ಎಂತಹ ವಾತಾವರಣ ಉಂಟಾಗಬಹುದು ಎನ್ನುವುದನ್ನು ವಿಚಾರ ಮಾಡಿ ನೋಡಿ. ಈ ಎಲ್ಲಾ ಕಾರಣಗಳಿಂದಾಗಿ, ಅವರಿಗೆ ಬಾಕಿ ಕೊಡಬೇಕಾದ ಹಣವನ್ನು ಕೊಡಿಸುವುದಕ್ಕೆ ಏನೇನು ಕ್ರಮಗಳನ್ನು ತೆಗೆದು ಕೊಳ್ಳುತ್ತಿದ್ದೇವೆ, ಅಷ್ಟೇ ಜವಾಬ್ದಾರಿಯಿಂದ ಈ ಆತ್ಮಹತ್ಯೆ ಮಾಡಿಕೊಂಡಂತಹ ರೈತರ ಕುಟುಂಬಗಳವರಿಗೆ ನಿಮ್ಮ ಕುಟುಂಬದ ಪರವಾಗಿ ನಾವು ಇದ್ದೇವೆ ಎಂದು ಹೇಳಿ ನಿಮ್ಮ ಪರವಾಗಿ ನಾವು ಇದ್ದೇವೆ, ನೀವು ಧೈರ್ಯವಾಗಿ ಇರಿ, ಈ ಸಾಲದ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ಹೇಳಬೇಕಾಗುತ್ತದೆ. ಯಾವುದೇ ಕಾರಣಕ್ಕೂ ಕೂಡ ನಿಮ್ಮಕುಟುಂಬ ಬೀದಿ ಪಾಲಾಗುವುದಕ್ಕೆ ಬಿಡುವುದಿಲ್ಲ ಎಂದು ಶ್ವಾಸನೆಯನ್ನು ನೀಡಬೇಕಾಗುತ್ತದೆ. ಆ ಕುಟುಂಬದ ಸದಸ್ಯರು ಯಾವುದೇ ಕಾರಣಕ್ಕೂ ಕೂಡ ಆತ್ಮವಿಶ್ವಾಸವನ್ನು ಕಳೆದು ಕೊಳ್ಳುವುದು ಬೇಡ ಎಂಬ ಭರವಸೆಯ ಮಾತುಗಳನ್ನು ಸರ್ಕಾರ ಹೇಳಬೇಕಾಗುತ್ತದೆ. ಹೀಗಾಗಿ ಸುಮಾರು 40 ಜನರೈತರು ಏನು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದು ಈ ಪೈಕಿ ಕೆಲವರು ಆಸ್ಪತ್ರೆಯನ್ನು ಸೇರಿದ್ದಾರೆ. ಅವರೆಲ್ಲರಿಗೂ ಕೂಡ ಸರ್ಕಾರ ನಿಮ್ಮ ಸಾಲದ ಜವಾಬ್ದಾರಿಯನ್ನು ನಾವು ತೆಗೆದು ಕೊಳ್ಳುತ್ತೇವೆ. ಬ್ಯಾಂಕುಗಳಿಗೆ ನಾವು ಹೇಳುತ್ತೇವೆ ಮತ್ತು ನಿಮ್ಮ ಕೈ ಸಾಲದ ಬಗ್ಗೆ ನಾವು ಅಧಿಕೃತವಾಗಿ ಮಾಹಿತಿಯನ್ನು ಪಡೆದು ಕೊಳ್ಳುತ್ತೇವೆ ಆ ಸಾಲವನ್ನು ತೀರಿಸುತ್ತೇವೆ. ನಿಮ್ಮ ಕುಟುಂಬದ ಪರವಾಗಿ ನಾವು ಇದ್ದೇವೆಎಂದು ಹೇಳಬೇಕಾಗುತ್ತದೆ. ಕಂದಾಯ ಸಚಿವರಾದ ಮಾನ್ಯ ಶ್ರೀನಿವಾಸ ಪ್ರಸಾದ್ ಅವರು ನಂಜನಗೂಡಿನಲ್ಲಿ ಆತ್ಮಹತ್ಯೆ ಮಾಡಿ ಕೊಂಡರೈತನ ಮನೆಗೆ ಹೋಗಿ ನಿಮಗೆ ಆಶ್ರಯ ಮನೆ ಬೇಕಾ ನಾವು ಕೊಡಿಸುತ್ತೇವೆ. ವಿಧವಾ ವೇತನ ಬೇಕಾ ನಾವು ಕೊಡಿಸುತ್ತೇವೆ ಮತ್ತು ನಿಮ್ಮಮೇಲಿನ ಸಾಲದ ಹೊರೆಯನ್ನು ಕೂಡ ನಾವು ಸೂಕ್ಷ್ಮವಾಗಿ ಅವಲೋಕನ

ಮಾಡುತ್ತೇವೆ ಎಂದು ಅವರ ಕಷ್ಟಗಳಿಗೆ ಸ್ಪಂದನೆ ಮಾಡಿದಂತಹ ಸಚಿವರು ಎಂದು ಪತ್ರಿಕೆಯ ಮುಖಪುಟದಲ್ಲಿ ಬಂದಿದೆ. ದಯವಿಟ್ಟು ಈ ರೀತಿಯ ನೊಂದ ಕುಟುಂಬಗಳಿಗೆ ಸ್ಪಂದನೆ ಮಾಡುವಂತಹ ಕೆಲಸ ಆಯಾಯಜಿಲ್ಲೆಯ ಉಸ್ತುವಾರಿ ಸಚಿವರಿಂದ ಆಗಬೇಕಾಗಿದೆ. ಅವರ ಜಿಲ್ಲೆಯಲ್ಲಿ ರೈತರು ಆತ್ಮಹತ್ಯೆ ಏನು ಮಾಡಿಕೊಂಡಿದ್ದಾರೆ ಆ ಕುಟುಂಬಗಳವರನ್ನು ಭೇಟಿ ಮಾಡುವಂತಹ ಕೆಲಸವನ್ನು ಮೊದಲು ಮಾಡಬೇಕಾಗಿದೆ. ಈ ಸದನ ನಡೆಯುತ್ತಿದ್ದರೂ ಕೂಡ ಮಾನ್ಯ ಮುಖ್ಯಮಂತ್ರಿಗಳ / ಮಾನ್ಯ ಸಭಾ ನಾಯಕರ ಅನುಮತಿಯನ್ನು ತೆಗೆದುಕೊಂಡು ಹೋಗಿ ತಕ್ಷಣ ಆ ಕುಟುಂಬಗಳವರ ಹತ್ತಿರ ಹೋಗಿ ಮಾತನಾಡಿಸಿ ಸಾಂತ್ವನ ನೀಡಿ ಅವರ ಕಷ್ಟಗಳಿಗೆ ಸ್ಪಂದನೆ ಮಾಡುವಂತಹ ಕೆಲಸವನ್ನು ಮಾಡಬೇಕಾಗಿದೆ. ಆ ಕುಟುಂಬದ ಪರವಾಗಿ ನಾವು ಇದ್ದೇವೆ ಸರ್ಕಾರ ಇದೆ ಎಂದು ಆ ಕುಟುಂಬದವರಿಗೆ ಭರವಸೆ ನೀಡುವ ಕೆಲಸ ಈ ಸರ್ಕಾರದಿಂದ ಆಗಬೇಕು. ಮತ್ತು ಅವರಿಗೆ ಸೂಕ್ತವಾದ ಪರಿಹಾರವನ್ನು ನೀಡುವ ಕೆಲಸ ಆಗಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ರೈತ ಕಾರ್ಖಾನೆಗಳವರಿಗೆ ನೀಡಿದಂತಹ ಕಬ್ಬಿನ ಬಾಕಿಯನ್ನು ಕೊಡುವಂಥಾದ್ದು ಆಗಬೇಕಾಗಿದೆ. ಮತ್ತು ಸರ್ಕಾರ ಬಾಕಿ ಹಣವನ್ನು ಕೊಡುತ್ತೇವೆಂದು ಘೋಷಣೆ ಮಾಡಿದ್ದು ಆ ಬಾಕಿ ಹಣವನ್ನು ನೀಡುವಂತಹ ವಿಚಾರದಲ್ಲಿ ನಾವು ಚರ್ಚೆಯನ್ನು ಮಾಡುತ್ತಿದ್ದೇವೆ. ನಾನು ಒಂದು ವಿಚಾರವನ್ನು ಸೂಕ್ಷ್ಮವಾಗಿತಮ್ಮ ಗಮನಕ್ಕೆ ತರಬಯಸುತ್ತೇನೆ. ಒಂದು ಕಡೆಗೆ ರೈತನಿಗೆ ಬಾಕಿ ಹಣವನ್ನು ಕೊಡಬೇಕಾಗಿದೆ. ಇನ್ನೊಂದು ಕಡೆಯಲ್ಲಿ ಇನ್ನೊಂದು ತಿಂಗಳು ಬಿಟ್ಟರೆಕಬ್ಬನ್ನು ಅರೆಯುವುದಕ್ಕೆ ಪ್ರಾರಂಭವಾಗುತ್ತದೆ. ನಮ್ಮ ಭಾಗದಲ್ಲಿ ಜುಲೈ ಕೊನೆಯ ಭಾಗದಲ್ಲಿ ಈ ಕಾರ್ಯವನ್ನು ಪ್ರಾರಂಭ ಮಾಡಬೇಕಾಗಿದೆ. ರೈತಭೂಮಿಯಲ್ಲಿ ಹಾಕಿದ್ದಂತಹಕಬ್ಬು ಬೆಳೆದು ನಿಂತಿದೆ. ಅದನ್ನು ಸಕಾಲದಲ್ಲಿ ಅರೆಸುವುದಕ್ಕೆ ತಾವು ಹೆಚ್ಚಿನಗಮನವನ್ನು ನೀಡಬೇಕಾಗುತ್ತದೆ. ನಿಮ್ಮ ಕಡೆಗೆ ಅಕ್ಟೋಬರ್ ನವೆಂಬರ್ ತಿಂಗಳಲ್ಲಿ ಈ ಕಬ್ಬು ಬೆಳೆ ಕಟಾವಿಗೆ ಬರುತ್ತದೆ. ನಮಗೂ ನಿಮಗೂ ಮೂರುತಿಂಗಳು ವ್ಯತ್ಯಾಸವಿದೆ. ನಮ್ಮ ಭಾಗದಲ್ಲಿ ಜುಲೈ ತಿಂಗಳ ಕೊನೆಯ ಭಾಗದಲ್ಲಿಶುರು ಮಾಡಿ ಆಗಸ್ಟ್ ತಿಂಗಳಿನವರೆಗೂ ಕಬ್ಬನ್ನು ಅರೆಯುವುದಕ್ಕೆ ಪ್ರಾರಂಭ ಮಾಡುತ್ತಾರೆ. ಇನ್ನೊಂದು ತಿಂಗಳು ಬಿಟ್ಟರೆ ಕಬ್ಬನ್ನು ಅರೆಯುವ ಕೆಲಸ ಪ್ರಾರಂಭವಾಗುತ್ತದೆ ಅದಕ್ಕೆ ಬೇಕಾದತಯಾರಿ ಏನು ಮಾಡಿಕೊಂಡಿದ್ದೀರಿ? ಒಂದು ಕಡೆಯಲ್ಲಿ ಸಕ್ಕರೆಯನ್ನು seize ಮಾಡಿದ್ದೀರಿ. ಮತ್ತೊಂದು ಕಡೆಯಲ್ಲಿ ಸಕ್ಕರೆಯನ್ನು ಅರೆಯುವ ಕಾರ್ಖಾನೆಗಳವರ ಮನಸ್ಥಿತಿ ಏನು ಎಂದು ತಮಗೆ ಸ್ಪಷ್ಟವಾಗಿಗೊತ್ತಿದೆ. ಈ ಹಿನ್ನೆಲೆಯಲ್ಲಿ ರೈತರನ್ನು ಪೂರ್ಣ ವಿಶ್ವಾಸಕ್ಕೆ ತೆಗೆದುಕೊಂಡು ಸಕಾಲದಲ್ಲಿ ನಾವು ಕಬ್ಬನ್ನು ಅರೆಯುವುದಕ್ಕೆ ಪ್ರಾರಂಭ ಮಾಡುತ್ತೇವೆ ಒಂದು ದಿನವೂ ಕೂಡ ವಿಳಂಬ ಮಾಡುವುದಕ್ಕೆ ಬಿಡುವುದಿಲ್ಲ. ಎಲ್ಲ ಕಾರ್ಖಾನೆಗಳವರನ್ನೂ ಕೂಡ ವಿಶ್ವಾಸಕ್ಕೆತೆಗೆದು ಕೊಂಡು ಈ season ನಲ್ಲಿ ಸಕಾಲದಲ್ಲಿ ಕಬ್ಬನ್ನು ಅರೆಯುವುದಕ್ಕೆ ಪ್ರಾರಂಭ ಮಾಡುತ್ತೇವೆ. ಇದರಲ್ಲಿ ವಿಳಂಬ ಧೋರಣೆ ಇಲ್ಲ ಎಂಬ ಸ್ಪಷ್ಟವಾದ ಸಂದೇಶ ಇಲ್ಲಿಂದ ಹೋಗದಿದ್ದರೆ ಇದಕ್ಕಿಂತ ಹೆಚ್ಚಿನ ಅನಾಹುತವನ್ನು ಅಂದರೆ ಎರಡು ಪಟ್ಟು ಹೆಚ್ಚಿನ ಅನಾಹುತವನ್ನು ನಾವು ಕಾಣಬೇಕಾಗುತ್ತದೆ. ಇಡೀ ರೈತ ಸಮುದಾಯದವರು ತಮ್ಮ ಮೇಲೆ ದೊಣ್ಣೆಯನ್ನು ಬೀಸುತ್ತಾರೆ. ಈ ದೊಣ್ಣೆಯಿಂದ ನೀವು ತಪ್ಪಿಸಿಕೊಳ್ಳದಿದ್ದರೆ, ಇನ್ನೂ ಎಚ್ಚರವಾಗದಿದ್ದರೆ, ಮುಂದೆ ಬಹಳ ತೊಂದರೆಯನ್ನು ನೀವು ಅನುಭವಿಸಬೇಕಾಗುತ್ತದೆ. ಇದಕ್ಕೆ ಒಂದು ವಿಶೇಷವಾದ ಸಮಿತಿಯನ್ನು, ಮಂತ್ರಿಗಳ, ಅಧಿಕಾರಿಗಳ ತಂಡವನ್ನು ರಚನೆ ಮಾಡದಿದ್ದರೆ ತೊಂದರೆಯಾಗುತ್ತದೆ. ಈ ರೀತಿಯ ಒಂದು ತಂಡವನ್ನು ರಚನೆ ಮಾಡಿ ಮುಂಬರುವ ದಿನಗಳಲ್ಲಿ ಬರುವಂತಹ ಈ ಕಬ್ಬಿನ ಸಮಸ್ಯೆಯ ಪರಿಹಾರಕ್ಕೆ ಬೇಕಾದ ಸೂಕ್ತ ಕ್ರಮಗಳನ್ನು ಕಾಲಕಾಲಕ್ಕೆ ತೆಗೆದುಕೊಳ್ಳದೇ ಹೋದರೆ ನಿಶ್ಚಿತವಾಗಿಯೂ ಬಹಳ ದೊಡ್ಡ ಆಘಾತ ನಿಮಗೆ ಕಾದಿದೆ ಎಂದು ಸೂಕ್ಷ್ಮವಾಗಿ ಹೇಳುವುದಕ್ಕೆ ಬಯಸುತ್ತೇನೆ. ಒಂದು ಕಡೆಯಲ್ಲಿ ತಕ್ಷಣ ರೈತರಿಗೆ ಬರಬೇಕಾದ ಹಣವನ್ನು ಸಂದಾಯ ಮಾಡುವುದಕ್ಕೆ ಹೆಚ್ಚಿನಗಮನವನ್ನು ಕೊಡಬೇಕು. ನೊಂದ ಕುಟುಂಬಗಳಿಗೆ ತಕ್ಷಣ ಸ್ಪಂದನೆ ಮಾಡುವಂತಹ ಕ್ರಮಗಳನ್ನು ನೀವು ತೆಗೆದುಕೊಳ್ಳಬೇಕು. ಮೂರನೆಯದಾಗಿ ಸಕಾಲದಲ್ಲಿ ಬೆಳೆದು

ನಿಂತಕಬ್ಬನ್ನು ಅರೆಯುವುದಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕು. ಆ ಸಕ್ಕರೆ ಕಾರ್ಖಾನೆಗಳವರನ್ನು ಕರೆಸಿ ಅವರಲ್ಲಿ ಮಾತನಾಡಿ ಅವರ ಕಷ್ಟ ಸುಖಗಳನ್ನು ಕೇಳಿ ರೈತರಕಬ್ಬನ್ನು ಅರೆಯುವುದಕ್ಕೆ ಬೇಕಾದ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

**ಸಭಾಪತಿಯವರು:–** ಎಲ್ಲಾ ವಿಷಯ ಆಯಿತು. ಸಮಯ ಆಗಿದೆ.

**ಶ್ರೀ ಸಿ.ಹೆಚ್. ವಿಜಯಶಂಕರ್:–** ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಮಾನ್ಯ ಸಭಾ ನಾಯಕರೆತಮಗೆ ಬಹಳ ಸ್ಪಷ್ಟವಾಗಿಗೊತ್ತಿದೆ. ಕಬ್ಬು ಅರೆದು ಲಾಭ ಮಾಡುವುದಕ್ಕೆಯಾರಿಗೂ ಕೂಡ ಸಾಧ್ಯವಿಲ್ಲ ಎಂಬುದುತಮಗೆ ಗೊತ್ತಿದೆ. ಆ ಹಿನ್ನೆಲೆಯಲ್ಲಿ cogeneration ನಿಂದ ಹಿಡಿದುಕೊಂಡು, ಎಥೆನಾಲ್, ಮೊಲ್ಯಾಸಸ್‌ನಿಂದ ಹಿಡಿದುಕೊಂಡು ಕಬ್ಬಿನ ಉಪ ಉತ್ಪನ್ನಗಳಿಗೆ ನಾವು ಹೆಚ್ಚಿನ ಆದ್ಯತೆಯನ್ನು ಕೊಡದಿದ್ದರೆ ಕಬ್ಬಿನ ಬೆಳೆಗಾರರಿಗೆ ನಾವು ನ್ಯಾಯವನ್ನು ಕೊಡುವುದಕ್ಕಾಗುವುದಿಲ್ಲ. ಒಂದು ಕಡೆಗೆ ನಾನು ಹೇಳಿದಂತಹ ತಾತ್ಕಾಲಿಕವಾದ ಪರಿಹಾರ ಮತ್ತು ಇನ್ನೊಂದುಕಡೆಗೆ ಶಾಶ್ವತವಾದ ಪರಿಹಾರವನ್ನು ನೀಡಬೇಕಾಗುತ್ತದೆ. ಕಬ್ಬು ಅರೆಯುವಂತಹ ಪ್ರತಿ ಕಾರ್ಖಾನೆಯನ್ನು ಸ್ವಾವಲಂಬಿಯನ್ನಾಗಿ ಮಾಡಬೇಕು. ಅದಕ್ಕೆ ಆರ್ಥಿಕ ಶಕ್ತಿಯನ್ನು ತುಂಬಬೇಕು. ಪೂರಕ ಉತ್ಪನ್ನಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಆ ಹಿನ್ನೆಲೆಯಲ್ಲಿ ಎಚ್ಚರವಾಗಿ ಪ್ರತಿ ಕಾರ್ಖಾನೆಯನ್ನೂ ಕೂಡ ನೀವು ಸ್ವಾವಲಂಬಿಯನ್ನಾಗಿ ಮಾಡುವಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ನೀವು ಯಾವುದೇ ಕಾರಣಕ್ಕೂ ಕೂಡ ರೈತನಿಗೆ ನ್ಯಾಯವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಕಬ್ಬು ಬೆಳೆದ ರೈತಯಾವುದೇ ಕಾರಣಕ್ಕೂ ಕೂಡ ಲಾಭವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ತಾತ್ಕಾಲಿಕವಾದ ಕ್ರಮಗಳನ್ನು ತೆಗೆದುಕೊಂಡು ಸದನದಲ್ಲಿ ಘೋಷಣೆ ಮಾಡಬೇಕು. ಸಕಾಲದಲ್ಲಿ ಕಬ್ಬನ್ನು ಅರೆಯುವುದಕ್ಕೆ ಬೇಕಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಶಾಶ್ವತವಾದ ಪರಿಹಾರವನ್ನು ತೆಗೆದುಕೊಳ್ಳುವ ಹಿನ್ನೆಲೆಯಲ್ಲಿ ಸರ್ಕಾರ ಎಚ್ಚರವಾಗಬೇಕೆಂಬ ಮನವಿಯನ್ನು ಮಾಡಿಕೊಂಡುತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

## 2. ಪ್ರಕಟಣೆ

**ಸಭಾಪತಿಯವರು:–** ಈಗ ಎರಡು ಪ್ರಕಟಣೆಇದೆ.

1. ಕರ್ನಾಟಕ ವಿಧಾನ ಪರಿಷತ್ತಿನಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ನಿಯಮ 222ರ ಮೇರೆಗೆ ಕಳೆದ ಅಧಿವೇಶನದಲ್ಲಿರಚಿಸಲಾಗಿದ್ದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸದಸ್ಯರನ್ನು ಪ್ರಸಕ್ತಅಧಿವೇಶನಕ್ಕೂ ಮುಂದುವರೆಸಲಾಗಿದೆ.

2. ಕರ್ನಾಟಕ ವಿಧಾನ ಪರಿಷತ್ತಿನಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 9ರ ಮೇರೆಗೆ ಸಭಾಪತಿಯವರ ಮತ್ತು ಉಪ ಸಭಾಪತಿಯವರಗೈರುಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಈ ಮುಂದಿನ ಸದಸ್ಯರನ್ನು ನಾಮನಿರ್ದೇಶನಮಾಡಲಾಗಿದೆ.

    1. ಶ್ರೀ ಬಸವರಾಜ ಹೊರಟ್ಟಿ
    2. ಶ್ರೀ ರಾಮಚಂದ್ರಗೌಡ
    3. ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ
    4. ಶ್ರೀ ಡಿ.ಎಸ್.ವೀರಯ್ಯ

ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಸದಸ್ಯರುಗಂಭೀರವಾದ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಹಾಗಾಗಿ ಆ ವಿಷಯವನ್ನುಕೂಡ ನಾನು ಚರ್ಚೆ ಮಾಡಬೇಕಾಗುತ್ತದೆ. ಆದರೆಊಟದ ಸಮಯ ಮೀರುತ್ತಿರುವಕಾರಣ ನಾನು ಸಭೆಯನ್ನು ಮುಂದೂಡಬೇಕಾಗಿದೆ.ಆದ್ದರಿಂದನಾನು ಕೇವಲ ಊಟಕ್ಕೆ ಮಾತ್ರ ಸಮಯವನ್ನುಕೊಡದೆಊಟ ಮತ್ತುಚರ್ಚೆಯ ಹಿನ್ನಲೆಯಲ್ಲಿ ಸದನವನ್ನು 3 ಗಂಟೆ 45 ನಿಮಿಷಗಳ ವರೆಗೆ ಮುಂದೂಡುತ್ತಿದ್ದೇನೆ.

**(ಸಭಾಪತಿಯವರ ಉಪಸ್ಥಿತಿ)**

**(ಮಧ್ಯಾಹ್ನ 2 ಗಂಟೆ 11 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಸಾಯಂಕಾಲ 4 ಗಂಟೆ 25 ನಿಮಿಷಕ್ಕೆ ಸಮಾವೇಶಗೊಂಡಿತು)**

**3. ಸಭೆಯ ಮುಂದಿಡಲಾದಕಾಗದ ಪತ್ರಗಳು**

I. **ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯ) ಅವರು:– ಮಾನ್ಯ ಸಭಾಪತಿಗಳಿಗೆ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಕಾಯ್ದೆ 1951 ಕಲಂ 37(7)ರ ಮೇರೆಗೆ**

1. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ 2013–14ನೇ ಸಾಲಿನ ಪ್ರತ್ರೇಕ ಲೆಕ್ಕಪರಿಶೋಧನಾ ವರದಿ.

**1976ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ ಕಲಂ 47(5)ರ ಮೇರೆಗೆ**

1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 2011–12 ಮತ್ತು 2012–13ನೇ ಸಾಲಿನ ವಾರ್ಷಿಕ ವರದಿ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋದನಾ ವರದಿ.

**1956ರ ಕಪಂನಿ ಅಧಿನಿಯಮ 619(ಎ)(2)ರ ಪ್ರಕರಣದ ಮೇರೆಗೆ**

1. ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ 2013–14ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋದನಾ ವರದಿ ಒಳಗೊಂಡಂತೆ.)
2. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ 2013–14ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋದನಾ ವರದಿ ಒಳಗೊಂಡಂತೆ.)

**ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(6)ರ ಪ್ರಕರಣದ ಮೇರೆಗೆ**

1. ಕನಾಟಕ ಲೋಕಾಯುಕ್ತ ಸಂಸ್ಥೆಯ 2010–11 ಮತ್ತು 2011–12ನೇ ಸಾಲಿನ ಕ್ರೂಢೀಕೃತ ವಾರ್ಷಿಕ ವರದಿಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**II. (ಶ್ರೀ ಎಸ್.ಆರ್ ಪಾಟೀಲ್ (ಸಭಾನಾಯಕರು, ಉನ್ನತ ಶಿಕ್ಷಣ ಹಾಗೂ ಪ್ರವಾಸೋಧ್ಯಮ ಸಚಿವರ ಪರವಾಗಿ) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 200ದ ಪ್ರಕರಣ 50(2),(3) ಮತ್ತು 47(4)ರ ಮೇರೆಗೆ.**

1. ಬೆಂಗಳೂರು ವಿಶ್ವವಿದ್ಯಾಲಯದ 2013–14ನೇ ಸಾಲಿನ 49ನೇ ವಾರ್ಷಿಕ ವರದಿ.
2. ತುಮಕೂರು ವಿಶ್ವವಿದ್ಯಾಲಯದ 2013–14ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ.

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2010ರ ಪ್ರಕರಣ 58(2) ಮೇರೆಗೆ.**

1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2011–12ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.

## 4. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ ಕ.ವಿ.ಪ:–** ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರರಾಷ್ಟ್ರಪತಿ/ರಾಜ್ಯಪಾಲರಿಂದಒಪ್ಪಿಗೆ ಪಡೆದ ಈ ಕೆಳಕಂಡ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ.

## 5. ಸಭೆಯ ಮುಂದಿಡಲಾದಕಾಗದ ಪತ್ರಗಳು

**ಶ್ರೀ ಸಿದ್ದರಾಮಯ್ಯ(ಮಾನ್ಯ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಗಳೇ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ 31 ನೇ ಮಾರ್ಚ್ 2014ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಮಹಾ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ 2015ನೇ ಸಾಲಿನ ಕೆರೆಗಳ ಅಭಿವೃದ್ಧಿ ಪ್ರಾಧಿಕಾರ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರ ವ್ಯಾಪ್ತಿಯ ಕೆರೆಗಳ ಸಂರಕ್ಷಣೆ ಮತ್ತು ಪರಿಸರ ಪುನಶ್ಚೇತನದ ಮೇಲೆ ನೀಡಿರುವಕಾರ್ಯನಿರ್ವಹಣಾ ಲೆಕ್ಕ ಪರಿಶೋಧನ ವರದಿ ಸಂಖ್ಯೆ 1 ಅನ್ನು ಸಭೆಯ ಮುಂದಿಡುತ್ತೇನೆ.

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ 31 ನೇ ಮಾರ್ಚ್ 2014ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಮಹಾ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ 2015ನೇ ಸಾಲಿನ ಸ್ಥಳೀಯ ಸಂಸ್ಥೆಗಳ ವರದಿ ಸಂಖ್ಯೆ 2 ಅನ್ನು ಸಭೆಯ ಮುಂದಿಡುತ್ತೇನೆ.

**ಸಭಾಪತಿಯವರು:–**ಸಭೆಯ ಮುಂದಿಡಲಾಯಿತು.

**6. ನಿಯಮ 68ರ ಅಡಿಯಲ್ಲಿ ಸಾರ್ವಜನಿಕ ಮಹತ್ವದಜರೂರು ವಿಷಯದ ಮೇಲೆ ಮುಂದುವರೆದಚರ್ಚೆ.**

**ವಿಷಯ:– ರಾಜ್ಯದಕಬ್ಬು ಬೆಳೆಗಾರರಿಗೆ ಬೆಂಬಲ ಬೆಲೆ ನೀಡುವಲ್ಲಿ ವಿಳಂಬವಾಗಿರುವ ಬಗ್ಗೆ.**

-----

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ಈಗ ಸದನಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬಂದಿರುವುದು ಬಹಳ ಸಂತೋಷವಾದ ವಿಚಾರ. ಮಾನ್ಯ ಮುಖ್ಯಮಂತ್ರಿಗಳಿಗೆ ಪದ್ದತಿಗೊತ್ತಿದೆ, ಯಾರಾದರೂಅಕಸ್ಮಾತ್ಎಲ್ಲಿಯಾದರೂ ಸಾಲ ಮಾಡಿದ್ದಲ್ಲಿಅದನ್ನು ಮರುಪಾವತಿಒಂದೇ ಸಲಕ್ಕೆ ಮಾಡಲು ಸಾಧ್ಯವಾಗದಿದ್ದಾಗ " ನೋಡು ಈಗ ಇಷ್ಟು ಹಣ ನನ್ನ ಬಳಿಯಿದೆ, ತೆಗೆದಿಕೋ, ಮುಂದಿನ ಸಲ ಉಳಿದಿದ್ದನ್ನು ಕೊಡುತ್ತೇನೆಎನ್ನುವುದುಒಂದು ಸುಸಂಸ್ಕೃತ ಸಮಾಜದ ಪದ್ದತಿ. 2013ನೇ ಸಾಲಿನಲ್ಲಿ ಇಷ್ಟು ಹಣಕೊಡುತ್ತೇವೆ,ಯಾವುದೇ ಪ್ರಭಾವಕ್ಕೆ ಬಗ್ಗುವುದಿಲ್ಲ ಎಂದು ಸರ್ಕಾರಘೋಷಣೆ ಮಾಡಿತ್ತು. ಆವರ್ಷಕ್ಕೆರೈತರಿಗೆ 925 ಕೋಟಿ ರೂಪಾಯಿಗಳನ್ನು ನೀಡಬೇಕಾಗಿರುವುದು ಬಾಕಿಯಿದೆ. ಈಗ ಅದನ್ನು ಪೂರ್ಣ ನೀಡುವುದಕ್ಕೆ ಸಾಧ್ಯವಾದಲ್ಲಿಕೊಡುವುದಾಗಿಅಥವಾ ಸಾಧ್ಯವಾಗದಿದ್ದಲ್ಲಿ ಎಷ್ಟು ಹಣ ನೀಡಲು ಸಾಧ್ಯಅಷ್ಟನ್ನು ನೀಡುವುದಾಗಿ ಸದನದಲ್ಲಿಘೋಷಣೆ ಮಾಡಲಿ. ಇದರಿಂದಕರ್ನಾಟಕರಾಜ್ಯದಲ್ಲಿ ನಡೆಯುತ್ತಿರುವ ಆತ್ಮಹತ್ಯೆಗಳು ನಿಲ್ಲುತ್ತವೆ.ಜೊತೆಗೆ ಈಗ ಇಷ್ಟು ಕೊಟ್ಟಿದ್ದಾರೆ, ಮುಂದೆ ಇಷ್ಟು ಕೊಡಬಹುದುಎಂದು ಈ ಸರ್ಕಾರದ ಬಗ್ಗೆ ರೈತರಿಗೆ ಸ್ವಲ್ಪ ವಿಶ್ವಾಸ ಬರುತ್ತದೆ. ಅದನ್ನು ಬಿಟ್ಟು ಸುಮ್ಮನೆಕೊಡುತ್ತೇವೆಯಾವ ಪ್ರಭಾವಕ್ಕೂ ಒಳಗಾಗುವುದಿಲ್ಲ, ಯಾರಿಗೂ ನಾವು ಬಗ್ಗುವುದಿಲ್ಲ, ಈ ಸರ್ಕಾರರೈತರ ಪರವಾಗಿದೆ.ಎಂದು ಹೇಳುತ್ತಾ ಹೋದಲ್ಲಿ ಕೇವಲ ಭರವಸೆ ಮತ್ತುಘೋಷಣೆಯಿಂದಯಾವುದೇ ಲಾಭ ಆಗುವುದಿಲ್ಲ. ಅದಕ್ಕಾಗಿ ಈ ಸದನಕ್ಕೆ ಬಂದಿರುವ ಮುಖ್ಯಮಂತ್ರಿಯವರಲ್ಲಿ ಪ್ರಾರ್ಥನೆ ಮಾಡುವುದುಏನೆಂದರೆಅವರು ಬಹಳ ಸ್ಪಷ್ಟವಾಗಿ ನಾನು ಖಂಡಿತ ವ್ಯವಸ್ಥೆ ಮಾಡುತ್ತೇನೆಎಂದು ಹೇಳಬೇಕು, ಇದರಿಂದಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರಿಗೂ ಸಹ ವಿಶ್ವಾಸ ಹುಟ್ಟುತ್ತದೆ. ರೈತರಿಗೆ ವಿಶ್ವಾಸತುಂಬುವಂತಹಒಂದು ಮಾತನ್ನುಆಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):– ಮಾನ್ಯ** ಸಭಾಪತಿಗಳೇ, ಕಬ್ಬು ಬೆಳೆಗಾರರಿಗೆ ಬಾಕಿ ಕೊಡಬೇಕಾಗಿರುವ ವಿಚಾರದ ಬಗ್ಗೆ ಎರಡು ಸದನಗಳಲ್ಲಿ ಚರ್ಚೆ ನಡೆಯುತ್ತಿದೆ. ಬೆಳಿಗ್ಗೆ ಈಶ್ವರಪ್ಪನವರುಇದರ ಬಗ್ಗೆ ಮಾತನಾಡಿಒಂದು ಸಲಹೆಯನ್ನುಕೂಡ ನೀಡಿದ್ದಾರೆ.ಇವತ್ತು ನಾವು ಕಾಟಾಚಾರಕ್ಕೆಅಥವಾರೈತರಕಣ್ಣೊರೆಸುವ ಸಲುವಾಗಿ ಪ್ರಯತ್ನಗಳನ್ನು ಮಾಡುತ್ತಿಲ್ಲ. ನಾವು ಕೂಡ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುತ್ತಿದ್ದೇವೆ.

(ಮುಂದು)

**ಶ್ರೀ ಸಿದ್ದರಾಮಯ್ಯ(ಮುಂದು):–**

ನಾವು ಕೂಡಾ ವಾಸ್ತವಿಕ ನೆಲೆಗಟ್ಟಿನಲ್ಲಿ ನಿಂತುಕೊಂಡುಯೋಚನೆ, ಮುಂದಾಲೋಚನೆ ಮಾಡಬೇಕಾಗುತ್ತದೆ.ಸಕ್ಕರೆಕಾರ್ಖಾನೆಯವರು 2500 ರೂ.ಗಳನ್ನು ಕೊಡಬೇಕೆಂದುತೀರ್ಮಾನ

ಮಾಡಲಾಯಿತು.ಅವರುಕೋರ್ಟ್‌ನಲ್ಲಿ ಪ್ರಶ್ನೆ ಮಾಡಿದರು.2500 ರೂ.ಗಳನ್ನು ನಿಗದಿ ಮಾಡಲು ಸರ್ಕಾರಕ್ಕೆಅಧಿಕಾರವಿದೆ.ಅಷ್ಟು ಕೊಡಬೇಕುಎಂದುಕೋರ್ಟ್ಆದೇಶ ಮಾಡಿದೆ.ಇದುಇರುವ ಪರಿಸ್ಥಿತಿ.ಕಳೆದ ಅಧಿವೇಶನವಾದ ಮೇಲೆ 200 ರೂ.ಗಳನ್ನು ಕೊಟ್ಟಿದ್ದೇವೆ. ನಾವು 100 ರೂ.ಗಳನ್ನು ಮತ್ತುಕಾರ್ಖಾನೆಯವರು 100 ರೂ.ಗಳನ್ನು ಕೊಟ್ಟಿದ್ದಾರೆ.2500 ರೂ.ಗಳ ಜೊತೆಯಲ್ಲಿ 150 ರೂ.ಗಳ ಸಬ್ಸಿಡಿಯನ್ನುಕೊಟ್ಟಿದ್ದೇವೆ. 2013–14ನೇ ಸಾಲಿನಲ್ಲಿಕಬ್ಬಿನ ಬೆಲೆ ನಿಗದಿ ಮಾಡಿರುವುದುಕಡಿಮೆಯಾಗಿದೆಎಂದು ಹೋರಾಟ ಮಾಡಿದಾಗ, ಶ್ರೀ ವಿಠಲ್‌ಅರಭಾವಿ,ರೈತಆತ್ಮಹತ್ಯೆ ಮಾಡಿಕೊಂಡಸಂದರ್ಭದಲ್ಲಿ150ರೂ.ಗಳ ಸಬ್ಸಿಡಿಕೊಡುತ್ತೇವೆಎಂದುಘೋಷಣೆ ಮಾಡಿರೈತರಖಾತೆಗೆನೇರವಾಗಿಜಮಾಕೂಡಾ ಮಾಡಿದ್ದೇವೆ. 100 ರೂ.ಗಳನ್ನು ಕೊಟ್ಟಿರುವುದನ್ನುಜಮಾ ಮಾಡಿದ್ದೇವೆ. ಇದುಅಲ್ಲದೆ 2013–14ನೇ ಸಾಲಿನಲ್ಲಿ 100 ರೂ.ಗಳ Purchase Tax ಮತ್ತುಇತರೆ ತೆರಿಗೆಗಳನ್ನು ಮನ್ನಾ ಮಾಡಿದ್ದೇವೆ. 2013–14ನೇ ಸಾಲಿನಲ್ಲಿಒಟ್ಟಾರೆರಾಜ್ಯ ಸರ್ಕಾರದಿಂದ 1173ಕೋಟಿ ರೂ.ಗಳನ್ನು ಕೊಡಲಾಗಿದೆ. ಇಡೀದೇಶದಲ್ಲಿಯಾವ ಸರ್ಕಾರವುಕೊಟ್ಟಿರುವುದಿಲ್ಲ. ರೈತರುಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.ಆದರೆಅವರುಆತ್ಮಹತ್ಯೆ ಮಾಡಿಕೊಳ್ಳಬಾರದು ನಮಗೂ ಕೂಡಾತುಂಬಾ ನೋವಾಗುತ್ತದೆ.ನಾವು ವ್ಯವಸಾಯ ಮಾಡುತ್ತೇವೆ. ನಮ್ಮದುರೈತಜಂಟಿಕುಟುಂಬ.ಈಗಲೂ 20 ಎಕರೆಯಲ್ಲಿಕಬ್ಬನ್ನು ಬೆಳೆಯುತ್ತೇವೆ. ನನ್ನಅಣ್ಣ–ತಮ್ಮಂದಿರು ಬೇಸಾಯ ಮಾಡುತ್ತಾರೆ.ಯಾರುಆತ್ಮಹತ್ಯೆ ಮಾಡಿಕೊಳ್ಳಬಾರದು.ಆತ್ಮಹತ್ಯೆ ಪರಿಹಾರವಲ್ಲ. ಅನ್ನವನ್ನುಉತ್ಪಾದನೆ ಮಾಡುವಅನ್ನದಾತರೈತ.ಯಾವಕಾರಣಕ್ಕೂಆತ್ಮಹತ್ಯೆ ಮಾಡಿಕೊಳ್ಳಬಾರದು.ನಾವು ಏನು ಪ್ರಯತ್ನವನ್ನು ಮಾಡಿರುವುದಿಲ್ಲ, ಸುಮ್ಮನೆ ನಾಟಕವಾಡುತ್ತಿದ್ದಾರೆಎಂದು ವಿರೋಧ ಪಕ್ಷದವರು ಹೇಳುತ್ತಾರೆ.ನಾವು ಎಲ್ಲಾ ಪ್ರಯತ್ನಗಳನ್ನು ಮಾಡಿದ್ದೇವೆ. ಐದಾರು ಸಾರಿ ಸಕ್ಕರೆಕಾರ್ಖಾನೆಯವರನ್ನುಕರೆದು ಮಾತನಾಡಿದ್ದೇವೆ. State Advised Price (SAP) Act ಎಂದು ಈ ಸದನದಲ್ಲಿಯೇಒಂದುಕಾನೂನನ್ನು ಮಾಡಿಕೊಂಡಿದ್ದೇವೆ. ಹಿಂದೆ ಮಾನ್ಯಜಗದೀಶ್ ಶೆಟ್ಟರವರು ಮುಖ್ಯಮಂತ್ರಿಗಳಾಗಿದ್ದಾಗ ಕಾನೂನು ಮಾಡಲಾಗಿದೆ.ಆ ಕಾನೂನುಗಳು ಇವೆ ನಿಜ. ಈಗ ಪರಿಸ್ಥಿತಿ ಏನು ಆಗಿದೆಎಂದರೆ, 2008–09ರಲ್ಲಿ ಕಬ್ಬುಬೆಳೆಯುತ್ತಿದ್ದಏರಿಯಾಗಿಂತ ಈಗ ಎರಡು ಪಟ್ಟು ಜಾಸ್ತಿಯಾಗಿದೆ.2015–16ನೇ ಸಾಲಿನಲ್ಲಿ 6,70,000 ಹೆಕ್ಟೇರ್ ಪ್ರದೇಶದಲ್ಲಿಕಬ್ಬು ಬೆಳೆಯಲಾಗಿದೆ. 2008–2009ರಲ್ಲಿ 1,60,000ಮೆಟ್ರಿಕ್‌ಟನ್ ಸಕ್ಕರೆ, ಸಕ್ಕರೆ ಕಾರ್ಖಾನೆಗಳಿಂದ ಬರುತ್ತಿತ್ತು. ಇವತ್ತು 49ಲಕ್ಷ ಮೆಟ್ರಿಕ್‌ಟನ್ ಹೆಚ್ಚು ಆಗಿದೆ.ಬಹಳ ಜಾಸ್ತಿಯಾಗಿದೆ.ಅಂತರರಾಷ್ಟ್ರೀಯ ಮಟ್ಟದಲ್ಲಿ ಸಕ್ಕರೆಯನ್ನು ಕೇಳುವವರು ಇಲ್ಲ. ರಫ್ತು ಮಾಡಲುಆಗುತ್ತಿಲ್ಲ. International Market ನಲ್ಲಿಕೊಳ್ಳುವವರು ಇಲ್ಲ. 2013–14ನೇ ಸಾಲಿನಲ್ಲಿ ಸಕ್ಕರೆ ಬೆಲೆ 2500–2600 ರೂ.ಗಳಷ್ಟು ಇತ್ತು.ಇವತ್ತು 1900–2200 ರೂ.ಗೆ ಬಂದಿದೆ.2004–05ನೇ ಸಾಲಿನಲ್ಲಿ 3000 ರೂ.ಗಳಿಗಿಂತ ಜಾಸ್ತಿ ಇತ್ತು.3300 ರೂ.ಗಳವರೆಗೆ ಆಗ ಹೋಗಿತ್ತು.ಇವತ್ತು ಮಾರುಕಟ್ಟೆಯಲ್ಲಿ ಬಹಳ ದೊಡ್ಡfluctuationಆಗಿದೆ.ನಾನು ರೈತರಲ್ಲಿ ಮನವಿ ಮಾಡಿಕೊಂಡಿದ್ದೇನೆ. ನಾಳೆ ಇದರ ಬಗ್ಗೆ ನಾನು ಉತ್ತರಕೊಡುತ್ತೇನೆ. ಆಗ ಎಲ್ಲವನ್ನು ಹೇಳುತ್ತೇನೆ. ಆತ್ಮಹತ್ಯೆ ಪ್ರವೃತ್ತಿಏನು ನಡೆಯುತ್ತಿದೆಇದುಆಗಬಾರದು.ಆತ್ಮವಿಶ್ವಾಸದಿಂದಇರಬೇಕು.ಸರ್ಕಾರರೈತರಜೊತೆಗೆಇದೆ.ಆಲಿಕಲ್ಲಿನ ಮಳೆ ಬಿದ್ದು ಭತ್ತಎಲ್ಲಾ ನಷ್ಟವಾಗಿದೆ.ಗಂಗಾವತಿ, ರಾಯಚೂರ ಈ ಭಾಗದಲ್ಲಿ ಭತ್ತ ನಷ್ಟವಾಗಿದೆ.ನಾನು ಹೋಗಿ ಎಲ್ಲವನ್ನು ವೀಕ್ಷಣೆ ಮಾಡಿದ್ದೇನೆ. ಮಾನ್ಯಈಶ್ವರಪ್ಪನವರು ಹೋಗಿ ಬಂದಿದ್ದಾರೆ.ನಾನು ಅಲ್ಲಿಗೆ ಹೋದಾಗಒಂದುಹೆಕ್ಟೇರ್‌ಗೆ 25,000 ರೂ.ಗಳ ಪರಿಹಾರವನ್ನು ಸರ್ಕಾರದಿಂದಕೊಡಲಾಗಿದೆ.ಹಿಂದೆಇದೇರೀತಿಆಲಿಕಲ್ಲು ಮಳೆ ಬಿದ್ದುಕಬ್ಬು, ತೋಟಗಾರಿಕಾ ಬೆಳೆಗಳಾದ ದಾಳಿಂಬೆ ಎಲ್ಲಾ ನಾಶವಾಗಿತ್ತು.ಆಗ ಪರಿಹಾರವನ್ನುಕೊಡಲಾಗಿದೆ.ಅಡಿಕೆಗೆ ಪರಿಹಾರವನ್ನುಕೊಡಲಾಗಿದೆ.ಅನೇಕ ಬೆಳೆಗಳಿಗೆ ಬೆಂಬಲ ಬೆಲೆಯನ್ನುಕೊಟ್ಟು ಕೊಂಡುಕೊಳ್ಳಲಾಗಿದೆ.ನಾವು ರೈತರ ಪರವಾಗಿಇದ್ದೇವೆ. ನಾವು ಏನು ಮಾಡಿಲ್ಲಎನ್ನುವುದು ಸರಿಯಲ್ಲ. ರೈತರ ಪರವಾಗಿಎಲ್ಲವನ್ನು

ಮಾಡಿದ್ದೇವೆ. ಆದರೂರೈತರುಇವತ್ತುಆತ್ಮಹತ್ಯೆದಾರಿಯನ್ನು ಹಿಡಿದಿರುವುದು ನಿಜಕ್ಕೂತುಂಬಾ ನೋವಿನ ಸಂಗತಿಯಾಗಿದೆ.ಅನ್ನವನ್ನುಉತ್ಪಾದನೆ ಮಾಡುವಅನ್ನದಾತಆತ್ಮಹತ್ಯೆ ಮಾಡಿಕೊಳ್ಳಬಾರದು.ನಾನು ಅತ್ಯಂತ ವಿನಯಪೂರ್ವಕವಾಗಿಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಸರ್ಕಾರ ನಿಮ್ಮ ಪರವಾಗಿಇರುತ್ತದೆ.ದಯಮಾಡಿ ಈ ದುಸ್ಸಾಹಸಕ್ಕೆ ಕೈ ಹಾಕಬಾರದು. ಆತ್ಮಹತ್ಯೆ ಮಾಡಿಕೊಳ್ಳುವಂತಹ ಪ್ರಯತ್ನವನ್ನು ಮಾಡಲು ಹೋಗಬೇಡಿಎಂದು ಸರ್ಕಾರದ ಪರವಾಗಿ ನಾನು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾಳೆ ಉತ್ತರಕೊಡುವಾಗ ಸರ್ಕಾರ ಏನೇನು ಮಾಡಿದೆಎನ್ನುವ ವಿವರವಾದಉತ್ತರವನ್ನುಕೊಡುತ್ತೇನೆ. ನಾಳೆ ಇರುತ್ತೀರಲ್ಲಈಶ್ವರಪ್ಪನವರೆ?

**ಶ್ರೀ ಕೆ.ಎಸ್.ಈಶ್ವರಪ್ಪ:–**ಖಂಡಿತವಾಗಿಇರುತ್ತೇನೆ.

**ಶ್ರೀ ಸಿದ್ದರಾಮಯ್ಯ:–** ಇವತ್ತೇಉತ್ತರ ಕೇಳುತ್ತಿರುವುದರಿಂದ ನಾಳೆ ಇರುವುದಿಲ್ಲವೇನೋಅಂದುಕೊಂಡೆ.

**ಶ್ರೀ ಕೆ.ಎಸ್.ಈಶ್ವರಪ್ಪ:–**ಇದೇ ವಿಧಾನಪರಿಷತ್ತಿನಲ್ಲಿತಾವೇ ಮುಖ್ಯಮಂತ್ರಿಗಳಾಗಿ 2013ರಲ್ಲಿ 2500 ರೂ.ಗಳನ್ನು ಕೊಡುತ್ತೇವೆಎಂದು ಹೇಳಿದ್ದೀರಿ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಗಳೆ, ನಾವು ಹೇಳಿರುವುದು ನಿಜ. 2013–14ನೇ ಸಾಲಿನಲ್ಲಿ 2500 ರೂ.ಗಳನ್ನು ಹಳೆಯ ಮೈಸೂರಿನಲ್ಲಿ'ex-gate' , ಉತ್ತರಕರ್ನಾಟಕದಲ್ಲಿ'ex-field' ಎಂದು ಏನು ಹೇಳಲಾಗಿತ್ತು ಅದಕ್ಕೆ ನಾವು ಈಗಲೂ ಬದ್ಧರಾಗಿದ್ದೇವೆ. ಅದರಿಂದ ಹಿಂದೆ ಹೋಗುವಂತಹ ಪ್ರಶ್ನೆಯೇಇಲ್ಲ. ಮಾರ್ಚ್, ಏಪ್ರಿಲ್‌ಕೊನೆಯವರೆಗೆಕಬ್ಬುಅರೆಯುವ ಕೆಲಸ ನಡೆದಿತ್ತು. ಆ ಸಮಯದಲ್ಲಿ ನಾವು coercive measures ತೆಗೆದುಕೊಳ್ಳಲು ಆಗುವುದಿಲ್ಲ. ಈಗ ಕಬ್ಬುಅರೆದುಆಗಿದೆ. ಈಗ ನಾವು ಕ್ರಮ ತೆಗೆದುಕೊಳ್ಳಲು ಪ್ರಾರಂಭ ಮಾಡಿದ್ದೇವೆ. ಸಕ್ಕರೆಕಾರ್ಖಾನೆಯವರುಯಾರುಕೊಟ್ಟಿಲ್ಲಅವರ ಸಕ್ಕರೆಯನ್ನುಜಫ್ತು ಮಾಡಿದ್ದೇವೆ. ಇನ್ನು ಮುಂದೆ ಕಾನೂನು ರೀತಿಕ್ರಮತೆಗೆದುಕೊಂಡು ವಸೂಲಿ ಮಾಡುವಂತಹ ಕೆಲಸವನ್ನು ಮಾಡುತ್ತೇವೆ. 200 ರೂ.ಗಳನ್ನು ನಾವು ಕೊಟ್ಟೇಕೊಡಿಸುತ್ತೇವೆಎನ್ನುವುದನ್ನು ಹೇಳಬಯಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸಕ್ಕರೆ ಮಾರಾಟ ಮಾಡಿಕೊಡಿ.

**ಶ್ರೀ ಸಿದ್ದರಾಮಯ್ಯ:–** ಇವರು ಸರ್ಕಾರ ನಡೆಸಿದವರು ಈ ರೀತಿ ಮಾತನಾಡುತ್ತಾರೆ. ನಾಳೆ ಉತ್ತರಕೊಡುವಾಗ ಹೇಳುತ್ತೇನೆ ಬಿಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ನಾಳೆ ಉತ್ತರಕೊಡುತ್ತೀರಾ, ದುಡ್ಡುಕೊಡುತ್ತೀರಾ?

**ಶ್ರಿ ಸಿದ್ದರಾಮಯ್ಯ:–** ಈಗಲೇ ನಾನು ಏನು ಹೇಳಲು ಹೋಗುವುದಿಲ್ಲ. ನಾಳೆ ಉತ್ತರಕೊಡುವ ಸಂದರ್ಭದಲ್ಲಿ ಹೇಳುತ್ತೇವೆ.

**ಸಭಾಪತಿಯವರು:–** ನಿಯಮ 68ರ ಅಡಿಯಲ್ಲಿಎಲ್ಲ ಸದಸ್ಯರಿಗೂ ಮಾತನಾಡಲು ಅವಕಾಶ ಕೊಡಲೇ ಬೇಕು. ಆದಷ್ಟು ಬೇಗ–ಬೇಗ ಸದಸ್ಯರು ಮಾತನಾಡಿದರೆ ಹೆಚ್ಚಿಗೆಜನರಿಗೆ ಮಾತನಾಡಲುಅವಕಾಶವಾಗುತ್ತದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಗಳೆ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಆತ್ಮಹತ್ಯೆಎನ್ನುವಅತ್ಯಂತಕೆಟ್ಟ ಸಂಪ್ರದಾಯದಲ್ಲಿ ನಮ್ಮಅನ್ನದಾತಇವತ್ತು ಬೀಳುತ್ತಿದ್ದಾನೆ. ಸದನದಎಲ್ಲ ಸದಸ್ಯರುಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳು ಮತ್ತು ನಮ್ಮ ನಾಯಕರು ಈಕೆಟ್ಟ ಸಂಪ್ರದಾಯಕ್ಕೆ ಹೋಗಬಾರದುಎನ್ನುವ ಮನವಿ ಮಾಡಿಕೊಂಡಿದ್ದಾರೆ. ಆತ್ಮಹತ್ಯೆ

ನಿಲ್ಲಬೇಕುಎನ್ನುವುದುಎಲ್ಲರ ಇಚ್ಛೆ.ಇದು ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಿದೆ.ಇವತ್ತುಕಬ್ಬು ಬೆಳೆಗಾರರು ಹೆಚ್ಚು ಆತಂಕದಲ್ಲಿದ್ದಾರೆ.ಆ ವಿಷಯವನ್ನುಇಂದುಇಲ್ಲಿಚರ್ಚೆ ಮಾಡಲಾಗುತ್ತಿದೆ.

(ಮುಂದು..)

**ಶ್ರೀ ಬಿ.ಜೆ. ಪುಟ್ಟಸ್ವಾಮಿ**

ಕಬ್ಬು ಬೆಳೆಗಾರರ ವಿಚಾರದಲ್ಲಿ ನಮ್ಮ ನಾಯಕರು ಮತ್ತುಎಲ್ಲಾ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರಗಳ ಬಗ್ಗೆ ನನ್ನ ಸಹಮತವನ್ನು ವ್ಯಕ್ತಮಾಡುತ್ತಾ, ಇದರಜೊತೆಗೆ ಶಾಶ್ವತವಾದ ಪರಿಹಾರವನ್ನುರೈತರಿಗೆಒದಗಿಸಲು ಸಾಧ್ಯವೇ ಎಂಬ ವಿಚಾರದಲ್ಲಿ ನಾಲ್ಕು ಮಾತನ್ನುಆಡಲು ಬಯಸುತ್ತೇನೆ. ಕಬ್ಬು ಬೆಳೆಗಾರರ ಜೊತೆಗೆಆಕಾಶದ ಮಳೆಯನ್ನೇ ನಂಬಿ ಹಲವಾರು ಬೆಳೆಗಳನ್ನು ಬೆಳೆಯುವ ರೈತರ ಸಮಸ್ಯೆಗಳಿಗೂ ಸಹ ಸದನ, ಸರ್ಕಾರ ಹಾಗೂ ವಿರೋಧ ಪಕ್ಷಗಳು ಹೆಚ್ಚು ಒತ್ತುಕೊಡುವಅವಶ್ಯಕತೆಇದೆಎನ್ನುವುದು ನನ್ನ ಭಾವನೆ. ರೈತರುಆಕಾಶವನ್ನು ನೋಡಿ ಮಳೆ ಕಾಯುತ್ತಿದ್ದು, ಮಳೆ ಬಂದ ನಂತರ ಭಿತ್ತನೆ ಮಾಡಿ, ನಂತರ ಮಳೆ ಕೈಕೊಟ್ಟರೆ ಬೆಳೆ ಲಾಸ್ ಆಗಿ ಯಾವುದೂ ಸಹ ಕೈಗೆ ಸಿಗದೇ ನಷ್ಟ ಹೊಂದುವ ಸುಮಾರು 90 ಪರ್ಸೆಂಟ್‌ರೈತರುಇದ್ದಾರೆ. ಕಬ್ಬು ಬೆಳಗಾರರ ಬೇಡಿಕೆ ಪೂರೈಸಬೇಕು ಮತ್ತುಜೊತೆಗೆಇವರ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಹೆಚ್ಚಿನಆದ್ಯತೆಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಮನವಿ.ಕಬ್ಬು ಬೆಳಗಾರರ ಬಗ್ಗೆ ಈ ವರ್ಷವೂದೊಡ್ಡಆಂದೋಲನ, ಸ್ಟ್ರೈಕ್‌ಗಳು ಹಲವಾರು ಪಾದಯಾತ್ರೆಗಳು ನಡೆಯುತ್ತಿವೆ. ದೇಶದಲ್ಲಿ ಒಣ ಭೂಮಿ ಹೊಂದಿರುವರೈತರ ಸಮಸ್ಯೆಗಳನ್ನು ಜೊತೆಗೆ ಸೇರಿಸಿಕೊಂಡು ಶಾಶ್ವತವಾದ ಪರಿಹಾರವನ್ನುಕಂಡುಹಿಡಿಯಬೇಕಾಗಿದೆ.ಇದಕ್ಕೆ ನಾನು ಸರ್ಕಾರಕ್ಕೆಕೊಡುವ ಸಲಹೆ ಏನೆಂದರೆ, ಮೊದಲನೆಯದಾಗಿ ಈ ಬೆಳೆಗಳನ್ನು ಬೆಳೆಯುವುದಕ್ಕೆ ನಿಯಂತ್ರಣಗಳನ್ನು ಹಾಕಬೇಕಾಗಿದ್ದು, ಇದಕ್ಕೆರೈತರೂ ಸಹಕಾರವನ್ನುಕೊಡಬೇಕು.ಏಕೆಂದರೆಯಾವುದೋಒಂದು ಬೆಳೆ ಲಾಭದಾಯಕವಾಗಿದೆಎಂದಾಗ ಪ್ರತಿಯೊಬ್ಬರೂಅದನ್ನು ಬೆಳೆದಾಗ ಯಾವುದೇ ಸರ್ಕಾರಕ್ಕೆ ಸಮಸ್ಯೆ ಪರಿಹಾರ ಮಾಡಲು ಸಾಧ್ಯವಿಲ್ಲ. ಏಕೆಂದರೆ ಮಾಲು ಹೆಚ್ಚು ಬಂದಾಗ ಈ ತೊಂದರೆಗಳು ಆಗುತ್ತದೆ.ಆದ್ದರಿಂದ ಸರ್ಕಾರವುಒಂದು ನಿಯಂತ್ರಣವನ್ನು ಹಾಕಬೇಕು.ಇದು ನಮ್ಮ ಕಾನೂನುಗಳಲ್ಲಿಯೂ ಇದೆ.ಇದಕ್ಕೆರೈತರ ಹಿತಾಸಕ್ತಿಯಿಂದ ಸಹಕರಿಸುವುದು ಅಗತ್ಯವಿದೆ ಎಂದು ನನ್ನ ಚಿಂತನೆ. ರೈತರು ಬೆಳೆದ ಬೆಳೆಗೆ ವೈಜ್ಞಾನಿಕ ಮತ್ತುನ್ಯಾಯಯುತ ಬೆಲೆಯನ್ನು ಫಿಕ್ಸ್ ಮಾಡಬೇಕು.ಇದಕ್ಕೆ ಕೃಷಿ ತಜ್ಞರುಇರಬೇಕು.ಕಬ್ಬಿನ ಬೆಳೆಗಾರರ ಜೊತೆಗೆ ದ್ರಾಕ್ಷಿ, ದಾಳಿಂಬೆ ಬೆಳೆಗಾರರು ಸಂಕಷ್ಟದಲ್ಲಿದ್ದಾರೆಂದು ಎಲ್ಲಾ ಸದಸ್ಯರಿಗೂ ಮನವಿ ಮಾಡಿದ್ದಾರೆ. ಅವರ ಬೆಳೆಗಳೂ ಲಾಸ್ ಆಗುತ್ತಿವೆ. ಅವರ ಕಷ್ಟವನ್ನು ಕೇಳಬೇಕಾಗಿದೆ. ತಜ್ಞರ ಸಮಿತಿಯಲ್ಲಿ ಕಬ್ಬು, ದ್ರಾಕ್ಷಿ, ದಾಳಿಂಬೆ, ಭತ್ತ ಸೇರಿದಂತೆ ಎಲ್ಲಾ ಬೆಳೆಗಳ ಪ್ರತಿನಿಧಿಗಳು ಒಳಗೊಂಡ ಒಂದು ತಜ್ಞರ ಸಮಿತಿಯನ್ನು ರಚನೆ ಮಾಡಿ, ಅದಕ್ಕೆ Agriculturists' representation ತೆಗೆದುಕೊಂಡು ಪ್ರತಿ ವರ್ಷ ನಿಗದಿತ ಬೆಳೆ ಬೆಳೆಯಲು ಏನು ಖರ್ಚಾಗುತ್ತದೆ ಮತ್ತುಅದಕ್ಕೆ ವೈಜ್ಞಾನಿಕದರ ನಿಗದಿಪಡಿಸಬೇಕು. ಇದಕ್ಕೆ cost of production ಅನ್ನು workout ಮಾಡಿ, ಅದಕ್ಕೆ ಸ್ವಲ್ಪ ಲಾಭವನ್ನು ಸೇರಿಸಿ ಬೆಲೆಯನ್ನು ನಿಗದಿ ಮಾಡಬೇಕು.

**ಶ್ರೀಮತಿ ಮೋಟಮ್ಮ:–** ಈ ಬೆಲೆ ನಿಗದಿ ಸಮಿತಿಯು ಕೇಂದ್ರ ಮಟ್ಟದಲ್ಲಿ ಇದ್ದು, ರಾಜ್ಯಮಟ್ಟದಲ್ಲಿ ಮಾಡಿದರೆ ಬೆಲೆ ನಿಯಂತ್ರಣ ಮಾಡಲು ಒಳ್ಳೆಯದಾಗುತ್ತದೆ. ಕೇಂದ್ರದಲ್ಲಿ ಶ್ರೀ ರಘು ಎಂಬ ರಾಜ್ಯದ ಪ್ರತಿನಿಧಿಯೂ ಇದ್ದಾರೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–**ಅದನ್ನುಇಲ್ಲಿ ಏಕೆ ಮಾಡಿಲ್ಲ.

**ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಮಾಹಿತಿ ಹೇಳುವುದೇನೆಂದರೆ, ಕೇಂದ್ರ ಕೃಷಿ ಬೆಲೆ–ವೆಚ್ಚ ಆಯೋಗಎಂದುಇದೆ. Commission on Agricultural Cost and Price ಎಂದು ಇದ್ದು, ಅದನ್ನು CACP ಎಂದು ಕರೆಯುತ್ತಾರೆ. ಕಬ್ಬನ್ನು ಸೇರಿಸಿ ಸುಮಾರು 24 ಬೆಳೆಗಳಿಗೆ ಎಲ್ಲಾ ರಾಜ್ಯಗಳಿಂದ ತಗಲುವ ವೆಚ್ಚಗಳ ಮಾಹಿತಿ ಸಂಗ್ರಹಿಸಿ, ಅದರಆಧಾರದ ಮೇಲೆ ಕಬ್ಬಿಗೂ ಬೆಲೆ ನಿಗದಿ ಮಾಡುತ್ತೇನೆ. ಅದಕ್ಕೆ ಈ air and Remunarative Price (FRP) ಎಂದು ಕರೆಯುತ್ತಾರೆ. ಅದರ ಆಧಾರದ ಮೇಲೆ ಇಲ್ಲಿಯೂ ತೀರ್ಮಾನಗಳನ್ನು ತೆಗೆದುಕೊಳ್ಳುತ್ತೇವೆ. ವೆಚ್ಚಗಳ ಆಧಾರದ ಮೇಲೆ ಬೆಲೆ ನಿಗದಿಯಾಗುತ್ತದೆ.ಎರಡನೆಯದಾಗಿಅವರು ಸ್ವಲ್ಪ ಲಾಭಾಂಶದ ಲೆಕ್ಕಾಚಾರವನ್ನು ಸೇರಿಸಬೇಕುಎಂದು ಸಲಹೆ ಕೊಟ್ಟಿದ್ದಾರೆ.ಹಿಂದೆ ಪ್ರಧಾನ ಮಂತ್ರಿಗಳಾಗಿದ್ದ ಮಾನ್ಯ ಮನ್‌ಮೋಹನ್ ಸಿಂಗ್‌ರವರು ಶ್ರೀ ರಂಗರಾಜನ್‌ರವರ ನೇತೃತ್ವದಲ್ಲಿಒಂದು ವಿಶೇಷವಾದ ಸಮಿತಿ ಮಾಡಿ, ಆದಾಯ ಹಂಚಿಕೆ ಸೂತ್ರವನ್ನುತಯಾರು ಮಾಡಿಕೊಟ್ಟಿದ್ದಾರೆ.ನಮ್ಮರಾಜ್ಯ ಮಟ್ಟದಲ್ಲಿಕಬ್ಬು ನಿಯಂತ್ರಣ ಮಂಡಳಿ ತೀರ್ಮಾನ ಮಾಡುವ ಸಂದರ್ಭದಲ್ಲಿ ಮೊದಲನೆಯಕಂತುಎಫ್‌ಆರ್‌ಪಿ ಪ್ರಕಾರವಾಗಿಕೊಡಬೇಕು.ಕಬ್ಬನ್ನುಅರೆದ ನಂತರ ವರ್ಷದಕೊನೆಯಲ್ಲಿಆದಾಯ ಹಂಚಿಕೆ ಸೂತ್ರದಅನ್ವಯಅಂದರೆ ಸಕ್ಕರೆ ಕಾರ್ಖಾನೆಗಳಿಗೆ ಬರುವಒಟ್ಟುಆದಾಯದ 70ರಷ್ಟು ರೈತರಿಗೆ ಪಾವತಿಯಾಗಬೇಕೆಂಬ ಸೂತ್ರವನ್ನುಇಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ಹಾಗಾಗಿ ಅವರು ಹೇಳುತ್ತಿರುವ ಎರಡು ಅಂಶಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿಕಾರ್ಯರೂಪದಲ್ಲಿವೆಎಂಬುದನ್ನು ಗಮನಕ್ಕೆ ತರುತ್ತೇನೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–**ಪರೋಕ್ಷವಾಗಿ ಇರುವುದು ಜನರಿಗೆ ಕಾಣಿಸುವುದಿಲ್ಲ. ಇದುವರೆಗೂ ಎಲ್ಲಾ ಬೆಳೆಗಳಿಗೂ ಪ್ರತ್ಯಕ್ಷವಾಗಿ ವೈಜ್ಞಾನಿಕ ಬೆಲೆ ನಿಗದಿ ಮಾಡುವ ಕೆಲಸವನ್ನು ಈ ಸರ್ಕಾರದಿಂದ ಮಾಡಿದ್ದಾರೆಯೇ?

**ಶ್ರೀ ಕೃಷ್ಣ ಭೈರೇಗೌಡ:–** ಈಗ CACP ಮಾಡುತ್ತಿದ್ದು, ಅದರ ಜೊತೆಗೆ ರಾಜ್ಯ ಸರ್ಕಾರದಿಂದ ಕೃಷಿ ಬೆಲೆ ಆಯೋಗವನ್ನು ರಚನೆ ಮಾಡಿದ್ದು, ಇವರೂ ಈ ವರ್ಷದಿಂದ ವೈಜ್ಞಾನಿಕವಾಗಿ ಬೆಲೆಗಳನ್ನು ತುಲನೆ ಮಾಡುವ ಕೆಲಸ ಪ್ರಾರಂಭ ಮಾಡಿದ್ದಾರೆ. ಕಬ್ಬಿನ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಚರ್ಚೆಯಾಗಿರುವುದರಿಂದ, ರಂಗರಾಜನ್ ಸಮಿತಿಯವರು ಕಬ್ಬಿಗೆ ತಗಲುವ ವೆಚ್ಚ, ಕಬ್ಬನ್ನುಅರೆದು ಸಕ್ಕರೆ ಮಾಡುವುದಕ್ಕೆ ತಗಲುವ ವೆಚ್ಚ ಇತ್ಯಾದಿಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿ, ಪ್ರತಿಯೊಂದನ್ನು ಲೆಕ್ಕಾಚಾರ ಹಾಕಿ ಮಾಡಿದ್ದಾರೆ.ಅವರು ಶಿಫಾರಸ್ಸು ಮಾಡಿದ್ದು, ಅವರುಕೊಟ್ಟಿರುವ ಮಾನದಂಡವನ್ನು ನಾವು ಅಳವಡಿಸಿಕೊಂಡಿದ್ದೇವೆ. ಕಬ್ಬು ನಿಯಂತ್ರಣ ಮಂಡಳಿಯಲ್ಲಿ ಇದನ್ನು ಅಳವಡಿಸಿಕೊಂಡು ಇದಕ್ಕೆಒಂದು ಪರಿಣಿತರ ಸಮಿತಿ ಮಾಡಿದ್ದೇವೆ. ಮಾನ್ಯ ಸಕ್ಕರೆ ಸಚಿವರಅಧ್ಯಕ್ಷತೆಯಲ್ಲಿಕಬ್ಬು ನಿಯಂತ್ರಣ ಮಂಡಳಿ ಕೆಲಸ ಮಾಡುತ್ತಿದ್ದು, ಇದರ ಕೆಳಗೆ ಒಂದು ಪರಿಣಿತರ ಸಮಿತಿಯನ್ನು ನೇಮಿಸಿ, ರಂಗರಾಜನ್‌ರವರ ಸೂತ್ರದಆಧಾರದ ಮೇಲೆ ಕಾರ್ಖಾನೆಗಳು ರೈತರಿಗೆ ಹೆಚ್ಚುವರಿಯಾಗಿ ಎಷ್ಟು ಲಾಭಾಂಶಕೊಡಬೇಕುಎನ್ನುವುದನ್ನುಕಾರ್ಖಾನೆವಾರು ಲೆಕ್ಕ ಹಾಕಿದ್ದೇವೆ. ಹಾಗಾಗಿ ಬಹಳ ಸಮರ್ಪಕವಾಗಿ ಕೆಲಸ ಮಾಡುತ್ತಿದ್ದು, ಮಾನ್ಯ ಸದಸ್ಯರು ಹೇಳಿದಂತೆ ಬಹುಶ: ಸಾರ್ವಜನಿಕ ವಲಯದಲ್ಲಿ ಹೆಚ್ಚಿಗೆಕಾಣದೇ, ಚರ್ಚೆಯಾಗದೇಇರಬಹುದು. ಆದರೆ ನಮ್ಮ ಕೆಲಸದಲ್ಲಿ ನಾವು ಬಹಳ ವೈಜ್ಞಾನಿಕವಾಗಿರೈತರ ಪರವಾಗಿ ಕೃಷಿ ಬೆಲೆ ಆಯೋಗವೂಇದೆ.ಕಬ್ಬಿಗೆಇಷ್ಟೆಲ್ಲಾ ಮಾಹಿತಿ ಮತ್ತು ಸೂತ್ರಗಳು ಇರುವುದರಿಂದ ಮತ್ತು ನಿಯಂತ್ರಣ

ಮಾಡಲುಒಂದು ಮಂಡಳಿ ಇರುವುದರಿಂದಅದರಲ್ಲಿಒಂದು ಪರಿಣಿತರ ಸಮಿತಿ ಮಾಡಿ ಲಾಭಾಂಶದ ಹಂಚಿಕೆ ಸೂತ್ರವನ್ನು ಲೆಕ್ಕ ಹಾಕುತ್ತಿದ್ದೇವೆ.

**ಶ್ರೀ ಬಿ.ರಾಮಕೃಷ್ಣ:–** ಆ 24 ಬೆಳೆಗಳು ಯಾವುವುಎಂದು ಮಾನ್ಯ ಸಚಿವರು ಹೇಳಬೇಕು.

ಶ್ರೀ ಕೃಷ್ಣ ಭೈರೇಗೌಡ:–ಅದರಲ್ಲಿ ನಮಗೆ ರಾಗಿ, ಭತ್ತ, ತೊಗರಿ, ಕಡಲೆ, ಉದ್ದು, ಹೆಸರು, ಮೆಕ್ಕೆಜೋಳ, ಸೋಯಾಅವರೆ, ಕಬ್ಬು, ಸೆಣಬು, ಸೂರ್ಯಕಾಂತಿ, ಸೇರಿದಂತೆ ಸುಮಾರು 24 ಬೆಳೆಗಳು ಇವೆ. ಇದರಲ್ಲಿ ಪ್ರಾಂತೀಯವಾಗಿಇದೆ.

**ಶ್ರೀ ಬಿ.ರಾಮಕೃಷ್ಣ:–**ಇದರಲ್ಲಿತರಕಾರಿ ಬೆಳಗಳು ಇಲ್ಲವೇ?

**ಶ್ರೀ ಕೃಷ್ಣ ಭೈರೇಗೌಡ:**–ಇಲ್ಲ.

**ಶ್ರೀ ಬಿ.ರಾಮಕೃಷ್ಣ:–**ಅದನ್ನು ಮಾಡಬಹುದಲ್ಲವೇ?

ಶ್ರೀ ಕೃಷ್ಣ ಭೈರೇಗೌಡ:–ಅವರ ಸಲಹೆಯನ್ನುಒಪ್ಪಿಕೊಂಡಿದ್ದೇವೆ. ಸಿಎಸಿಪಿನವರು ಹಣ್ಣು ಮತ್ತು ತರಕಾರಿಗಳಿಗೆ ಮಾಡದೇ ಹೋದರೂ ನಮ್ಮರಾಜ್ಯದಲ್ಲಿ ಸ್ಥಾಪನೆ ಮಾಡಿರುವ ಕೃಷಿ ಬೆಲೆ ಆಯೋಗದ ವತಿಯಿಂದಹಣ್ಣು ಮತ್ತು ತರಕಾರಿಗಳಿಗೂ ಬೆಲೆ ನಿಗದಿ ಮಾಡಿ ಪ್ರಯೋಜನವಾಗುವ ಕೆಲಸ ಮಾಡುತ್ತಿದ್ದೇವೆ. ಈ ವರ್ಷದಿಂದ ಆ ಅಧ್ಯಯನವನ್ನುಕೈಗೆತ್ತಿಕೊಂಡಿದ್ದೇವೆ.

ಪ್ರೊ: ಪಿ.ವಿ. ಕೃಷ್ಣಭಟ್:– ಕೃಷಿ ಬೆಳೆಗಳಿಗೆ ಬೆಲೆ ನಿರ್ಧಾರಕ್ಕೆ ಈ ರೀತಿಕ್ರಮ ಕೈಗೊಳ್ಳುತ್ತಿದ್ದೇವೆ ಎಂದು ಮಾನ್ಯ ಮಂತ್ರಿಗಳು ಒಳ್ಳೆಯ ಭರವಸೆಯನ್ನುಕೊಟ್ಟಿದ್ದಾರೆ. ಇಲ್ಲಿ ಮುಖ್ಯವಾಗಿ ಇದು prospective ಆಗಿಜಾರಿಗೆ ಬರುವ ಸಂಗತಿಯಾಗಿದೆ.

(ಮುಂದು..)

(ಸಭಾಪತಿಯವರ ಉಪಸ್ಥಿತಿ)

**ಪ್ರೊ:ಪಿ.ವಿ.ಕೃಷ್ಣಭಟ್:–**ಸನ್ಮಾನ್ಯ ಸಭಾಪತಿಯವರೇ, ಕೃಷಿ ಬೆಳೆಗಳ ಬೆಲೆಯನ್ನು ನಿರ್ಧಾರ ಮಾಡುವುದಕ್ಕೆಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಾನ್ಯಕೃಷಿ ಮಂತ್ರಿಗಳು ಹೇಳಿದ್ದಾರೆ.ಇದುಕೂಡಲೇಜಾರಿಗೆ ಬರುವ ಸಂಗತಿಯಾಗಿದೆ.ಆದರೆ, ಈಗ ಕಬ್ಬಿನ ಬೆಳೆಗಾರರ ಸಮಸ್ಯೆಯ ಬಗ್ಗೆ ಚರ್ಚೆ ನಡೆಯುತ್ತಿದೆ.ಆದ್ದರಿಂದ ಈ ಸಂದರ್ಭದಲ್ಲಿ ಈ ಎರಡೂ ವಿಚಾರಗಳನ್ನು ಲಿಂಕ್ ಮಾಡದೇಇರುವುದುಉತ್ತಮಎನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಕಬ್ಬಿನ ಬೆಳೆಗಾರರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನನ್ನ ಸಹಮತವನ್ನು ಮೊದಲೇ ವ್ಯಕ್ತಪಡಿಸಿದ್ದೇನೆ. ಈ ಸಮಸ್ಯೆಯನ್ನು ಮುಂದೆ ಶಾಶ್ವತವಾಗಿ ನಿವಾರಣೆ ಮಾಡುವುದು ಹೆಚ್ಚು ಸೂಕ್ತಇಲ್ಲದಿದ್ದರೆಪ್ರತಿ ವರ್ಷಇದೇರೀತಿಯ ಗೊಂದಲಗಳು ಬರುತ್ತವೆಎನ್ನುವ ಮಾತನ್ನು ಹೇಳುತ್ತಿದ್ದೇನೆ. ಕಬ್ಬು ಬೆಳೆಯ ಬಗ್ಗೆ ನಮ್ಮ ನಾಯಕರು ಮತ್ತು ಸದಸ್ಯರು ಏನು ಬೇಡಿಕೆಯಿಟ್ಟು ಮಾತನಾಡಿದ್ದಾರೆಅದಕ್ಕೆ ನನ್ನ ಸಂಪೂರ್ಣವಾದ ಸಹಮತವಿದೆಎನ್ನುವ ಮಾತನ್ನು ಈ ಮೊದಲೇ ಹೇಳಿದ್ದೇನೆ. ಈಗ ತಾನೇ ಮಾತನಾಡಿದ ಮಾನ್ಯ ಕೃಷಿ ಸಚಿವರು ಬೆಲೆ ನಿಗದಿ ಮತ್ತು ನಿಯಂತ್ರಣಕ್ಕೆ ಹಲವಾರು

ಸೂತ್ರಗಳನ್ನು ಹೇಳಿದ್ದಾರೆ. ಮಾನ್ಯಆರೋಗ್ಯ ಸಚಿವರು'ಜನರಿಗೆ ತಿಳಿಯುವ ರೀತಿಯಲ್ಲಿಯಾವುದೇ ಕಾರ್ಯಕ್ರಮಗಳನ್ನು ಇದುವರೆಗೆ ಹಮ್ಮಿಕೊಂಡಿಲ್ಲ' ಎಂದು ಹೇಳಿದರು. ಇದರಿಂದಾಗಿಜನರಲ್ಲಿತಪ್ಪುಅಭಿಪ್ರಾಯವುಂಟಾಗಿ,'ಸರ್ಕಾರದಿಂದ ನಮಗೆ ಅನ್ಯಾಯವಾಗುತ್ತಿದೆ'ಎನ್ನುವ ಭಾವನೆ ಬೆಳೆಯುವುದಕ್ಕೆ ಕಾರಣ ಸರ್ಕಾರವೇಆಗಿದೆ.ಇದುವರೆವಿಗೂಜನರಲ್ಲಿಅರಿವನ್ನುಂಟು ಮಾಡುವಕಾರ್ಯಕ್ರಮವಾಗಿಲ್ಲಎನ್ನುವ ಮಾತನ್ನು ಮಾನ್ಯ ಸಚಿವರು ಸಹ ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ನಾನು ಕೇವಲ ಕಬ್ಬು ಬೆಳೆಗಾರರ ಬಗ್ಗೆ ಮಾತನಾಡುತ್ತಿಲ್ಲ. ಒಣ ಭೂಮಿಯಲ್ಲಿ, ತೋಟಗಾರಿಕೆಯಲ್ಲಿಯಾವ ಬೆಳೆಯನ್ನು ಬೆಳೆಯುತ್ತಿದ್ದಾರೆ, ಉದಾಹರಣೆಗೆ ಹೇಳಬೇಕಾದರೆ, ದ್ರಾಕ್ಷಿ ಮತ್ತು ಮಾವು ಈ ರೀತಿ ಬೇರೆಬೇರೆಬೆಳೆಗಳನ್ನು ಬೆಳೆಯುವ ರೈತ ಮತ್ತು ಮಳೆಯನ್ನೇ ನಂಬಿ ಬೆಳೆಯನ್ನು ಬೆಳೆಯುವ ರೈತರಲ್ಲಿ ಸಂಘಟನೆಯಿಲ್ಲ, ಹಣವಿಲ್ಲ ಮತ್ತು ಶಕ್ತಿ ಇಲ್ಲ. ಮಳೆ ಬಾರದಿದ್ದರೆ ಬೆಳೆ ಒಣಗಿದ ಮೇಲೆ ನಿಶ್ಯಕ್ತನಾಗಿಎಲ್ಲೋ ಕೂಲಿ ಮಾಡಿಕೊಂಡು ಮನೆಯಲ್ಲಿ ಕುಳಿತಿರುತ್ತಾನೆ. ಅವನ ಹಿತಾಸಕ್ತಿಯನ್ನು ನೋಡಬೇಕಾಗಿರುವುದು ಸರ್ಕಾರದಕರ್ತವ್ಯವಾಗಿದೆ. ಆದ್ದರಿಂದಅವರಿಗೂಕೂಡಯಾವರೀತಿಯ ಪರಿಹಾರವನ್ನು ನೀಡಲಾಗುತ್ತದೆ, ಅವರ ಬೆಳೆಗೆ ಯಾವರೀತಿಯಲ್ಲಿ ಬೆಲೆಯನ್ನು ನಿಗದಿ ಮಾಡಲಾಗುತ್ತದೆ ಮತ್ತು ಬೆಳೆ ನಾಶವಾದಾಗಯಾವರೀತಿಯಲ್ಲಿ ಪರಿಹಾರವನ್ನುನೀಡಲಾಗುತ್ತದೆಎನ್ನುವುದರ ಬಗ್ಗೆ ನಿರ್ದಿಷ್ಟವಾದತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ ಎನ್ನುವುದು ನನ್ನ ಭಾವನೆಯಾಗಿದೆ. ಬೆಲೆ ನಿಗದಿ ಮಾಡಿದ ಮೇಲೆ ಮಾರುಕಟ್ಟೆಯಲ್ಲಿದಂಥೆ ನಡೆಯುತ್ತಿದೆ.ದಲ್ಲಾಳಿಗಳ ಅವಾಂತರ ನಡೆಯುತ್ತಿದೆಎನ್ನುವುದುಎಲ್ಲರಿಗೂ ತಿಳಿದ ವಿಷಯವಾಗಿದೆ.ಬೆಳೆ ಬೆಳೆದ ರೈತನಿಗೂ ಲಾಭವಾಗುತ್ತಿಲ್ಲ ಕೊಂಡುಕೊಳ್ಳುವ ಗ್ರಾಹಕರಿಗೂ ಅನುಕೂಲವಾಗುತ್ತಿಲ್ಲ. ಮಧ್ಯದಲ್ಲಿರುವ ದಲ್ಲಾಳಿಗಳು ಶ್ರೀಮಂತರಾಗುತ್ತಿದ್ದಾರೆ.ಇದರ ಪರಿಣಾಮಜನರ ಮೇಲೆ ಬೀರುತ್ತಿದೆ ಮತ್ತು ಸರ್ಕಾರಕ್ಕೆಕೆಟ್ಟ ಹೆಸರು ಬರುತ್ತಿದೆ.ದಲ್ಲಾಳಿಗಳದಂಧೆಯನ್ನುತಪ್ಪಿಸಬೇಕಾಗಿರುವುದುಅತ್ಯಂತಅವಶ್ಯಕವಾಗಿದೆ.

ಇದನ್ನುತಪ್ಪಿಸದೇಇದ್ದರೆಯಾರೋ ಕೆಲವು ಅಧಿಕಾರಿಗಳು ಮತ್ತು ಮಧ್ಯವರ್ತಿಗಳು ರೈತರಿಗೆ ಸಿಗಬೇಕಾದ ಹಣವನ್ನುತಿನ್ನುತ್ತಾರೆ.ರೈತರು ಬೆಳೆದ ಟಮೊಟೋ ಮತ್ತುಆಲೂಗಡ್ಡೆ ಬೆಳೆಗೆ ಸರಿಯಾದ ಬೆಲೆ ಸಿಗದೆಅದನ್ನುತಂದುರಸ್ತೆಗೆ ಸುರಿದ ಘಟನೆಗಳನ್ನು ತಾವು ನೋಡಿರಬಹುದು. ಇದಕ್ಕೆಕಾರಣವೇನೆಂದರೆಯಾವ ಬೆಳೆಯ ಬೆಲೆಯನ್ನುಏರಿಸಬೇಕುಯಾವುದನ್ನು ಇಳಿಸಬೇಕು ಎನ್ನವುದು ದಲ್ಲಾಳಿಗಳ ಕೈಯಲ್ಲಿರುತ್ತದೆ.ಈ ರೀತಿಆಗದೇಇರುವಂತೆ ಮಾಡಬೇಕಾಗಿರುವುದು ಸರ್ಕಾರದಕೈಯಲ್ಲಿದೆ.ಇದುರೈತರಿಗೆ ಸಹಾಯ ಮಾಡುವ ವಿಚಾರವಾಗಿದೆ.ರೈತರು ಬೆಳೆದ ಬೆಳೆಯ ಬೆಲೆ ಕುಸಿದಾಗ ಆವರ್ತನಿಧಿಯನ್ನು ಹೆಚ್ಚು ಮಾಡುವ ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಳ್ಳಬೇಕಾಗಿದೆ. ಬೆಳೆಯನ್ನು ಖರೀದಿ ಮಾಡುವ ವ್ಯವಸ್ಥೆಯನ್ನು ಸರ್ಕಾರತಕ್ಷಣವೇ ಮಾಡಿದರೆ, ರೈತರಲ್ಲಿಆತಂಕಕಡಿಮೆಯಾಗುತ್ತದೆ. ರೈತ ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ಸಿಗುತ್ತದೆ, ನನಗೆ ಹಣ ಸಿಗುತ್ತದೆ ಎನ್ನುವಆತ್ಮವಿಶ್ವಾಸ ಬಂದಾಗರೈತರುಆತ್ಮಹತ್ಯೆ ಮಾಡಿಕೊಳ್ಳುವ ಪ್ರಮಾಣಕಡಿಮೆಯಾಗಬಹುದು. ರೈತರು ಮತ್ತು ಬೇರೆಉದ್ದೇಶಕ್ಕಾಗಿ ಸಾಲ ಮಾಡಿಕೊಂಡಿರುವವರುಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನಿಜವಾದರೈತನ ಕಷ್ಟಕ್ಕೆ ಒದಗಬೇಕಾಗಿರುವುದು ಸರ್ಕಾರದಆದ್ಯಕರ್ತವ್ಯವಾಗಿದೆ. ಇದು ಸರ್ಕಾರದ ನೈತಿಕಜವಾಬ್ದಾರಿ ಸಹ ಆಗಿದೆ.ಈ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬೇಕಾಗಿದ್ದರೆ, ಆವರ್ತನಿಧಿಯನ್ನು ಹೆಚ್ಚಿಗೆಇಟ್ಟು, ರೈತರು ಬೆಳೆದ ಬೆಳೆಯನ್ನು ಕಾಲಕಾಲಕ್ಕೆ ಖರೀದಿ ಮಾಡುವುದು ಮತ್ತು ಆ ಬೆಳೆಗಳನ್ನು ಶೇಖರಣೆ ಮಾಡುವ ಸಾಮರ್ಥ್ಯವನ್ನು ಮೊದಲು ಸರ್ಕಾರ ಬೆಳೆಸಿಕೊಳ್ಳಬೇಕಾಗುತ್ತದೆ.ಕೆಲವೊಂದು ಬಾರಿ ಬೆಳೆಗಳನ್ನು ಖರೀದಿ ಮಾಡುವುದಕ್ಕೆಸಂಗ್ರಹ ಕೇಂದ್ರಗಳುಇಲ್ಲವೆಂದುಖರೀದಿ ಮಾಡುವುದಿಲ್ಲ. ಆಗ ರೈತರು ಬೀದಿಗೆ ಬರುತ್ತಾರೆ.ಇದುಒಂದು ದಿನದಲ್ಲಿ ಮುಗಿಯುವಂತಹದ್ದುಅಲ್ಲ, ಇದಕ್ಕೆ ಶಾಶ್ವತವಾಗಿರುವ

ಪರಿಹಾರವನ್ನುಹುಡುಕಿಕೊಳ್ಳಬೇಕಾದರೆ, ಆಯವ್ಯಯದಲ್ಲಿ ಕೃಷಿಗೆ ಅಗತ್ಯವಾಗಿಆದ್ಯತೆಯನ್ನುಕೊಡಬೇಕಾಗುತ್ತದೆ. ನೀರಾವರಿಯ ಬಗ್ಗೆ ಹೇಳಬೇಕಾದರೆ. . . . . .

**ಸಭಾಪತಿಯವರು:–** ಮಾನ್ಯ ಪುಟ್ಟಸ್ವಾಮಿಯವರೇ, ಈಗ ಸಮಸ್ಯೆಇರುವುದುಕಬ್ಬಿನ ಬಗ್ಗೆ ಮತ್ತುಕಬ್ಬು ಬೆಳೆಗಾರರಿಗೆ ಕೊಡಬೇಕಾಗಿರುವ ಹಣದ ಬಗ್ಗೆ. ತಾವು ಕೃಷಿ ವಲಯಕ್ಕೆ ಸಂಬಂಧಪಟ್ಟಂತೆ ಪೂರ್ಣ ಪ್ರಮಾಣದಲ್ಲಿಚರ್ಚೆಯನ್ನು ಪ್ರಾರಂಭ ಮಾಡಿದರೆ ಹೇಗೆ?ಬೇರೆಯವರಿಗೂ ಮಾತನಾಡುವುದಕ್ಕೆ ಅವಕಾಶ ಸಿಗಬೇಕಾಗುತ್ತದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಒಂದೇಒಂದು ನಿಮಿಷದಲ್ಲಿ ನಾನು ನನ್ನ ಮಾತುಗಳನ್ನು ಪೂರ್ಣಗೊಳಿಸುತ್ತೇನೆ. ನೀರಾವರಿ ಮತ್ತು ವಿದ್ಯುತ್‌ನ ಬಗ್ಗೆ ಹೇಳಬೇಕಾದರೆ, ನೀರಾವರಿ ಯೋಜನೆಗಳನ್ನು ಪ್ರಾರಂಭ ಮಾಡಿದ ಮೇಲೆ ಅದನ್ನುತ್ವರಿತಗತಿಯಲ್ಲಿ ಮುಗಿಸಬೇಕಾತ್ತದೆಯೇ ಹೊರತು ಸುಮ್ಮನೆ ಯೋಜನೆಗಳನ್ನು ಘೋಷಣೆ ಮಾಡುವುದರಲ್ಲಿಅರ್ಥವಿಲ್ಲ. ಯೋಜನೆಗಳನ್ನು ಪ್ರಾರಂಭ ಮಾಡಿದ ಮೇಲೆ ಅದರ ಪ್ರಯೋಜನರೈತನಿಗೆ ಮುಟ್ಟಬೇಕಾಗುತ್ತದೆ. ಈ ವಿಚಾರವನ್ನು ನೀರಾವರಿಯ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಮಾತನಾಡುತ್ತೇನೆ. ಹಲವಾರು ಯೋಜನೆಗಳನ್ನು ಸುಮಾರು 20 ವರ್ಷಗಳ ಹಿಂದೆಯೇ ಪ್ರಾರಂಭ ಮಾಡಲಾಗಿದೆ.ಡ್ಯಾಂಕಟ್ಟಲಾಗಿದೆಆದರೆಡ್ಯಾಂಗೆ ನೀರು ಬಿಟ್ಟಿಲ್ಲ. ಈ ಎಲ್ಲ ಕಾರಣಗಳಿಂದ ರೈತರು ಸಂಕಷ್ಟಕ್ಕೆ ಈಡಾಗುತ್ತಿದ್ದಾರೆ.ಇವುಗಳನ್ನು ಬಗೆಹರಿಸುವುದಕ್ಕೆ ಸರ್ಕಾರ ಕ್ರಮಕೈಗೊಳ್ಳುವುದು ಅವಶ್ಯಕವಾಗಿದೆ.2012–13ಮತ್ತು 2013–14ನೇ ಸಾಲಿನಲ್ಲಿಕಬ್ಬು ಬೆಳೆಗಾರರಿಗೆ ಹಣಕೊಡುತ್ತೇವೆಂದುಸರ್ಕಾರರೈತರಿಗೆ ವಾಗ್ದಾನವನ್ನು ನೀಡಿದೆ, ಅದರಂತೆತಕ್ಷಣವೇ ಆ ಹಣವನ್ನು ಬಿಡುಗಡೆ ಮಾಡುವಅವಶ್ಯಕತೆಇದೆ.ಏಕೆಂದರೆಇವತ್ತಿನ ದಿವಸ ರೈತನನ್ನುಎದುರು ಹಾಕಿಕೊಳ್ಳುವುದು ಯಾವುದೇ ಸರ್ಕಾರಕ್ಕೂಗೌರವತರುವುದಿಲ್ಲ. ಅದರಿಂದಕಷ್ಟದ ಪರಿಸ್ಥಿತಿ ಸರ್ಕಾರಕ್ಕೆ ಬರಬಹುದು.ಕಬ್ಬು ಬೆಳೆಗಾರರ ಹಿತಾಸಕ್ತಿಯ ಹಿನ್ನೆಲೆಯಲ್ಲಿಅವರಿಗೆಕೊಡಬೇಕಾದ ಹಣವನ್ನುಕೊಡಬೇಕು.ಎಲ್ಲಬೆಳೆಗಾರರ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವುದರ ಜೊತೆಗೆಅವರಿಗೆಉತ್ತೇಜನವನ್ನುಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನುಮುಕ್ತಾಯಗೊಳಿಸುತ್ತಿದ್ದೇನೆ.

**ಪ್ರೊಃಪಿ.ವಿ.ಕೃಷ್ಣಭಟ್ಟ(ನಾಮನಿರ್ದೇಶಿತರು)ಃ–** ಸನ್ಮಾನ್ಯ ಸಭಾಪತಿಯವರೇ, ಮಾತನಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಮೊಟ್ಟಮೊದಲನೆಯ ಬಾರಿಗೆ ವಿಧಾನ ಪರಿಷತ್ತಿನಇದುವರೆಗಿನ ಪರಂಪರೆಯನ್ನು ಬದಿಗೊತ್ತಿತಾವು ಈ ರೀತಿಯಚರ್ಚೆಗೆಅವಕಾಶವನ್ನುಕೊಟ್ಟಿರುವುದರಿಂದತಮಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಸಾಮಾನ್ಯವಾಗಿ ನಿಲುವಳಿ ಸೂಚನೆಯ ಪ್ರಸ್ತಾಪ ಬಂದಾಗ, ಅದನ್ನು ನಿಯಮ 68ಕ್ಕೆ ಮಾರ್ಪಾಡು ಮಾಡಿಚರ್ಚೆಗೆ ತೆಗೆದುಕೊಳ್ಳೋಣವೆಂದು ಮಾನ್ಯ ಸಭಾ ನಾಯಕರುತಮ್ಮಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರು ಮತ್ತುಆ ರೀತಿಯಲ್ಲಿತೀರ್ಮಾನವಾಗುತ್ತಿತ್ತು. ಆದರೆ, ಈ ದಿನ ಆಡಳಿತ ಪಕ್ಷದವರು ಮತ್ತು ಮಾನ್ಯ ಸಭಾ ನಾಯಕರು ಸಹ ಈ ವಿಷಯದ ಮಹತ್ವವನ್ನುಅರಿತು ನಿಯಮ 68ರಡಿಯಲ್ಲಿ ಚರ್ಚೆಗೆತೆಗೆದುಕೊಂಡಿರುವುದುಇಡೀ ಸದನ ಈ ವಿಚಾರವನ್ನು ಬಹಳಷ್ಟು ಗಂಭೀರವಾಗಿತೆಗೆದುಕೊಂಡಿದೆಎನ್ನುವ ಸಂದೇಶವನ್ನುರೈತ ಸಮುದಾಯಕ್ಕೆ ಮುಟ್ಟಿಸಿದೆ ಎಂದು ನಾನು

ಭಾವಿಸುತ್ತೇನೆ. ಪಕ್ಷಬೇಧವನ್ನು ಮರೆತುಎಲ್ಲ ಸದಸ್ಯರುತಮ್ಮ ಕಳಕಳಿಯನ್ನು ಈ ವಿಚಾರವಾಗಿ ವ್ಯಕ್ತಪಡಿಸಿದ್ದಾರೆ. ಆ ನಿಟ್ಟಿನಲ್ಲಿ ಸರ್ಕಾರ ಬಹಳ ದಿಟ್ಟವಾಗಿರುವಕ್ರಮವನ್ನು ಶೀಘ್ರವಾಗಿ ಕೈಗೊಳ್ಳಬೇಕಾಗಿರುವ ಅವಶ್ಯಕತೆಇದೆ.ಮಾನ್ಯ ಮುಖ್ಯಮಂತ್ರಿಗಳು ಅನ್ನಭಾಗ್ಯ, ತಾಳಿಭಾಗ್ಯ ಇತ್ಯಾದಿ ಅನೇಕ ಪ್ರಗತಿದಾಯಕ ಕಾರ್ಯಕ್ರಮಗಳನ್ನು ಜಾರಿಗೆತಂದಿದ್ದಾರೆ.ಈ ಕಾರ್ಯಕ್ರಮಗಳು ಇಡೀದೇಶದಲ್ಲಿಯೇ ಅನೇಕ ರಾಜ್ಯಗಳ ಗಮನವನ್ನು ಸೆಳೆದಿವೆ. ಆದರೆ, ಈ ದೇಶದರೈತರ ಹಿತರಕ್ಷಣೆ ಮಾಡುವ ನಿಟ್ಟಿನಲ್ಲಿ ಸರ್ಕಾರಇನ್ನಷ್ಟು ಹೆಚ್ಚಿನಗಮನವನ್ನು ವಹಿಸಬೇಕಾಗುತ್ತದೆ.ಏಕೆಂದರೆ, ಇವತ್ತಿನ ದಿವಸ ಕೃಷಿಯನ್ನು ಅವಲಂಬಿಸಿರುವವರು ಬಹಳ ಹತಾಶ ಮನೋಭಾವವನ್ನು ಹೊಂದಿದ್ದಾರೆ. ಒಂದುಕಾಲದಲ್ಲಿ 8–10 ಎಕರೆಜಮೀನುಇದ್ದರೆಆತನನ್ನು ಶ್ರೀಮಂತ ಎಂದು ಪರಿಗಣಿಸಲಾಗುತ್ತಿತ್ತು.

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಭೂ ಸುಧಾರಣಾಕಾಯಿದೆಜಾರಿಗೆ ಬರುವುದಕ್ಕೂ ಮೊದಲು ನೂರಾರುಎಕರೆಜಮೀನು ಹೊಂದಿದ್ದರು. ಕೆಲವೊಬ್ಬರು 1000 ಎಕರೆ 5000 ಎಕರೆಜಮೀನನ್ನು ಹೊಂದಿದ್ದರು.ದೇಸಾಯಿಗಳು ಮತ್ತುಜಹಗೀರದಾರರುಇದ್ದರು.ಈಗ 8–10 ಎಕರೆಇದ್ದರೆಅವರೇಆಗರ್ಭ ಶ್ರೀಮಂತರು.

**ಪ್ರೊಃ ಪಿ.ವಿ.ಕೃಷ್ಣಭಟ್ಟಃ–** ಸನ್ಮಾನ್ಯ ಸಭಾಪತಿಯವರೇ, ನಾನು ಆ ವಿಚಾರದ ಬಗ್ಗೆ ಮಾತನಾಡುತ್ತಿಲ್ಲ.

**ಶ್ರೀ ಬಿ.ಜೆ.ಪುಟ್ಟಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಈಗ ಉಳುವವನಿಗೇ ಭೂಮಿಎಂದಾಗಿದೆ. ಆಗ ಅವರುಗಳು ಅಷ್ಟೂ ಭೂಮಿಯನ್ನು ವ್ಯವಸಾಯಕ್ಕೆ ಒಳಪಡಿಸಿರಲಿಲ್ಲ. ಈಗ ಅವೆಲ್ಲವೂ ವ್ಯವಸಾಯಕ್ಕೆ ಒಳಪಟ್ಟಿವೆ.

**ಶ್ರೀ ಎಸ್.ಆರ್.ಪಾಟೀಲ್–** ಸನ್ಮಾನ್ಯ ಸಭಾಪತಿಯವರೇ, ಮಾಲೀಕರೇ ಬೇರೆ, ಗೇಣಿದಾರರೇ ಬೇರೆ. ಹಿಂದೆ ಉಳುವವನಿಗೇ ಭೂಮಿಎನ್ನುವುದುಜಾರಿಗೆ ಬಂದುಎಲ್ಲಗೇಣಿದಾರರು ಮಾಲೀಕರಾದರು.

**ಪ್ರೊಃ ಪಿ.ವಿ.ಕೃಷ್ಣಭಟ್ಟಃ–** ಸನ್ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವ ವಿಚಾರ ಬೇರೆಯಾಗಿದೆ. ಹಿಂದೆ ನೂರುಎಕರೆಜಮೀನುಇದ್ದರೆಆತನನ್ನು ಬಹಳ ಶ್ರೀಮಂತ ಮತ್ತು ಭಾಗ್ಯವಂತನೆಂದು ಪರಿಗಣಿಸಲಾಗುತ್ತಿತ್ತು.ಈಗ 10 ಅಥವಾ 50 ಎಕರೆಜಮೀನುಇದ್ದರೆಅಯ್ಯೋ ಪಾಪ ಅವನ ಹತ್ತಿರ 50 ಎಕರೆಜಮೀನುಇದೆಯಂತೆಎಂದು ಹೇಳಿ ಆತನ ಬಗ್ಗೆ ಅನುಕಂಪ ಉಂಟಾಗುವ ಪರಿಸ್ಥಿತಿ ನಿರ್ಮಾಣವಾಗಿದೆ.ಗ್ರಾಮೀಣ ಪ್ರದೇಶದ ಪರಿಚಯ ನನಗೆ ಸಾಕಷ್ಟು ಇದೆ.ಅಡಿಕೆತೋಟದ ಮಾಲೀಕರಾಗಿರಬಹುದುಅಥವಾಗದ್ದೆ ಬೆಳೆಯುವವರಾಗಿರಬಹುದುಅಥವಾಕಬ್ಬು ಬೆಳೆಗಾರರಾಗಿರಲಿ ಅವರುತಮಗೆ ಕೃಷಿಯಿಂದಚೆನ್ನಾಗಿಉತ್ಪತ್ತಿ ಬರುತ್ತಿದೆ ನಾವು ಚೆನ್ನಾಗಿ ಬದುಕುತ್ತಿದ್ದೇವೆಎಂದು ಹೇಳುವ ಸ್ಥಿತಿಯಲ್ಲಿ ಇಲ್ಲ. ರೈತಕುಟುಂಬದಲ್ಲಿರುವಯುವಕರು ಕೃಷಿಯಿಂದ ವಿಮುಖರಾಗಿ ನಗರಗಳ ಕಡೆಗೆಧಾವಿಸುತ್ತಿದ್ದಾರೆ.ಈ ರೀತಿ ಕೃಷಿ ಎನ್ನುವುದು ಸಮಾಧಾನಕರವಾದ ಮತ್ತು ಸಂತೃಪ್ತಿಯಜೀವನವನ್ನು

ನಡೆಸುವುದಕ್ಕೆಆಶ್ರಯವನ್ನುಕೊಡುವ ಮಾಧ್ಯಮವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಕೃಷಿ ವಲಯವನ್ನು ಬಲಯುತಗೊಳಿಸುವುದಕ್ಕೆ ವಿಶೇಷವಾಗಿರುವಆದ್ಯತೆಯನ್ನುಕೊಡಬೇಕಾಗಿದೆ.ನಾನು ತೀರ್ಥಹಳ್ಳಿ ಪ್ರದೇಶದಿಂದ ಬಂದಿರುವವನು.ಆ ಭಾಗದಲ್ಲಿ ಬಹಳಷ್ಟು ಜನ ಮೊದಲುಗದ್ದೆ ಮತ್ತುತೋಟ ಮಾಡುತ್ತಿದ್ದವರುಇತ್ತೀಚಿನ ವರ್ಷಗಳಲ್ಲಿ ಅಲ್ಲಿಕಬ್ಬಿನ ತೋಟಗಳನ್ನು ಬೆಳೆಸುತ್ತಿದ್ದಾರೆ.ಶಿವಮೊಗ್ಗದಲ್ಲಿ ಸಕ್ಕರೆಕಾರ್ಖಾನೆಇತ್ತು.ಆ ಕಾರ್ಖಾನೆಗೆಕಬ್ಬನ್ನು ಸರಬರಾಜು ಮಾಡುತ್ತಿದ್ದರು.

**(ಮುಂದುವರಿದಿದೆ)**

(ಸಭಾಪತಿಯವರ ಉಪಸ್ಥಿತಿ)

**ಪ್ರೊ॥ ಪಿ.ವಿ.ಕೃಷ್ಣ ಭಟ್ಟ (ಮುಂದು):–**

ಶಿವಮೊಗ್ಗದಲ್ಲಿರುವ ಸಕ್ಕರೆಕಾರ್ಖಾನೆಗೆ ಆ ಕಬ್ಬನ್ನು ಸರಬರಾಜು ಮಾಡುತ್ತಿದ್ದರು.ಶಿವಮೊಗ್ಗದಲ್ಲಿರುವ ಸಕ್ಕರೆಕಾರ್ಖಾನೆ ಈಗ ಬಂದ್ಆಗಿದೆ ಮತ್ತು ಸುತ್ತಮುತ್ತಇರುವಂಥ ಸಕ್ಕರೆಕಾರ್ಖಾನೆಯೂ ಸಹ ಬಂದ್ಆಗಿದೆ.ಹೀಗಾಗಿ ಅನೇಕರುಅಲ್ಲಿಕಬ್ಬನ್ನು ಬೆಳೆಯತಕ್ಕಂಥಾದ್ದನ್ನು ಕೈಬಿಟ್ಟಿದ್ದಾರೆ.ಬಹುಶಃ ಈ ರೀತಿಯಒಂದು ಪರಿಸ್ಥಿತಿ ಮುಂದುವರೆಯುತ್ತಾ ಹೋದರೆಮುಂದೆಕಬ್ಬನ್ನು ಬೆಳೆಯತಕ್ಕಂಥವರ ಸಂಖ್ಯೆಇನ್ನುಕಡಿಮೆಯಾಗಬಹುದೇನೋಅನ್ನಿಸುತ್ತಿದೆ.ಹೀಗಾಗಿ ನಮಗೆ ಅತ್ಯಂತಅವಶ್ಯಕವಾಗಿರುವಉತ್ಪನ್ನಕಡಿಮೆಯಾಗುತ್ತಾ ಹೋದರೆಇಡೀಭಾರತದೇಶದಲ್ಲಿಆರ್ಥಿಕತೆಗೆಎಲ್ಲಕ್ಕಿಂತ ಮುಖ್ಯವಾಗಿರುವಆಧಾರವೆಂದರೆ ಕೃಷಿ ಎಂಬುದು ನಿಮಗೆ ಗೊತ್ತಿದೆ.ಭಾರತ ಕೃಷಿ ಆಧಾರಿತವಾದಒಂದುದೇಶಎಂದು ನಾವು ಪರಿಗಣಿಸುತ್ತೇವೆ.ಆದರೆ ಈಗ ಕಬ್ಬಿನ ಬೆಳೆ ಕಡಿಮೆಯಾಗುತ್ತಿದೆ, ಅಡಿಕೆ ಬೆಳೆಗಾರರು ತಮ್ಮದೇಆಗಿರತಕ್ಕಂಥ ಸಮಸ್ಯೆಯಲ್ಲಿದ್ದಾರೆ.ಈಗ ಸುಲಭವಾಗಿಅನ್ನಭಾಗ್ಯಯೋಜನೆಯಡಿಯಲ್ಲಿ ಅವರುಗಳಿಗೆ ಅಕ್ಕಿ ಮುಂತಾದವುಗಳು ಸಿಗುತ್ತಿರುವುದರಿಂದ ಭತ್ತವನ್ನು ಬೆಳೆಯತಕ್ಕಂಥವರು ಭತ್ತ ಬೆಳೆಯತಕ್ಕಂಥಾದ್ದನ್ನು ಕೈಬಿಟ್ಟಿದ್ದಾರೆ.ಇದರ ಪರಿಣಾಮವಾಗಿ ಮುಂದಿನ ದಿನಗಳಲ್ಲಿ ಒಂದುದೊಡ್ಡ ಬಿಕ್ಕಟ್ಟುಉಂಟಾಗಬಹುದೆಂದುಕಾಣುತ್ತದೆ.ಕಬ್ಬನ್ನುಯಾರು ಬೆಳೆಯುತ್ತಿದ್ದಾರೆ ಅವರುಯಾವಾಗಲೂ ಸರ್ಕಾರದರಕ್ಷಣೆಯನ್ನು ಬಯಸುವುದಿಲ್ಲ.ಆದರೆಇವತ್ತುಒಂದು ವಿಶೇಷವಾದ ಸಂದರ್ಭ ಬಂದಿದೆ.ಮುಂಚೆ ಹಳ್ಳಿಗಳಲ್ಲಿ ಕಬ್ಬಿನ ಬೆಳೆಗಾರರು ಬೆಲ್ಲವನ್ನುತಯಾರು ಮಾಡುತ್ತಿದ್ದರು.ಈಗ ಬೆಲ್ಲವನ್ನುತಯಾರು ಮಾಡತಕ್ಕಂಥ ಈ ಒಂದು ಪರಿಪಾಠಕಡಿಮೆಯಾಗಿದೆ.ಸಕ್ಕರೆ ಕಾರ್ಖಾನೆಗಳು ಅವರಕಬ್ಬನ್ನು ಕೊಂಡುಕೊಳ್ಳದೇ ಹೋದರೆ ಆ ಕಬ್ಬಿನ ಬೆಳೆಗಾರರಿಗೆ ಬೇರೆದಾರಿಯೇಇರುವುದಿಲ್ಲ.ಕಬ್ಬು ಬೆಳೆಯುವ ರೈತರು ಏಕೆ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದಾರೆ ಎನ್ನುವುದಕ್ಕೆಇದು ಸಹ ಒಂದುಕಾರಣವಾಗಿದೆ.ಭತ್ತ ಬೆಳೆಯುವ ರೈತರು ಬೇರೆಯವರ ಮೇಲೆ ಅವಲಂಬಿತರಾಗಿಲ್ಲ.ಅವರು ಭತ್ತವನ್ನು ಬೆಳೆಯುವುದರಿಂದ ಅದರಿಂದಅಕ್ಕಿಯನ್ನು ಮಾಡಿಸಿಕೊಂಡು ಊಟಕ್ಕೆ ಬಳಸುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಈಗಲೂ ಸಹ ಬೆಲ್ಲವನ್ನುತಯಾರು ಮಾಡುತ್ತಾರೆ. ಸಕ್ಕರೆ ಕಾರ್ಖಾನೆಗಳು ಒಂದುದೊಡ್ಡ ಸಾಮರ್ಥ್ಯದಿಂದಕಬ್ಬನ್ನು ನುರಿಸುತ್ತವೆ, ಆದರೆ ಬೆಲ್ಲವನ್ನು ನೂರು–ಇನ್ನೂರುಟನ್‌ನಲ್ಲಿತಯಾರು ಮಾಡುತ್ತಾರೆ.2013–14ನೇ ಸಾಲಿನಲ್ಲಿ 4

ಲಕ್ಷ ಹೆಕ್ಟೇರ್‌ಗಿಂತ ಹೆಚ್ಚಿನ ಪ್ರದೇಶದಲ್ಲಿಕಬ್ಬನ್ನು ಬೆಳೆಯಲಾಗುತ್ತಿತ್ತು.2014–15ನೇ ಸಾಲಿನಲ್ಲಿ ಸುಮಾರು5 ಲಕ್ಷ ಹೆಕ್ಟೇರ್‌ನಷ್ಟು ಪ್ರದೇಶದಲ್ಲಿಕಬ್ಬನ್ನು ಬೆಳೆಯುತ್ತಿದ್ದರು.ಈ ಸಾರಿ 2015–16ನೇ ಸಾಲಿನಲ್ಲಿ 6 ಲಕ್ಷ ಹೆಕ್ಟೇರ್‌ಗಿಂತ ಹೆಚ್ಚಿನ ಪ್ರದೇಶದಲ್ಲಿಕಬ್ಬನ್ನು ಬೆಳೆಯುತ್ತಿದ್ದಾರೆ.ಕಬ್ಬನ್ನು ಬೆಳೆಯುವ ಪ್ರದೇಶ ಪ್ರತಿ ವರ್ಷ ಹೆಚ್ಚಾಗುತ್ತಾ ಹೋಗುತ್ತಿದೆ.ಇದೊಂದುassured income ಎನ್ನುವರೀತಿಯಲ್ಲಿರೈತರು ಭಾವಿಸುತ್ತಾರೆ. ರೈತರುಆರ್ಥಿಕವಾಗಿ ಸುಸ್ಥಿತಿಗೆ ಬಂದಿದ್ದುಕಬ್ಬಿನ ಬೆಳೆ ಬೆಳೆಯುವುದರಲ್ಲಿ ಮಾತ್ರ. ಉಳಿದ ಬೆಳೆಗಳಲ್ಲಿ ರೈತರುಇಷ್ಟರಮಟ್ಟಿಗೆಉದ್ಧಾರವಾಗಿಲ್ಲ.ನಾನೊಬ್ಬರೈತನಾಗಿ ಹೇಳುತ್ತಿದ್ದೇನೆ.ನಾನು ಕಬ್ಬು ಬೆಳೆಗಾರ ಹಾಗೂ ಎಲ್ಲಾತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತೇನೆ ಎಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.ನಾನು ನನ್ನಅನುಭವದಿಂದ ಈ ಮಾತನ್ನು ಹೇಳುತ್ತಿದ್ದೇನೆ.

**ಪ್ರೊ॥ ಪಿ.ವಿ.ಕೃಷ್ಣ ಭಟ್ಟ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರಿಗೆ ಸಾಕಷ್ಟು ಅನುಭವವಿದೆ. ಅವರುರೈತರಾಗಿ ಮತ್ತು ಸಕ್ಕರೆಕಾರ್ಖಾನೆಯ ಮಾಲೀಕರಾಗಿಯೂ ಸಹ ಅವರಿಗೆಅನುಭವವಿದೆ.

**ಶ್ರೀ ಎಸ್.ಆರ್.ಪಾಟೀಲ್:–** ನಾನೀಗ ಸಕ್ಕರೆಕಾರ್ಖಾನೆಯ ಮಾಲೀಕನಲ್ಲ.

**ಪ್ರೊ॥ ಪಿ.ವಿ.ಕೃಷ್ಣ ಭಟ್ಟ:–** ಮಾನ್ಯ ಸಭಾಪತಿಯವರೆ, ಆದರೆಅವರಿಗೆಅನುಭವವಂತೂಇದೆ. ಇಲ್ಲಿರುವ ಪ್ರಶ್ನೆಏನೆಂದರೆ, ಇದು ಸರ್ವೇಸಾಮಾನ್ಯವಾಗುತ್ತದೆ.ಇದುರೈತನpsychology.ಯಾವ ಬೆಳೆಗೆ ಹೆಚ್ಚಿನ ಬೆಲೆ ಸಿಗುತ್ತದೆ ಎನಿಸುತ್ತದೆಯೋ ಆಗ ಎಲ್ಲರೂ ಆ ದಿಕ್ಕಿಗೆ ನುಗ್ಗುತ್ತಾರೆ.ಒಂದು ಸಾರಿಟೊಮಾಟೋ ಬೆಳೆಯತಕ್ಕಂಥವರ ಸಂಖ್ಯೆ ಹೆಚ್ಚಾಗಿ, ಟೊಮಾಟೋ ಬೆಳೆ ವಿಪರೀತವಾಗಿ ಬಂದು ಬಿಟ್ಟಿತು.ಆಗ ರಸ್ತೆಗಳಲ್ಲಿ ಟೊಮಾಟೋವನ್ನುಚೆಲ್ಲತಕ್ಕಂಥ ಸ್ಥಿತಿ ನಿರ್ಮಾಣವಾಯಿತು.ಹೀಗೆ ಒಂದೊಂದು ಸಂದರ್ಭದಲ್ಲಿಒಂದೊಂದು ಬೆಳೆಗೆ ಹೆಚ್ಚಿನ ಮಾರುಕಟ್ಟೆದೊರೆತಾಗರೈತರು ಆ ಕಡೆಗೆ ನುಗ್ಗತಕ್ಕಂಥಾದ್ದು ಸ್ವಾಭಾವಿಕವಾದುದು.ಮೊದಲನೆಯದಾಗಿರೈತನಿಗೆ ಸರಿಯಾಗಿರತಕ್ಕಂಥ ಮಾರ್ಗದರ್ಶನವು ಸಹ ಆಗಬೇಕು.ಮಾರುಕಟ್ಟೆಯ ಪರಿಸ್ಥಿತಿ ಏನಿದೆ, ಯಾವ ಬೆಳೆಗೆ ಉತ್ತೇಜನಕೊಡಬೇಕು, ಎಷ್ಟು ಬೆಳೆಯನ್ನು ಬೆಳೆಯಬೇಕು, ಎಷ್ಟು ಭೂಮಿಯ ವಿಸ್ತೀರ್ಣದಲ್ಲಿ ಯಾವ ಬೆಳೆಯನ್ನು ಬೆಳೆಯಬೇಕು ಎನ್ನತಕ್ಕಂಥಾದ್ದರ ಬಗ್ಗೆ ಸರಿಯಾದರೀತಿಯಲ್ಲಿ ಶಿಕ್ಷಣ ನೀಡುವಂಥ ಕೆಲಸ ಸರ್ಕಾರದಿಂದ ಆಗಬೇಕು.ಆದರೆರೈತ ವರ್ಷ ಪೂರ್ತಿದುಡಿದು, ಶ್ರಮ ಹಾಕಿ, ಅದಕ್ಕೆ ಬಂಡವಾಳವನ್ನು ಹಾಕಿ ದುಡಿಮೆ ಮಾಡಿದ ನಂತರ ಕೈಗೆ ಬಂದಂಥ ಫಸಲಿಗೆ ಏನೂ ಪ್ರಯೋಜನ ಸಿಗಲಿಲ್ಲವೆಂದರೆಆಗುವಂಥ ಹತಾಶೆಯನ್ನುತಾವು ಊಹೆ ಮಾಡಿಕೊಳ್ಳಬಹುದು.ಆದ್ದರಿಂದಅಂತಹ ಸಂದರ್ಭದಲ್ಲಿ ಸರ್ಕಾರತಕ್ಷಣ ಅವನ ನೆರವಿಗೆ ನಿಂತುಕೊಳ್ಳಬೇಕು.ಚಿಂತೆ ಮಾಡಬೇಡ ನಾವು ನಿನ್ನ ಸಹಾಯಕ್ಕೆಇದ್ದೇವೆ, ನಾವು ನಿನಗೆ ಬೇಕಾಗಿರತಕ್ಕಂಥ ನೆರವನ್ನು ನೀಡುತ್ತೇವೆಎನ್ನುವಂಥಒಂದು ಭರವಸೆ ಮೂಡಬೇಕು. ನಾನು ಬಹಳ ದುಃಖದಿಂದ ಹೇಳಬೇಕಾದಂಥ ಸಂಗತಿಯೇನೆಂದರೆ, ಕಳೆದ ಸಾರಿ ಈ ವಿಷಯವಾಗಿ ಶ್ರೀ ವಿಠ್ಠಲ ಅರಭಾವಿ ಎನ್ನುವಂಥರೈತ ಬೆಳಗಾವಿಯಲ್ಲಿ ಆತ್ಮಹತ್ಯೆಯನ್ನು ಮಾಡಿಕೊಂಡಾಗಇದೇ ಸ್ಥಾನದಲ್ಲಿ ನಾವೆಲ್ಲರೂಚರ್ಚೆಯನ್ನು ಮಾಡಿದ್ದೇವೆ.ಆ ಸಮಯದಲ್ಲಿಒಂದುಘೋಷಣೆಯಂತೂಆಯಿತು.ಸರ್ಕಾರ ಅವನಿಗೆ ಬೇಕಾಗಿರತಕ್ಕಂಥ ಪರಿಹಾರವನ್ನೇನೋಘೋಷಣೆ ಮಾಡಿತು.ಅದರಜೊತೆಗೆಕಬ್ಬು ಬೆಳೆಗಾರರಿಗೆ ನಾವು ಇಷ್ಟು ಕೊಡುತ್ತೇವೆಂದು ಹೇಳಿದರು.ಸರ್ಕಾರದcommitment ಇತ್ತು.ಆ ವರ್ಷ ಕಳೆಯುವುದರೊಳಗೆ, ಕಡೇಪಕ್ಷ ಆ ಘೋಷಣೆಯಾದಎರಡು–ಮೂರು ತಿಂಗಳುಗಳೊಳಗೆ ರೈತರಿಗೆ ಈ ಹಣ

ಪಾವತಿಯಾಗಬೇಕಾಗಿತ್ತುಅಲ್ಲವೇ?ಸರ್ಕಾರಇಷ್ಟೊಂದು ಹತಾಶೆಯ ಸ್ಥಿತಿಯಲ್ಲಿದೆಯೇ,ಮಾಡಲಾರದೆಇರತಕ್ಕಂಥ ಸ್ಥಿತಿಯಲ್ಲಿದೆಯೇ?ರೈತರಿಗೆಕೊಡಬೇಕಾಗಿರತಕ್ಕಂಥ 400–500 ಕೋಟಿರೂಪಾಯಿಯನ್ನು, ತನ್ನ ಮಾತನ್ನುತಾನು ಉಳಿಸಿಕೊಳ್ಳತಕ್ಕಂಥ ನಿಟ್ಟಿನಲ್ಲಿ ಸರ್ಕಾರಆಸಕ್ತಿಯನ್ನು ವಹಿಸಬಾರದಾ? ಒಂದೂವರೆ ವರ್ಷಗಳ ನಂತರವೂ ಸಹ ನಾವಿದನ್ನುಕೊಟ್ಟಿಲ್ಲವೆಂದರೆ ಸರ್ಕಾರಕ್ಕೆಇದೊಂದು ಬಹಳ ದೊಡ್ಡಕಪ್ಪು ಚುಕ್ಕೆ ಎಂದು ನಾನು ಭಾವಿಸುತ್ತೇನೆ.ದಯವಿಟ್ಟುಇನ್ನಾದರೂ ಸಹ ಸರ್ಕಾರಇದನ್ನು ತಿದ್ದಿಕೊಳ್ಳಬೇಕು. ಕೂಡಲೇರೈತರಿಗೆ ಸಿಗಬೇಕಾಗಿರತಕ್ಕಂಥ ಪರಿಹಾರವನ್ನುಕೊಡಿಸಬೇಕು.ನಾಳೆಯ ದಿವಸ ರೈತರು ಹತಾಶರಾಗುತ್ತಾರೆ.ರೈತರು ಹತಾಶರಾಗಿಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದಾರೆ ಎನ್ನುವುದುಒಂದುಕಡೆಯಾದರೆ, ಆಧುನಿಕ ವಿದ್ಯಾಭ್ಯಾಸವೂ ಸಹ ಒಂದುಕಾರಣವಾಗಿದೆ. ಕೃಷಿಯನ್ನು ಮಾಡುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆಕಡಿಮೆಯಾಗುತ್ತಿದೆ.ಕೃಷಿಯನ್ನು ನಾವೇನಾದರೂ ಬಲಪಡಿಸದೇ ಹೋದರೆ, ಅದರ ಬಗ್ಗೆ ನಾವು ನಿರ್ಲಕ್ಷ್ಯವನ್ನು ತೋರಿಸಿದರೆ ಮುಂದಿನ ಹತ್ತು ವರ್ಷಗಳಲ್ಲಿ ನಮ್ಮದೇಶದ ಪರಿಸ್ಥಿತಿ ಏನಾಗಬಹುದುಎನ್ನುವುದನ್ನುತಾವುಯೋಚನೆ ಮಾಡಿ.ಎಲ್ಲಾರೀತಿಯಉತ್ಪಾದನೆಯ ಬಗ್ಗೆ ನಾವು ಯೋಚಿಸಬೇಕು.ಈ ನಿಟ್ಟಿನಲ್ಲಿ ಸರ್ಕಾರ ಮೊಟ್ಟಮೊದಲಿಗೆತಕ್ಷಣದಲ್ಲಿಒಂದು ದಿವಸವೂ ಸಹ ವಿಳಂಬ ಮಾಡದೇ ನಾವು ನಿಮ್ಮ ಬೆನ್ನ ಹಿಂದೆ ನಿಂತಿದ್ದೇವೆ ನೀವು ಚಿಂತೆ ಮಾಡಬೇಡಿ.ನಿಮಗೆ ಸಂಕಟ ಬಂದಾಗ ನಾವು ನಿಮಗೆ ರಕ್ಷಣೆಯನ್ನುಒದಗಿಸುತ್ತೇವೆಎನ್ನತಕ್ಕಂಥಆಶ್ವಾಸನೆಯನ್ನು ಮೂಡಿಸತಕ್ಕಂಥಾದ್ದು ಸರ್ಕಾರದ ಮೊದಲನೆಯಕರ್ತವ್ಯವೆಂದು ನಾನು ಭಾವಿಸುತ್ತೇನೆ.ನನ್ನ ಮಾತನ್ನು ಸರ್ಕಾರ ನೂರಕ್ಕೆ ನೂರುಒಪ್ಪುತ್ತದೆಂದು ನನಗೆ ಸಂಪೂರ್ಣವಾದ ನಂಬಿಕೆ ಇದೆ.ಆದರೆಇದನ್ನು ಕೇವಲ ಒಪ್ಪಿದರೆ ಸಾಲದು.ಅದುಕೃತಿಯಲ್ಲಿ ಇಳಿದು ಬರಬೇಕಾಗಿದೆ.ಆ ನಿಟ್ಟಿನಲ್ಲಿ ಸರ್ಕಾರ ಹಿಂದೆ ಬಿದ್ದಿದೆಎಂದು ನಾನು ಬಹಳ ದುಃಖದಿಂದ ಹೇಳಬೇಕಾಗುತ್ತದೆ.ಇಷ್ಟೊತ್ತಿಗೆ ಈಗಾಗಲೇ ಈ ವಿಷಯದಲ್ಲಿ ಮುಖ್ಯಮಂತ್ರಿಗಳು ಬಹಳಷ್ಟು ಬಾರಿಆಶ್ವಾಸನೆಯನ್ನುಕೊಟ್ಟಿದ್ದಾರೆ, ಮಾತನಾಡಿದ್ದಾರೆ.ಆದರೆಸರ್ಕಾರಕ್ಕೆ ಏಕೆ ಕ್ರಮ ಕೈಗೊಳ್ಳಲಿಕ್ಕೆ ಆಗುತ್ತಿಲ್ಲ.ಬಹಳ ಒಳ್ಳೆಯ ಸಲಹೆಯನ್ನು ನಮ್ಮ ವಿರೋಧ ಪಕ್ಷದ ನಾಯಕರು ಸರ್ಕಾರಕ್ಕೆಕೊಟ್ಟಿದ್ದಾರೆ.ಈಗ ಒಂದು ದಿಟ್ಟವಾಗಿರತಕ್ಕಂಥಕ್ರಮ ಕೈಗೊಳ್ಳತಕ್ಕಂಥ ನಿರ್ಧಾರವನ್ನುಕೈಗೊಂಡಿದ್ದೀರಿ.ಸಕ್ಕರೆ ಕಾರ್ಖಾನೆಗಳ ಮೇಲೆ ದಾಳಿಯನ್ನು ಮಾಡಿದ್ದಾರೆ.ಗೋದಾಮಿನಲ್ಲಿರತಕ್ಕಂಥ ಸಕ್ಕರೆಯನ್ನು ಸರ್ಕಾರತನ್ನ ವಶಕ್ಕೆ ತೆಗೆದುಕೊಂಡಿದೆ. ಹೇಗೂ ಸರ್ಕಾರದ ಬಳಿ ಈಗ ಅಷ್ಟು ಪ್ರಮಾಣದ ಸಕ್ಕರೆಇರುವುದರಿಂದತಕ್ಷಣವೇಇನ್ನೊಂದು ವಾರದಲ್ಲಿಯಾರಿಗೆ, ಇಲ್ಲಿರೈತರದ್ದುತಪ್ಪಿಲ್ಲವೆಂದು ನಾನು ಹೇಳುತ್ತಿಲ್ಲ. ರೈತರು ಅನೇಕ ರೀತಿಯಲ್ಲಿತಪ್ಪನ್ನು ಮಾಡಿರುತ್ತಾರೆ. ಅವರಿಗೆ ಸರಿಯಾದರೀತಿಯಲ್ಲಿ ಶಿಕ್ಷಣ ನೀಡುವಂಥ ಕೆಲಸವೂ ಸಹ ಆಗಬೇಕು.ಆದರೆಯಾರು ಪ್ರಮಾಣಿಕವಾಗಿ ಕೆಲಸ ಮಾಡಿ, ಕಷ್ಟಪಟ್ಟು ವರ್ಷ ಪೂರ್ತಿದುಡಿದು, ನಮ್ಮ ಕೈಗೆ ಪ್ರತಿಫಲ ಸಿಗುತ್ತದೆಂದು ಅವರು ನಿರೀಕ್ಷೆ ಮಾಡುತ್ತಿರುತ್ತಾರೆ.ಬೇರೆಯಾವುದೇಉದ್ಯೋಗದಲ್ಲಿರತಕ್ಕಂಥವರಿಗೆ, ಸರ್ಕಾರಿ ನೌಕರಿಗೆ ಸೇರಿಕೊಂಡು ಬಿಟ್ಟರೆಅವರಿಗೆ ತಿಂಗಳಿಗೆ ಸಂಬಳ ಬರುವುದುಖಾತ್ರಿಯಾಗುತ್ತದೆ, ವರ್ಷದಿಂದ ವರ್ಷಕ್ಕೆಅವರಿಗೆ ಹೆಚ್ಚಿನ ವೇತನ ಬಡ್ತಿಯೂ ಸಹ ಸಿಗುತ್ತಾ ಹೋಗುತ್ತದೆ.ಆದರೆರೈತನ ಸ್ಥಿತಿ ಏನು ಎಂಬುದನ್ನುಯೋಚನೆ ಮಾಡಿ.ಅವನು ವರ್ಷ ಪೂರ್ತಿದುಡಿದು ಮಾಡಿರುವುದಕ್ಕೆತಕ್ಕ ಪ್ರತಿಫಲ ಸಿಗುತ್ತದೆ ಎನ್ನುವ ಭರವಸೆಯೇಇಲ್ಲ. ಇನ್ನು ವೇತನ ಬಡ್ತಿಯ ಪ್ರಶ್ನೆಎಲ್ಲಿಂದ ಬಂತು?ನಾವು ಕೃಷಿಯ ಬಗ್ಗೆ ಇಷ್ಟರಮಟ್ಟಿಗೆ ನಿರ್ಲಕ್ಷ್ಯವನ್ನುತೋರಿದರೆ, ಬಹಳ ಗಂಭೀರವಾಗಿರತಕ್ಕಂಥಅಪಾಯವನ್ನುಇದರಿಂದಎದುರಿಸಬೇಕಾಗುತ್ತದೆ.ಇದುಆಗಬಾರದುಎಂದು ಹೇಳಬಯಸುತ್ತೇನೆ.ಎರಡನೆಯದಾಗಿ ಸಕ್ಕರೆಕಾರ್ಖಾನೆಯ ಮಾಲೀಕರಿಗೆ ಸಮಸ್ಯೆಇಲ್ಲವೆಂದು ನಾನು ಹೇಳುತ್ತಿಲ್ಲ.ಸಕ್ಕರೆ ಬೆಲೆ ಕುಸಿದಿದೆ, ಅದರ ಪರಿಣಾಮವಾಗಿಅವರು ನಷ್ಟದಲ್ಲಿದ್ದಾರೆಂದು ನಾನು ಹೇಳುವುದಿಲ್ಲ.ಅವರಿಗೆ ಲಾಭದ ಅಂಶ ಕಡಿಮೆಯಾಗಿರಬಹುದು ಅಷ್ಟೆ.ಇದುವರೆವಿಗೂಯಾವುದೇ

ಸಕ್ಕರೆಕಾರ್ಖಾನೆಯ ಮಾಲೀಕರುಅವರಿಗೆ ನಷ್ಟವಾಯಿತುಎಂದು ಹತಾಶೆಯಿಂದಆತ್ಮಹತ್ಯೆ ಮಾಡಿಕೊಂಡಿರುವಂಥ ಪ್ರಸಂಗಯಾವುದನ್ನು ನಾನು ಕೇಳಿಲ್ಲ.ಈ ರೀತಿಆಗುವುದು ಬೇಡ.ದೇವರದಯೆಯಿಂದಯಾರೂ ಸಹ ಆತ್ಮಹತ್ಯೆಯನ್ನುಮಾಡಿಕೊಳ್ಳುವುದು ಬೇಡ.ಆದರೆ ಸಕ್ಕರೆಕಾರ್ಖಾನೆಯ ಮಾಲೀಕರಿಗೆಅವರಕಷ್ಟವನ್ನು ಸರ್ಕಾರಅರ್ಥ ಮಾಡಿಕೊಂಡುಅವರಿಗೆ ಏನು ಸಹಾಯವನ್ನುಕೊಡಬೇಕೋಅದನ್ನುಕೊಡಲಿ.ಆದರೆಯಾವರೈತಕಬ್ಬನ್ನು ಬೆಳೆದಿರುತ್ತಾನೆ, ಆ ರೈತನಿಗೆ ಮೊದಲನೆಯಆದ್ಯತೆಯನ್ನುಕೊಡಬೇಕಾಗುತ್ತದೆ.ಆದ್ದರಿಂದಅವರಿಗೆಕೊಡಬೇಕಾಗಿರುವುದರ ಬಗ್ಗೆ ಈ ನಿಟ್ಟಿನಲ್ಲಿ ಸರ್ಕಾರತುರ್ತಾಗಿಕ್ರಮ ಕೈಗೊಳ್ಳಬೇಕಾಗಿರತಕ್ಕಂಥಾದ್ದಿದೆ.ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿವೆ, ಕಷ್ಟದಲ್ಲಿವೆಎಂದುಇವರು ಹೇಳುತ್ತಾರೆ.ಮಾನ್ಯ ಸಭಾನಾಯಕರು ನನ್ನಒಂದು ಪ್ರಶ್ನೆಗೆಉತ್ತರವನ್ನುಕೊಡಬೇಕು.ಇಷ್ಟೆಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಕಷ್ಟವಿದ್ದರೂಕೂಡ ವರ್ಷದಿಂದ ವರ್ಷಕ್ಕೆ ಸಕ್ಕರೆ ಕಾರ್ಖಾನೆಗಳು ಜಾಸ್ತಿಯಾಗುತ್ತಿರುವುದು ಏಕೆ?ಒಂದುಕಾರ್ಖಾನೆಇರುವವರುಎರಡು–ಮೂರು ಕಾರ್ಖಾನೆಗಳನ್ನು ಮಾಡುವುದಕ್ಕೆ ಹೊರಟಿರುವುದು ಏಕೆ?ಆದ್ದರಿಂದರೈತನ ಬೆಳೆಯ ಆಧಾರದ ಮೇಲೆ ಸಕ್ಕರೆ ಕಾರ್ಖಾನೆಗಳು ಲಾಭವನ್ನು ಮಾಡುತ್ತಿದ್ದರೆ ಆ ರೈತನಕತ್ತನ್ನು ಹಿಸುಕಿ, ಅವನನ್ನು ಈ ರೀತಿ ವಿನಾಶದಅಂಚಿಗೆ ತಳ್ಳತಕ್ಕಂಥಾದ್ದು ಇದೊಂದು ಬಹಳ ಗಂಭೀರವಾಗಿರತಕ್ಕಂಥ ಪ್ರಶ್ನೆಯಾಗಿದೆ.ರೈತ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬನ್ನು ಸರಬರಾಜು ಮಾಡುತ್ತಾನೆ, ಸಕ್ಕರೆಕಾರ್ಖಾನೆಯ ಮಾಲೀಕರು ಅವನಿಗೆ ಬೇಕಾಗಿರತಕ್ಕಂಥ ಬೆಲೆಯನ್ನುತೆರುತ್ತಾರೆ. ಅವರಿಬ್ಬರ ಮಾರಾಟ ಸಂಬಂಧ ಮಾತ್ರವಲ್ಲಇದು.ಅವಶ್ಯಕತೆಯನ್ನು ಪೂರೈಸತಕ್ಕಂಥಒಂದು ಪ್ರಶ್ನೆಇಲ್ಲಿಅಡಕವಾಗಿರುವುದರಿಂದ ಸರ್ಕಾರದ ಬಹು ದೊಡ್ಡಜವಾಬ್ದಾರಿಇದರಲ್ಲಿಇರುತ್ತದೆ.ರೈತರ ಹಿತವನ್ನುರಕ್ಷಣೆ ಮಾಡತಕ್ಕಂಥ ನಿಟ್ಟಿನಲ್ಲಿ ಬಹಳ ತೀಕ್ಷ್ಣವಾಗಿಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ನನಗೆ ಅನ್ನಿಸುವುದುಏನೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರಾಗಿಈಶ್ವರಪ್ಪನವರು ಹೇಳಿರತಕ್ಕಂಥ ಸಲಹೆಯನ್ನು ನೀವು ಗಂಭೀರವಾಗಿ ಪರಿಗಣಿಸಿ, ಸರ್ಕಾರ ಈಗ ಸಕ್ಕರೆಯನ್ನು ವಶಪಡಿಸಿಕೊಂಡು ಮುಟ್ಟುಗೋಲು ಹಾಕಿಕೊಂಡಿದೆ.ಅದನ್ನು ನಿಧಾನವಾಗಿ ಮಾರಾಟ ಮಾಡಿಅದರ ಬೆಲೆಯನ್ನು ಸರ್ಕಾರ ಪಡೆದುಕೊಳ್ಳಬಹುದು.

**(ಮುಂದು...)**

**ಶ್ರೀ ಪಿ.ವಿ.ಕೃಷ್ಣಭಟ್(ಮುಂದುವರೆದಿದೆ)**

ಒಂದು ಲಕ್ಷಕೋಟಿ ಬಜೆಟ್ ಹೊಂದಿರುವಂತಹಕರ್ನಾಟಕ ಸರ್ಕಾರಕ್ಕೆರೂ.900 ಕೋಟಿಗಳನ್ನು ಕೊಡುವಂಥದ್ದು ಮತ್ತುಅವರಕಠಿಣ ಪರಿಸ್ಥಿತಿಯಲ್ಲಿ ರಕ್ಷಣೆಗೆ ಬರುವಂಥದ್ದುಅಸಾಧ್ಯವಾದ ಮಾತುಎಂದು ನಾನು ಖಂಡಿತ ಭಾವಿಸುವುದಿಲ್ಲ.ಆದರೆಇದಕ್ಕೆರಾಜಕೀಯ ನಿರ್ಧಾರ ಬೇಕು.ರಾಜಕೀಯ ಇಚ್ಛಾಶಕ್ತಿ ಬೇಕು. ಅದನ್ನುತಾವು ವ್ಯಕ್ತಪಡಿಸಿದರೆ ನಾಳೆಯ ದಿವಸವೇ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.ರೈತರು ನೆಮ್ಮದಿಯ ಉಸಿರು ಬಿಡುವ ಹಾಗಾಗುತ್ತದೆ. ರೈತರಿಗೆ ನೀವು ಪರಿಹಾರವನ್ನುಕೊಟ್ಟರೆ ನಿಮಗೆ ಒಳ್ಳೆಯ ಹೆಸರು ಬರುತ್ತದೆ, ನಮಗಲ್ಲ. ಆ ಒಳ್ಳೆಯ ಹೆಸರನ್ನು ನೀವು ತೆಗೆದುಕೊಂಡರೆ ನಮಗೆ ಸಂತೋಷವಾಗುತ್ತದೆ.ನಿಮಗೆ ಮತ್ತು ಮುಖ್ಯಮಂತ್ರಿಗಳಿಗೆ ಈ ವಿಷಯದಲ್ಲಿ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ. ಸರ್ಕಾರತಕ್ಷಣವೇಒಂದು ನಿರ್ಧಾರ ತೆಗೆದುಕೊಳ್ಳಬೇಕು.ರೈತರಿಗೆ ನೀವು ಸ್ವಲ್ಪಕೊಟ್ಟಿದ್ದೀರಿ, ಇಲ್ಲಎಂದು ಹೇಳುತ್ತಿಲ್ಲ. ಆದರೆಕೊಡಬೇಕಾದ ಬಾಕಿಯನ್ನು ನಾಳೆಯ ದಿವಸವೇ ಕೊಡಲುತೀರ್ಮಾನ ಮಾಡುತ್ತೇವೆಎನ್ನುವ ನಿರ್ಧಾರತೆಗೆದುಕೊಂಡರೆರಾಜ್ಯದರೈತರ ಬದುಕಿನಲ್ಲಿ ಬೆಳಕನ್ನು ತಂದ ಹಾಗೆ ಆಗುತ್ತದೆ,

ಅವರಲ್ಲಿಧೈರ್ಯತುಂಬಿದ ಹಾಗೆ ಆಗುತ್ತದೆ.ಇಡೀರೈತ ಸಮುದಾಯಕ್ಕೆಅದು ಶಕ್ತಿಯನ್ನುಕೊಡತಕ್ಕಂಥಕ್ರಮವಾಗುತ್ತದೆ.ಈ ನಿಟ್ಟಿನಲ್ಲಿ ಸರ್ಕಾರತುರ್ತುಕ್ರಮ ಕೈಗೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಗಳು:–** ಈಗ ಮಾನ್ಯಕೃಷ್ಣಪ್ಪನವರು ಮಾತನಾಡುತ್ತಾರೆ. ಮಾನ್ಯಕೃಷ್ಣಪ್ಪನವರುಎದ್ದು ನಿಂತತಕ್ಷಣ ನಾನು ಈ ಮಾತನ್ನು ಹೇಳುತ್ತಿದ್ದೇನೆಎಂದು ಭಾವಿಸಿ ಬೇಜಾರಾಗಬಾರದು.ಈಗಾಗಲೇ ಸಾಕಷ್ಟು ವಿಷಯಚರ್ಚೆಯಾಗಿದೆ. ಹೇಳಬೇಕಾಗಿರುವುದನ್ನು ಸ್ವಲ್ಪ ಸಮಯದಲ್ಲಿ ಹೇಳುವುದಕ್ಕೆ ಪ್ರಯತ್ನ ಮಾಡಿದರೆ ಒಳ್ಳೆಯದು. ಇಂತಿಷ್ಟೇ ನಿಮಿಷ ಮಾತನಾಡಿಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಅದನ್ನು ನಿಮಗೇ ಬಿಡುತ್ತೇನೆ.ಆದರೆ, ಸ್ವಲ್ಪ ಸಮಯದಲ್ಲಿ ಹೇಳಿ ಮುಗಿಸಿದರೆ ಇನ್ನೂ ಬೇರೆಯವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬಹುದು.ಕೆಲವರಿಗೆ, ನಾನೇ ಜಾಸ್ತಿ ಹೊತ್ತು ಮಾತನಾಡಬೇಕು ಎಂದೆನಿಸಿದರೆ ಅದಕ್ಕೆ ನಾನು ಅಡ್ಡ ಬರುವುದಿಲ್ಲ.

**ಶ್ರೀ ಬಿ.ರಾಮಕೃಷ್ಣ:–**ಮಾನ್ಯ ಸಭಾಪತಿಗಳೆ, ಸುವರ್ಣ ವಿಧಾನಸೌಧಕ್ಕೆ ಪೊಲೀಸರನ್ನು ಭೇದಿಸಿ ಬರುವುದಕ್ಕೆತಡವಾಗಿ ಹೋಯಿತು. ನಾವು ತುರ್ತು ಪರಿಸ್ಥಿತಿಯಲ್ಲಿದ್ದೇವೆಯೋ ಏನೋ ಎಂದು ನಮಗೆ ಗೊಂದಲ ಉಂಟಾಯಿತು.ಇಷ್ಟೊಂದು ಪೊಲೀಸಿನವರು ಏಕೆ ಬೇಕಿತ್ತು? . . .

**ಸಭಾಪತಿಗಳು:–** ನನಗೆ ಗೊತ್ತಿಲ್ಲ . . .

**ಶ್ರೀ ಬಿ.ರಾಮಕೃಷ್ಣ:–**ಇಷ್ಟೊಂದುಜನ ಪೊಲೀಸರು ಏಕೆ ಬೇಕಿತ್ತು? ತುರ್ತು ಪರಿಸ್ಥಿತಿಯನ್ನೇನಾದರೂ ಘೋಷಣೆ ಮಾಡಿದ್ದಾರೆಯೇ? ನನಗೇನು ಅರ್ಥವಾಗುತ್ತಿಲ್ಲ.ನಾವು ರೂಮ್‌ಗೆ ಹೋಗಬೇಕಾದರೆ ಏನು ಮಾಡಬೇಕು?

**ಸಭಾಪತಿಗಳು:–**ಆಯಿತು ಬಿಡಿ, ವಿಷಯಾಂತರಆಗುವುದು ಬೇಡ. ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ನಿಯಮ 68ರ ಅಡಿ ಚರ್ಚೆ ನಡೆಯುತ್ತಿದೆ.ಆ ಚರ್ಚೆಯಲ್ಲಿ ಮಾನ್ಯಕೃಷ್ಣಪ್ಪನವರು ಮಾತನಾಡುತ್ತಾರೆ.

**ಶ್ರೀ ಇ.ಕೃಷ್ಣಪ್ಪ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** ಮಾನ್ಯ ಸಭಾಪತಿಗಳೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸುತ್ತೇನೆ. ಈಗಾಗಲೇ ರೈತರ ಸಮಸ್ಯೆಯ ಬಗ್ಗೆ ಸುದೀರ್ಘವಾದಚರ್ಚೆ ನಡೆದಿದೆ.ಮಾನ್ಯ ಸಿದ್ಧರಾಮಯ್ಯನವರ ಸರ್ಕಾರ ಬಂದ ಮೇಲೆ ಇದುಮೂರನೆಯಅಧಿವೇಶನ.ಈ ಮೂರನೆಯಅಧಿವೇಶನದಲ್ಲೂಕಬ್ಬಿನ ಬಗ್ಗೆಯೇ ಮಾತನಾಡುತ್ತಿದ್ದೇವೆ.ಹಿಂದಿನಿಂದ ಈ ವಿಷಯವನ್ನು ಮಾತನಾಡುತ್ತಲೇಇದ್ದೇವೆ.ಮಾನ್ಯ ಸಭಾಪತಿಗಳೆ, ತಮ್ಮ ಮುಖಾಂತರ ನಮ್ಮ ಆಡಳಿತ ಪಕ್ಷದಎಲ್ಲಾ ಸದಸ್ಯರಿಗೆ ನಾನು ಕೇಳಿಕೊಳ್ಳುವುದೇನೆಂದರೆ, ಹಿಂದೆ ವಿಠಲ ಅರಭಾವಿಯವರು ಸತ್ತಾಗ . . . ಮೊದಲೇ ನಾವು, ಅವರಿಗೆಏನಾದರೂ ಪರಿಹಾರಕೊಡಿಎಂದು ಹೇಳಿದ್ದೆವು. ಆಗ ಕೊಡಲಿಲ್ಲ.ಕಡೆಗೆ ಆ ಪುಣ್ಯಾತ್ಮ ಸತ್ತ ಮೇಲೆ ಆ ರೈತರಿಗೆಒಂದುಟನ್‌ಗೆರೂ.150 ಹಣಕೊಡುವ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡಿದೆ.ಅಂದರೆ ಆ ರೈತ ಸತ್ತಮೇಲೆ ನಾವು ಪರಿಹಾರಕೊಡುವುದಕ್ಕೆ ಮೊದಲೇ, ಆ ಕಬ್ಬಿನ ಬೆಳೆಗಾರರಿಗೆ ಪರಿಹಾರಕಂಡುಹಿಡಿಯುವ ಪ್ರಯತ್ನ ಮಾಡಲಿಲ್ಲ ಎನ್ನುವುದು ನನ್ನ ಅನಿಸಿಕೆಯಾಗಿದೆ.ಅಧಿವೇಶನವನ್ನು ದಿನಾಂಕ 29 ರಿಂದ ನಿಗದಿ ಮಾಡಿದ್ದೆವು.ಕಬ್ಬಿನ ಬೆಳೆಗಾರರ ಸಮಸ್ಯೆಇದೆಎಂದು ಮೊದಲೇಗೊತ್ತಿತ್ತು.ಕಳೆದ ಒಂದು ವಾರದಿಂದ ಸಕ್ಕರೆ ಕಾರ್ಖಾನೆಗಳಿಗೆ ಬೀಗ ಹಾಕಿಸಿದ್ದೇವೆ, ಸೀಜ಼್ ಮಾಡಿರುವ ಸಕ್ಕರೆಯನ್ನು ಹರಾಜು ಹಾಕಿಸುತ್ತೇವೆಎಂದು ಹೇಳಿದರು.ನಮ್ಮ ಸಕ್ಕರೆ ಸಚಿವರೂ ಸಹ, ಹಣವನ್ನುಇವತ್ತುಕೊಡಿಸುತ್ತೇವೆ, ನಾಳೆ ಕೊಡಿಸುತ್ತೇವೆಎಂದು ಸಾಕಷ್ಟು ಸಲ ಹೇಳಿದರು.ಆ ಜನಕಾಯುತ್ತಲೇಇದ್ದಾರೆ.ಅವರಿಗೆಯಾರಿಗೂ ಹಣತಲುಪಲಿಲ್ಲ.ಕೇವಲ ಆಶ್ವಾಸನೆ, ಸಭೆಗಳು ಮಾತ್ರ ನಡೆದವು. ಮುಟ್ಟುಗೋಲು ಹಾಕಿಕೊಳ್ಳುವಂತಹ ಕೆಲಸ ಕಳೆದ 1 ತಿಂಗಳಿನಿಂದಲೋ, 2 ತಿಂಗಳ ಹಿಂದಿನಿಂದಲೋ ನಡೆದಿದ್ದರೆ ಈ ಸಮಸ್ಯೆಗೆ ಪರಿಹಾರಕಂಡುಹಿಡಿಯಬಹುದಾಗಿತ್ತೇನೋಎಂದೆನಿಸುತ್ತಿದೆ. ಯಾವಾಗಎರಡು–ಮೂರುಕಡೆಕಬ್ಬಿನಗದ್ದೆಗೆ ಬೆಂಕಿ ಇಟ್ಟು, ಆ ರೈತ ಸತ್ತಮೇಲೆ ಮತ್ತು ಬೆಳಗಾವಿಯ ರೈತ ಸತ್ತಮೇಲೆ ನಮ್ಮಎಲ್ಲಾ ಸರ್ಕಾರಿ ಅಧಿಕಾರಿಗಳಿಗೆ, ತಹಸೀಲ್ದಾರ್, ಡಿಸಿಗಳಿಗೆ, ಅಧಿವೇಶನ ನಡೆಯುತ್ತಿದೆ, ಅಲ್ಲಿಏನಾದರೂ ನಮ್ಮ ಮಾನ–ಮರ್ಯಾದೆ ಉಳಿಯಬೇಕಾದರೆ ನೀವೇನಾದರೂ ಪ್ರಯತ್ನ ಮಾಡಿ ಬೀಗ ಹಾಕಿಸಿಕೊಂಡು ಬನ್ನಿ ಎಂದು ಹೇಳಿದ್ದಾರೆ. ಹಣ ಬಂದಿಲ್ಲ ಎಂದು ಹೇಳಿ ಅಲ್ಲೊಬ್ಬಇಲ್ಲೊಬ್ಬರೈತರುಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇನ್ನೊಂದುಕಡೆಯೋಚನೆ ಮಾಡಿದರೆ, ಕಾರ್ಖಾನೆಗಳಿಗೆ ಬೀಗ ಹಾಕಿಸಿ ಸಕ್ಕರೆಯನ್ನು ಸೀಜ಼್ ಮಾಡಿಸಿದ್ದೀರಿ.ಫ್ಯಾಕ್ಟರಿಗಳನ್ನು ಮುಚ್ಚಿಸಿದ್ದೀರಿ.ಇನ್ನೊಂದು 2–3 ತಿಂಗಳಲ್ಲಿ ಮತ್ತೆಕಬ್ಬುಅರೆಯುವುದಕ್ಕೆ ಪ್ರಾರಂಭ ಮಾಡಬೇಕು.ಇದೇ ಹಠವನ್ನುಕಾರ್ಖಾನೆಯವರು ಮಾಡಿದರೆ . . .ನಮ್ಮಕರ್ನಾಟಕದಲ್ಲಿನ 68 ಕಾರ್ಖಾನೆಗಳವರು ಮೊಂಡು ಬಿದ್ದರೆ, ಇರುವಂತಹ 8 ಲಕ್ಷ ಜನ ಕಬ್ಬು ಬೆಳೆಗಾರರು ಸರ್ವನಾಶವಾಗುತ್ತಾರೆ. ಈಗ ಒಬ್ಬೊಬ್ಬರು ಸಾಯುತ್ತಿದ್ದಾರೆ, ಆಗ ಇಡೀ ಕುಟುಂಬಗಳೇ ಸಾಯಬೇಕಾಗುತ್ತದೆ. ಇದು ಮುಖ್ಯವಲ್ಲ.ಈ ವ್ಯತ್ಯಾಸಗಳ ಬಗ್ಗೆ ನಾವಿಲ್ಲಿ ಚರ್ಚೆ ಮಾಡಿದರೆ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ನಾವು ಬಜೆಟ್‌ಗೆ ಅನುಮೋದನೆ ಪಡೆಯುವ ಸಲುವಾಗಿ ಅಧಿವೇಶನವನ್ನು ಇಲ್ಲಿ ಮತ್ತು ಬೆಂಗಳೂರಿನ ವಿಧಾನಸೌಧದಲ್ಲಿ ನಡೆಸುತ್ತಿದ್ದೇವೆ. ನಮ್ಮ ಬಜೆಟ್ ಗಾತ್ರ 1 ಲಕ್ಷ 47 ಸಾವಿರ ಕೋಟಿಗಳು. ನಾವು ರೈತರಿಗೆ ಕೇವಲ ರೂ.900 ಕೋಟಿಗಳನ್ನು ಕೊಡಬೇಕು. ಅಂದರೆ ಶೇಕಡವಾರು ತೆಗೆದುಕೊಂಡಾಗ 0.6 ಪರ್ಸೆಂಟ್ ಕೊಡಬೇಕು. ಈ 0.6 ಪರ್ಸೆಂಟ್ ಕೊಡುವುದರಿಂದ ಸಮಗ್ರ ಕರ್ನಾಟಕದ ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸಿದಂತಾಗುತ್ತದೆ ಎನ್ನುವುದನ್ನು ನಮ್ಮ ಸರ್ಕಾರ ತಿಳಿದುಕೊಳ್ಳಬೇಕು. ನಾವು ರೈತರ ಬಗ್ಗೆ ಸಾಕಷ್ಟು ಆಶ್ವಾಸನೆಗಳನ್ನು ಕೊಡುತ್ತಾ ಬಂದಿದ್ದೇವೆ. ನಿಜಕ್ಕೂ ಅವರು ನಿಮ್ಮ ಆಶ್ವಾಸನೆಗಳನ್ನು ಭರವಸೆಗಳನ್ನು ನೋಡುತ್ತಲೇ ಇದ್ದಾರೆ. ಅವರು ಇವತ್ತು ಹತಾಶರಾಗಿ ಆತ್ಮಹತ್ಯೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಮುಂದಿನ ದಿವಸಗಳಲ್ಲಿ ರೈತ ಬೆಳೆದಂತಹ ಬೆಳೆಗಳನ್ನು, . . . ಈಗ ನಾವು ಕಬ್ಬಿನ ಬೆಳೆಯ ಬಗ್ಗೆ ಮಾತನಾಡುತ್ತಿದ್ದೇವೆ. ರೇಷ್ಮೆ ಬೆಳೆಯುವವರ ಕಷ್ಟಗಳನ್ನು, ಅಡಿಕೆ ಬೆಳೆಗೆ ತಗಲುವ ಕೊಳೆ ರೋಗದ ಕಷ್ಟಗಳನ್ನು, ತೆಂಗು ಬೆಳೆಗಳಿಗೆ ತಗಲುವ ನುಸಿ

ರೋಗದ ಕಷ್ಟಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ದಾಳಿಂಬೆ ಬೆಳೆದಂತಹ ನೂರಾರು ರೈತರುಗಳು ದಯಾಮರಣ ಕೇಳುವುದಕ್ಕೆ ರಾಜ್ಯಪಾಲರ ಹತ್ತಿರ ಅರ್ಜಿ ಕೊಡುವುದಕ್ಕೆ ಹೊರಟ್ಟಿದ್ದಾರೆ. ಆಲೂಗಡ್ಡೆ ಬೆಳೆಯುವ ರೈತರ ಬಗ್ಗೆ ಮಾತನಾಡುತ್ತಾ, ಅಂಗಮಾರಿರೋಗದ ಬಗ್ಗೆ . . .

**ಸಭಾಪತಿಗಳು:–** ಮಾನ್ಯ ಸದಸ್ಯರೇ, ನಾವು ಇಡೀ ಕೃಷಿ ಇಲಾಖೆಯ ಬಗ್ಗೆ ಅಥವಾ ರೈತರ ಬಗ್ಗೆ ಚರ್ಚೆ ಮಾಡುತ್ತಿಲ್ಲ ಇವತ್ತು ಕೇವಲ ಒಂದೇ ಒಂದು ವಿಷಯದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಕಬ್ಬು ಬೆಳೆಗಾರರಿಗೆ ಕೊಡಬೇಕಾಗಿರುವ ಬಾಕಿ ಹಣದ ಬಗ್ಗೆ ಮಾತನಾಡುತ್ತಿದ್ದೇವೆ. ಪ್ರಾಸಂಗಿಕವಾಗಿ ಎರಡು ಮಾತನಾಡುವುದು ತಪ್ಪಲ್ಲ. ಆದರೆ ಇಲ್ಲಿ ಸಮಯದ ಪ್ರಶ್ನೆ ಇದೆ. ನಾವು ಎಲ್ಲಾ ವಿಷಯ ಚರ್ಚೆ ಮಾಡಿದರೆ ಕೃಷಿ ಇಲಾಖೆ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ, ನಾಳೆಯಿಂದ ಬೇಕಾದರೆ ಅದನ್ನೇ ತೆಗೆದುಕೊಳ್ಳೋಣ. ಆಗ ಸುಲಭವಾಗುತ್ತದೆ. ನೀವು ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಿದರೆಯಾವುದಕ್ಕೂ ಉತ್ತರ ಸಿಗುವುದಿಲ್ಲ. ಈಗ ಇರುವ ಪ್ರಶ್ನೆಗೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಬೇಕು. ತಾವು ಮತ್ತು ಮುಂದೆ ಮಾತನಾಡುವವರು ಪ್ರಸ್ತುತ ವಿಷಯಕ್ಕೆ ಸೀಮಿತಗೊಳಿಸಿ ಮಾತನಾಡಿದರೆ ಚರ್ಚೆ ಫಲಪ್ರದವಾಗುತ್ತದೆ. ದಯಮಾಡಿ ಕ್ಷಮಿಸಬೇಕು.

**ಶ್ರೀ ಇ.ಕೃಷ್ಣಪ್ಪ:–**ಮಾನ್ಯ ಸಭಾಪತಿಗಳೆ, ಸಕ್ಕರೆ ಫ್ಯಾಕ್ಟರಿಗಳನ್ನೇನು ಮುಚ್ಚಿಸಿದ್ದಾರೋ ಅವರನ್ನೂ ನೀವು ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳಬೇಕಾಗುತ್ತದೆ. ಅವು ಸಹಕಾರಿ ಸಕ್ಕರೆ ಕಾರ್ಖಾನೆಗಳು ಇರಬಹುದುಅಥವಾ ಖಾಸಗಿ ವಲಯದ್ದಿರಬಹುದು, ಅವರಿಗೂ ನೀವು ಶಕ್ತಿ ತುಂಬುವ ಕೆಲಸವನ್ನು ಮಾಡಿದರೆ ಮಾತ್ರ ಮುಂದಿನ ದಿವಸಗಳಲ್ಲಿ ಇರುವಂಥಕಬ್ಬನ್ನುಅರೆಯುವ ಪ್ರಯತ್ನ ಮಾಡುತ್ತಾರೆ.ನಮ್ಮ ಬಜೆಟ್‌ಗಾತ್ರದೊಡ್ಡದಾಗಿರುವುದರಿಂದರೂ.900 ಕೋಟಿ ಏನು ಬಾಕಿ ಇದೆ, ಅದನ್ನುಕೊಡಬೇಕು. ಆ ಸಕ್ಕರೆಯನ್ನುಎಕ್ಸ್‌ಪೋರ್ಟ್ ಮಾಡುತ್ತೀರೋ, ಹರಾಜು ಹಾಕುತ್ತೀರೋಅಥವಾ ಸಕ್ಕರೆಯನ್ನು ನೀವೇ ಇಟ್ಟುಕೊಳ್ಳುತ್ತೀರೋ . . .ಮಾನ್ಯ ಸಭಾಪತಿಗಳೆ, ನಮ್ಮಲ್ಲಿ ಈಗ ಹೆಚ್ಚಿನ ಹಾಲು ಉತ್ಪಾದನೆಯಾಗಿದೆ. ಮಕ್ಕಳಿಗೆ ಹಾಲು ಭಾಗ್ಯಕೊಟ್ಟಿದ್ದೇವೆ.ಸಕ್ಕರೆ ಭಾಗ್ಯವನ್ನೂಕೊಡಬಹುದುಅಲ್ಲವೇ?ಇದರಿಂದ ಬಡಜನರಿಗೆ ಅನುಕೂಲವಾಗುತ್ತದೆ. ಹಸಿದ ಹೊಟ್ಟೆಯನ್ನುತುಂಬಲು ಅನ್ನ ಭಾಗ್ಯಯೋಜನೆ ಅಡಿ ಉಚಿತಅಕ್ಕಿಯನ್ನುಕೊಡುತ್ತಿದ್ದೇವೆ. ಕಬ್ಬು ಬೆಳೆಗಾರರ ಸಮಸ್ಯೆ ಪರಿಹರಿಸಲು ಸಕ್ಕರೆಯನ್ನು ಹಂಚಬಹುದು.ಇದನ್ನುರೇಷನ್ ಕಾರ್ಡ್‌ಗಳ ಮುಖಾಂತರಕೊಡುತ್ತೀರೋಅಥವಾ ಶಾಲೆಗಳ ಮುಖಾಂತರಕೊಡುತ್ತೀರೋಕೊಡಿ.ರೂ. 900 ಕೋಟಿಬಾಕಿ ಹಣವನ್ನುಕೊಟ್ಟು ಮುಂದಿನ ಕಾರ್ಯಕ್ರಮವನ್ನು ಮಾಡಿದರೆ ನಿಜವಾಗಲೂಕಬ್ಬು ಬೆಳೆಗಾರರಿಗೆ ಪರಿಹಾರಕೊಟ್ಟ ಹಾಗಾಗುತ್ತದೆ.

**(ಮುಂದು . . .)**

**ಶ್ರೀ ಇ.ಕೃಷ್ಣಪ್ಪ(ಮುಂದು):–**

ಮಾನ್ಯ ಸಭಾಪತಿಯವರೇ, ಮತ್ತೊಂದು ಸಮಸ್ಯೆ ಇದೆ. ಮುಂದಿನ ದಿವಸಗಳಲ್ಲಿ ಈ ಕಬ್ಬು ಬೆಳೆಗಾರರಿಗೆ ಈಗ ಕೇಂದ್ರ ಸರ್ಕಾರ FRPಬೆಲೆಯನ್ನು 2200 ರೂಪಾಯಿಯನ್ನು ಇಟ್ಟಿದೆ. ಈಗಾಗಲೇ ಕಳೆದ ಒಂದೂವರೆ ವರ್ಷದ ಮುಂಚೆಯೇ ನಮ್ಮ 150 ರೂಪಾಯಿ ಸೇರಿ 2350 ರೂಪಾಯಿ ಇದ್ದಾಗ 2500 ರೂಪಾಯಿ ಎಂದು ಘೋಷಣೆ ಮಾಡಿದ್ದೆವು. ಈ ವರ್ಷ ಏನು ಕೊಡುತ್ತಾರೆ ಎಂಬುದನ್ನು ಸರ್ಕಾರ ತಿಳಿಸಬೇಕಾಗುತ್ತದೆ. ಕನಿಷ್ಟ 500 ರೂಪಾಯಿಗಳನ್ನು ಸರ್ಕಾರದ ವತಿಯಿಂದ ಸೇರಿಸಿ 2700 ರೂಪಾಯಿಯಷ್ಟು ಹಣ ಕೊಟ್ಟರೆ ಆ ರೈತ ಬದುಕುತ್ತಾನೆಂದು ತಮ್ಮ ಮೂಲಕ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

**ಸಭಾಪತಿಯವರು:–** ತಾವು ಎಷ್ಟು ಹೊತ್ತು ಮಾತನಾಡುತ್ತೀರಿ? ಮಾನ್ಯ ಅಶ್ವತ್ ನಾರಾಯಣರವರ ಹೆಸರು ಇದೆ. ಅವರು ಮಾತನಾಡುವುದಿಲ್ಲ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಮಾತನಾಡುವುದಿಲ್ಲ. ಮಾನ್ಯ ನಾರಾಯಣಸ್ವಾಮಿಯವರೇ, ತಾವು ಎಷ್ಟು ಸಮಯ ಮಾತನಾಡುತ್ತೀರಿ?

**ಶ್ರೀ ವೈ.ಎ.ನಾರಾಯಣಸ್ವಾಮಿ:–**ಮಾನ್ಯ ಸಭಾಪತಿಯವರೇ, ಎಷ್ಟು ಸಮಯ ಮಾತನಾಡಬೇಕೆಂದು ತಾವೇ ಹೇಳಿ.

**ಸಭಾಪತಿಯವರು:–**ನಾನು ಹೇಳುವುದಲ್ಲ, ನಾನು ಎಂಟು ಗಂಟೆಯವರೆಗೆ ಕುಳಿತುಕೊಳ್ಳುತ್ತೇನೆ. ನೀವು ಎಷ್ಟು ಸಮಯ ಮಾತನಾಡುತ್ತೇನೆಂದು ಹೇಳುತ್ತೀರೋ ಅಷ್ಟೇ ಸಮಯದಲ್ಲಿ ಮುಗಿಸಿ.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ನಾಳೆ ಮಾತನಾಡುತ್ತೇನೆ.

**ಸಭಾಪತಿಯವರು:–** ನಾಳೆ ಆಗುತ್ತದೆಯೋ ಏನೋ ಗೊತ್ತಿಲ್ಲ.

**ಡಾ:ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಆ ಕಡೆ ಒಬ್ಬರಿಗೆ, ಈ ಕಡೆ ಒಬ್ಬರಿಗೆ ಅವಕಾಶ ಕೊಡುತ್ತಾ ಹೋದರೆ ಸರಿಯಾಗುತ್ತದೆ.

**ಸಭಾಪತಿಯವರು:–** ವೀರಣ್ಣನವರೇ, ಅವರೊಬ್ಬರದ್ದಾದರೆ ಮುಗಿದು ಹೋಗುತ್ತದೆ. ಉಳಿದವರು ಮಾತನಾಡುವುದಿಲ್ಲವೆಂದು ಹೇಳಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಹೇಳಿರುವುದು ಸರಿಯಾಗಿದೆ. ಈ ಕಡೆ ಒಬ್ಬರಿಗೆ, ಆ ಕಡೆ ಒಬ್ಬರಿಗೆ ಅವಕಾಶ ಕೊಟ್ಟು ನಾಳೆ ಇದೇ ವಿಷಯವನ್ನು ಮುಂದುವರೆಸಿ.

**ಸಭಾಪತಿಯವರು:–**ಈ ಕಡೆಯಿಂದ ಆಗಿ ಹೋಗಿದೆ, ಇನ್ನು ಒಂದೇ ಹೆಸರು ಇರುವುದು. ನನ್ನ ಹತ್ತಿರ ಇರುವ ಪಟ್ಟಿಯಲ್ಲಿ ಮಾನ್ಯ ನಾರಾಯಣಸ್ವಾಮಿಯವರೊಬ್ಬರದ್ದು ಇದೆ.

**ಶ್ರೀ ಅಶ್ವತ್ ನಾರಾಯಣ:–** ಮಾನ್ಯ ಸಭಾಪತಿಯವರೇ, ನನ್ನ ಹೆಸರು ಇದೆ.

**ಸಭಾಪತಿಯವರು:–** ನಾನು ನಿಮ್ಮ ಹೆಸರು ಕರೆದಾಗ ಮಾತನಾಡುವುದಿಲ್ಲ ಎಂದು ಹೇಳಿದ್ದೀರಿ, ಈಗ ನಾನೇನು ಮಾಡುವುದಕ್ಕಾಗುವುದಿಲ್ಲ. ದಯಮಾಡಿ ಬೇರೆಯವರು ಕುಳಿತುಕೊಳ್ಳಿ. ನಾರಾಯಣಸ್ವಾಮಿಯವರೇ, ತಾವು ಎಷ್ಟು ಸಮಯ ಮಾತನಾಡುತ್ತೀರಿ? ನೀವು ಹೇಳಿದಷ್ಟು ಸಮಯ ಅವಕಾಶ ಕೊಡುತ್ತೇನೆ. ಆದರೆ ನೀವು ಹೇಳಿದಷ್ಟು ಸಮಯ ಮಾತನಾಡಬೇಕು ಅದಕ್ಕಿಂತ ಒಂದು ನಿಮಿಷವೂ ಜಾಸ್ತಿ ಕೊಡುವುದಿಲ್ಲ. ನೀವು ಎಷ್ಟು ಹೊತ್ತಾದರೂ ಮಾತನಾಡಿ. ನನ್ನದೇನೂ ಅಭ್ಯಂತರವಿಲ್ಲ. ತಾವು ಐದು ನಿಮಿಷ, ಐವತ್ತು ನಿಮಿಷ ಮಾತನಾಡಿದರೂ ಅವಕಾಶ ಕೊಡುತ್ತೇನೆ.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ನಾಳೆ ಮಾತನಾಡುತ್ತೇನೆ.

**ಸಭಾಪತಿಯವರು:–** ಎಲ್ಲರೂ ನಾಳೆ ಮಾತನಾಡುತ್ತೇನೆಂದರೆ ಇವತ್ತು ಯಾರು ಮಾತನಾಡುತ್ತಾರೆ?

**ಡಾ:ಮತ್ತಿಕಟ್ಟಿ ವೀರಣ್ಣ:–**ತಾವು ಸದನ ಮುಂದುವರೆಸುವುದಾದರೆ ಈಗ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳಿ. ಇಲ್ಲದಿದ್ದರೆ ಲ್ಯಾಪ್ಸ್ ಆಗುತ್ತದೆ.

**ಸಭಾಪತಿಯವರು:–** ಸಚಿವರೆಲ್ಲರೂ ಸದನದಲ್ಲಿ ಹಾಜರಾಗಿರಬೇಕಾಗುತ್ತದೆ. ಈಗ ಉಗ್ರಪ್ಪನವರು ಮಾತನಾಡುವುದಕ್ಕೆ ತಯಾರಾಗಿದ್ದಾರೆ. ಉಗ್ರಪ್ಪನವರೇ, ತಮಗೂ ಅದೇ ಪ್ರಶ್ನೆ ಕೇಳುತ್ತೇನೆ. ದಯವಿಟ್ಟು ತಾವು

ತಪ್ಪು ತಿಳಿಯಬೇಡಿ. ನಾನು ನೀವು ಹೇಳಿದಷ್ಟು ಸಮಯ ಕೊಡುತ್ತೇನೆ. ನೀವು ಹೇಳಿದ ಸಮಯಕ್ಕೆ ಸರಿಯಾಗಿ ಮುಗಿಸಬೇಕು.

**ಶ್ರೀ ವಿ.ಎಸ್.ಉಗ್ರಪ್ಪ:–**ಮಾನ್ಯ ಸಭಾಪತಿಯವರೇ, ಒಂದು ಗಂಟೆ ಸಮಯ ಬೇಕಾಗುತ್ತದೆ.

**ಸಭಾಪತಿಯವರು:–**ಒಂದು ಗಂಟೆ ಸಮಯ... I am agreed.

**ಶ್ರೀ ವಿ.ಎಸ್.ಉಗ್ರಪ್ಪ:–** ಆ ಕಡೆ ಒಬ್ಬರಿಗೆ ಈ ಕಡೆ ಒಬ್ಬರಿಗೆ ಅವಕಾಶ ಕೊಟ್ಟರೆ,ಎರಡೂ ಕಡೆ views ಅರ್ಥವಾಗುತ್ತದೆ.

**ಸಭಾಪತಿಯವರು:–** ವಿಧೇಯಕಗಳ ಬಗ್ಗೆ ಮಾತನಾಡುವಾಗ ಹಾಗೆ ಅವಕಾಶ ಕೊಡುತ್ತಿದ್ದೆ. ನಿಯಮ 68ರ ಅಡಿಯಲ್ಲಿ ಬಂದಿರುವ ಕಾರಣಕ್ಕಾಗಿ ಅದು ವಿರೋಧ ಪಕ್ಷದವರ ಪ್ರಿವಿಲೇಜ್. ನಾನು ನಿಮಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಆದರೆ ಒಂದು ಗಂಟೆ ಅವಕಾಶಬೇಕು ಎಂದು ಹೇಳಿದ್ದಕ್ಕೆ ಎಲ್ಲರೂ ಗಾಬರಿಯಾಗಿಬಿಟ್ಟರು.

**ಶ್ರೀ ಅಶ್ವತ್ ನಾರಾಯಣ:–**ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಕೊಡಿ.

**ಸಭಾಪತಿಯವರು:–** ನಾನು ಹೆಸರುಗಳನ್ನು ಕರೆದೆ ತಯಾರು ಇಲ್ಲ ಎಂದು ಹೇಳಿದರು. I am sorry. I can't help it. ನಾನು ಮರಿತಿಬ್ಬೇಗೌಡರನ್ನು ಕರೆದಾಗ ಅವರದ್ದಾದ ಮೇಲೆ ಮಾತನಾಡುತ್ತೇನೆಂದು ಹೇಳಿದರು. ಮರಿತಿಬ್ಬೇಗೌಡರೇ, ತಾವು ಎಷ್ಟು ನಿಮಿಷ ಮಾತನಾಡುತ್ತೀರಿ?

**ಶ್ರೀ ಮರಿತಿಬ್ಬೇಗೌಡ:–**ಹತ್ತು ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು:–**ತಾವೇ ಗಡಿಯಾರ ನೋಡಿ ಮುಗಿಸಬೇಕು, ನಾನು ಮಧ್ಯೆ ಮಾತನಾಡುವುದಿಲ್ಲ. ತಾವು ಹತ್ತು ನಿಮಿಷ ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. 2012–13, 2013–2014ನೇ ಸಾಲಿನಿಂದಲೂ ಕೂಡ ಕಬ್ಬು ಸರಬರಾಜು ಮಾಡಿದಂತಹ ರೈತರಿಗೆ ಬಹುತೇಕ ಕಾರ್ಖಾನೆ ಮಾಲೀಕರು ಬಾಕಿ ಕೊಡಬೇಕೆನ್ನುವ ವಿಚಾರದ ಬಗ್ಗೆ ಗಂಭೀರ ಚರ್ಚೆಯಾಗುತ್ತಿದೆ. ಕಬ್ಬು ಬೆಳಗಾರರಿಗೆ ಬಾಕಿ ಕೊಡಬೇಕು ಎನ್ನತಕ್ಕಂಥದ್ದು ಬಹಳ ದೀರ್ಘ ಕಾಲದ ಸಮಸ್ಯೆ. ಇದು ಪ್ರತಿ ವರ್ಷವೂ ಕೂಡ ಎಲ್ಲಾ ಸರ್ಕಾರದ ಮೇಲೆ, ಎಲ್ಲರ ಮೇಲೂ ಕೂಡ ಬರುತ್ತಿರತಕ್ಕಂಥದ್ದು. ಆದರೆ ಇತ್ತೀಚೆಗೆ 2013–14ನೇ ಸಾಲಿನಲ್ಲಿ ಕಬ್ಬು ಸರಬರಾಜು ಮಾಡಿದಂತಹ ರೈತರಿಗೆ ಘನ ಸರ್ಕಾರ 2500 ರೂಪಾಯಿ ಪ್ರತಿ ಟನ್ ಕಬ್ಬಿಗೆ ಮತ್ತು 150 ರೂಪಾಯಿ ಪ್ರೋತ್ಸಾಹಧನ ನೀಡಿದಂಥದ್ದು ಆಗ ಇಡೀ ನಾಡಿನ ರೈತರು ಬಹಳ ಸಂತೋಷದಿಂದ ಸರ್ಕಾರದ ಪ್ರಕಟಣೆಯ ಬಗ್ಗೆಮೆಚ್ಚಿಗೆ ವ್ಯಕ್ತ ಮಾಡಿದರು. ಆದರೆ ಈಗ ಆ ಸಂಬಂಧ ಬಾಕಿ ಕೊಡುವಲ್ಲಿ ಸಕ್ಕರೆ ಕಾರ್ಖಾನೆ ಮಾಲೀಕರ ಜೊತೆಯಲ್ಲಿ ಸರ್ಕಾರ ಬಹಳಷ್ಟು ಪ್ರಯತ್ನಗಳನ್ನು ಮಾಡುತ್ತಿದೆ. ಮಾಧ್ಯಮಗಳಲ್ಲಿ, ಟಿವಿಗಳಲ್ಲಿ ನೋಡುತ್ತಿದ್ದೇವೆ, ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಇದೆಲ್ಲದ್ದರ ಜೊತೆಯಲ್ಲಿ ಹೊಸದಾಗಿ ಇನ್ನು ಮುಂದೆ ರೈತರಿಗೆ ಈ ಬಾಕಿ ಕೊಡತಕ್ಕಂಥ ಸಂಬಂಧ ಪೇಮೆಂಟ್ ಮಾಡತಕ್ಕಂಥದ್ದರಲ್ಲಿ ತೊಂದರೆಯಾಗಬಾರದು ಎನ್ನುವುದರ ಬಗ್ಗೆ ಒಂದು ವಿಧೇಯಕವನ್ನು ಕೂಡ ಸರ್ಕಾರ ತೆಗೆದುಕೊಂಡು ಬಂದಿದೆ. ಪ್ರತಿ ಸಾಲಿನಲ್ಲೂ ಕೂಡ ಕಬ್ಬು ಬಳೆಗಾರರ ಹಿತವನ್ನು ಬಯಸಿ ಸರ್ಕಾರಗಳು ಬಹಳಷ್ಟು ಪ್ರಯತ್ನಗಳನ್ನು ಮಾಡುತ್ತಾ ಬಂದಿದೆ. ಆದರೂ ಕೂಡ ಈಗ ಬಹಳ ಜ್ವಲಂತ ಸಮಸ್ಯೆ ಬಂದಿದೆ. ಬಹುತೇಕ ಎಲ್ಲಾ ಕಡೆ ರೈತರು ಬಾಕಿ ಕೊಡಲಿಲ್ಲವೆಂದು, ನಾವು ಬ್ಯಾಂಕ್‌ನಲ್ಲಿ ಸಾಲ ಮಾಡಿದ್ದೇವೆಂದು

ಆತ್ಮಹತ್ಯೆ ಮಾಡಿಕೊಳ್ಳುವಂಥದ್ದು, ಅದರಲ್ಲೂ ಕೂಡ ಸುವರ್ಣಸೌಧದಲ್ಲಿ ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ಇದು ಬಹಳ ಅತಿಯಾಗಿದೆ.

**ಶ್ರೀ ಬಿ.ರಾಮಕೃಷ್ಣ:–** ಮಾನ್ಯ ಸಭಾಪತಿಯವರೇ, ಇದು ರೈತರ ಆತ್ಮಹತ್ಯೆ ಅಲ್ಲ, ಇದು ರೈತರ ಕೊಲೆ. ಇದೊಂದು ತಿದ್ದುಪಡಿಯಾಗಬೇಕು. ಇದು ರೈತರ ಕಗ್ಗೊಲೆ, ಇದು ರೈತರ ಆತ್ಮಹತ್ಯೆ ಅಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ವಿನಂತಿ ಮಾಡುವುದು ಇಷ್ಟೆ, ಕೇಂದ್ರ ಸರ್ಕಾರಗಳು ಕೂಡ ಸುಮಾರು ಎರಡು ಬಾರಿ ರಾಷ್ಟ್ರದಲ್ಲಿ ನಷ್ಟದಲ್ಲಿರುವಂತಹ ಸಕ್ಕರೆ ಕಾರ್ಖಾನೆಗಳ ಮಾಲೀಕರಿಗೆ ಬಡ್ಡಿರಹಿತ ಸಾಲ ಸಾವಿರಾರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎನ್ನುವುದನ್ನು ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲೆಲ್ಲಾ ಕೇಳಿದ್ದೇವೆ.  ನಮ್ಮ ರಾಜ್ಯದಲ್ಲಿರುವಂತಹ ಸಕ್ಕರೆ ಕಾರ್ಖಾನೆಗಳು ಕೇಂದ್ರ ಸರ್ಕಾರದ ಬಡ್ಡಿ ರಹಿತ ಸಾಲಗಳನ್ನು ಪಡೆದುಕೊಂಡಿರುವಂತಹ ಯಾವ್ಯಾವು ಇವೆ ಮತ್ತು ಈಗ ರಾಜ್ಯ ಸರ್ಕಾರದ ತೀರ್ಮಾನದಂತೆ ಒಪ್ಪಿಕೊಂಡು ಈಗ ಬಾಕಿ ಕೊಡದಿರತಕ್ಕಂಥ ಕಾರ್ಖಾನೆಗಳ ಪರಿಸ್ಥಿತಿಗಳೇನಿವೆ? ನಮ್ಮ ಸಕ್ಕರೆ ಸಚಿವರು ದಿನಾ ಹೇಳುತ್ತಾರೆ, ನಾವು ಸುವರ್ಣಸೌಧದಲ್ಲಿ ವಿಧಾನಮಂಡಲದ ಅಧಿವೇಶನ ಮಾಡುತ್ತೇವೆ ಎಂದು ಹೇಳಿದಾಗ ಅವರು ಮಾಲೀಕರನ್ನು ಕರೆದು ಮಾತನಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಸುಮಾರು ಒಂದು ವರ್ಷದಿಂದ ಈ ಸಮಸ್ಯೆ ಇದೆ. ಈಗ ಚಳುವಳಿ ನಡೆಯುತ್ತಿದೆ. ಆದರೆ ಈ ಸದನ ನಡೆಯುವ ಸಂದರ್ಭದಲ್ಲಿ  ಮಾತ್ರ ಪ್ರಯತ್ನ ಮಾಡುತ್ತಾರೆ. ಇದು ರೈತರಿಗೆ ಎಲ್ಲೋ ಒಂದು ಕಡೆ ನಮ್ಮ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲವೆಂದು ಸರ್ಕಾರದ ಬಗ್ಗೆ ಅನುಮಾನ ಬಂದಿದೆ. ಈಗಾಗಲೇ ಬಹಳಷ್ಟು ಹಿರಿಯ ಸದಸ್ಯರೆಲ್ಲರೂ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಸರ್ಕಾರ ಅನ್ನಭಾಗ್ಯ, ಶಾದಿ ಭಾಗ್ಯ, ಕ್ಷೀರ ಭಾಗ್ಯ, ಈ ರೀತಿ ಬಹಳ ಭಾಗ್ಯಗಳನ್ನು ಕೊಟ್ಟಿದೆ.  ಈಗ ಕೃಷಿ ಆಯೋಗ ಮಾಡಿದ್ದೇವೆಂದು ಮಾನ್ಯ ಕೃಷ್ಣಭೈರೇಗೌಡರು ಕೃಷಿ ಆಯೋಗದ ಬಗ್ಗೆ ಬಹಳ ಹೇಳಿದರು. ಆದರೆ ಅದರಿಂದ ಯಾರಿಗೂ ಕೂಡ ಇನ್ನು ಒಂದು ಪೈಸೆಯ ಪ್ರಯೋಜನ ರೈತರಿಗೆ ಆಗುತ್ತಿಲ್ಲ. ದಯಮಾಡಿ ನಾನು ವಿನಂತಿ ಮಾಡುತ್ತೇನೆ. ಇವತ್ತು ಈ ಬೆಳೆಗೆ ರೈತರಿಗೆ 12 ತಿಂಗಳು ಬಡ್ಡಿರಹಿತ ಸಾಲ ಕೊಡುತ್ತಾರೆ. 12 ತಿಂಗಳು ಮುಗಿದ ಮೇಲೆ ನಂತರ ದಿನದಿಂದಲೇ ಅವರು 13 ಪರ್ಸೆಂಟ್ ಬಡ್ಡಿಯನ್ನು ಕೊಡಬೇಕು. ದಯಮಾಡಿ ನಮ್ಮ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರತಕ್ಕಂಥ ಸಹಕಾರ ಬ್ಯಾಂಕ್, ಡಿ.ಸಿ.ಸಿ. ಬ್ಯಾಂಕ್, ಅಪೆಕ್ಸ್ ಬ್ಯಾಂಕ್ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳಿರಬಹುದು, ಇವುಗಳ ಮೂಲಕ ಯಾವ್ಯಾವ ಕಬ್ಬು ಬೆಳಗಾರರಿಗೆ ಸಾಲ ಕೊಟ್ಟಿದ್ದಾರೆ ಅವರು ಯಾರು ಕಟ್ಟದೆ ಇರತಕ್ಕಂಥವರು ಇದ್ದಾರೆ ಅವರಿಗೂ ಬಡ್ಡಿರಹಿತ ಸಾಲವನ್ನು  ಮತ್ತೆ renewal ಮಾಡತಕ್ಕಂಥ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳಬೇಕು.

(ಮುಂದು)

**ಶ್ರೀ ಮರಿತಿಬ್ಬೆಗೌಡ(ಮುಂದು. . )**

ಕಬ್ಬು ಬೆಳೆಗಾರರಿಗೆ ಏನು ಸಾಲವನ್ನು ಕೊಟ್ಟಿದ್ದಾರೆ, ಅಂದರೆ ಯಾರು ಸಾಲವನ್ನು ಕಟ್ಟದೇ ಇರುವಂತಹವರಿಗೆ ಬಡ್ಡಿ ರಹಿತ  ಮತ್ತೆ ಅ ಸಾಲವನ್ನು renewal ಮಾಡುವಂತಹ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳಬೇಕು.  ಹೌದು, ನೀವು 3 ಲಕ್ಷ ರೂಪಾಯಿಗಳನ್ನು ಬಡ್ಡಿರಹಿತ ಸಾಲವನ್ನು ಕೊಟ್ಟಿದ್ದೀರಿ. ಆದರೆ, 12 ತಿಂಗಳ ನಂತರ,  ಒಂದು ವರ್ಷವಾದ ಮರುದಿನವೇ 13% ಬಡ್ಡಿಯನ್ನು ರೈತರು ಕೊಡಬೇಕಾಗಿದೆ. ಅದನ್ನಾದರೂ ತಪ್ಪಿಸಲಿಕ್ಕೆ ತತ್‌ಕ್ಷಣ ಸರ್ಕಾರ ಆ ರೀತಿಯಲ್ಲಿ ಯಾರು ಸಾಲ ಪಡೆದಿದ್ದಾರೆ, ಈಗ ಯಾರಿಗೆ ಕಬ್ಬಿನ ಹಣ ಬಾಕಿ ಇದೆ, ಅಂತಹ ರೈತರಿಗಾದರೂ 13% ಬಡ್ಡಿ ತೆಗೆದುಕೊಳ್ಳದೆ,  ಮತ್ತೆ renewal ಮಾಡುವಂತಹ ವ್ಯವಸ್ಥೆಯನ್ನಾದರೂ ಮಾಡಬೇಕು. ಎಲ್ಲಾಜನರ ಹಿತಕ್ಕಾಗಿ ಹಲವಾರು ಯೋಜನೆಗಳನ್ನು

ಮಾಡುತ್ತಿದ್ದು, ಇವುಗಳಿಗೋಸ್ಕರ ಸಾವಿರಾರೂಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆಂದುಹೇಳುತ್ತಿರುವ ಸರ್ಕಾರಈಗ ಕೇವಲ 900 ಕೋಟಿ ರೂಪಾಯಿಗಳನ್ನು ದಯಮಾಡಿಕೊಡಬೇಕು. ಈಗ ಕಾರ್ಖಾನೆಗಳಿಗೆ ಬೀಗ ಹಾಕಿದ್ದೇವೆ, ಸಕ್ಕರೆಯನ್ನುದಾಸ್ತಾನು ಮಾಡಿದ್ದೇವೆಂದು ಏನು ಹೇಳುತ್ತಿದ್ದೀರಿ, ಅದನ್ನು ನಿಮಗೆ ಅನುಕೂಲವಾದಾಗ ಮಾರಾಟ ಮಾಡಿ, ಅ ಹಣವನ್ನುತಮ್ಮ ಬೊಕ್ಕಸಕ್ಕೆ ತುಂಬಿಕೊಳ್ಳಿ.ತಕ್ಷಣ 900 ಕೋಟಿ ರೂಪಾಯಿಗಳನ್ನು ರೈತರಿಗೆಕೊಟ್ಟು ಬಿಡಿ. ರೈತರುಆತ್ಮಹತ್ಯೆ ಮಾಡಿಕೊಳ್ಳುವುದು ಬೇಡ, ಮತ್ತೊಂದು ಮಾಡಿಕೊಳ್ಳುವುದು ಬೇಡ. ನೀವು ತಕ್ಷಣ ಹಣವನ್ನುಕೊಡುವುದರಿಂದ ಈ ಸಮಸ್ಯೆ ನಿವಾರಣೆಯಾಗಿ ನಿಮ್ಮ ಸರ್ಕಾರಕ್ಕೆದೊಡ್ಡ ಹೆಸರು ಬರುತ್ತದೆ.ಎಲ್ಲಾರೈತರು ಖುಷಿ ಪಡುತ್ತಾರೆ. ಇಲ್ಲದಿದ್ದರೆ, ಎಲ್ಲೋಒಂದುಕಡೆ ಸರ್ಕಾರಕಾರ್ಖಾನೆಯ ಮಾಲೀಕರೊಂದಿಗೆ ಶಾಮೀಲಾಗಿ ಈ ರೀತಿಯಲ್ಲಿ ಮಾಡುತ್ತಿದ್ದಾರೆನ್ನುವಅನುಮಾನ ನಿಮ್ಮ ಮೇಲೆಯೂಕೂಡ ಸಾರ್ವತ್ರಿಕವಾಗಿಇದೆ. ಈ ಅನುಮಾನಕ್ಕೆ ನೀವು ಏತಕ್ಕೆ ಒಳಗಾಗುತ್ತೀರಿ? ಪ್ರಮಾಣಿಕ ಪ್ರಯತ್ನವನ್ನು ನೀವು ಮಾಡುತ್ತಿದ್ದೀರಿ.ಆದರೆ, ಅ ನಿಟ್ಟಿನಲ್ಲಿ ಕೆಲಸವಾಗುತ್ತಿಲ್ಲ. ನೀವು ಸರ್ಕಾರದಲ್ಲಿಇಷ್ಟೆಲ್ಲಾ ಪ್ರಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೀರಿ, ಅದರೆ, ರೈತರನ್ನು ಈ ಸಂಕಷ್ಟ ಪರಿಸ್ಥಿತಿಯಲ್ಲಿ ಕೊಡಬೇಕಾದ ಬಾಕಿಯನ್ನುಕೊಡಲಿಕ್ಕೆ ನಾವು ಬದ್ಧರಾಗಿದ್ದು, ಕೊಡಿಸುತ್ತೇವೆ, ಕೊಡಿಸುತ್ತೇವೆಎನ್ನುವ ಮಾತನ್ನು ಮಾತ್ರ ನೀವು ಹೇಳುತ್ತಿದ್ದೀರಿ. ಆ ರೀತಿಯಲ್ಲಿ ಬದ್ಧತೆಇದ್ದ ಮೇಲೆ ದಯಮಾಡಿ 900 ಕೋಟಿ ರೂಪಾಯಿಗಳನ್ನು ತಾವೇಕೊಟ್ಟುಬಿಡಿ. ಇಲ್ಲವೆಂದರೆ ನಾವು ಕೊಡಿಸಲಿಕ್ಕೆ ಅಗುವುದಿಲ್ಲ, ಈ ಕಾರ್ಖಾನೆ ಮಾಲೀಕರಿಂದ, ನಮ್ಮಸರ್ಕಾರದಿಂದ ಈ ಸಮಸ್ಯೆಗೆ ಪರಿಹಾರ ಖಂಡಿತವಾಗಿಯೂ ಸಿಗುವುದಿಲ್ಲವೆಂದು ರೈತರಿಗೆ ಹೇಳಿ. ಸುಮ್ಮನೆ, ನಾವು ಹಣವನ್ನುಕೊಡಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆಎನ್ನುವುದು ಬೇಡ. ಅಲ್ಲಲ್ಲಿರೈತರುಅತ್ಮಹತ್ಯೆ ಮಾಡಿಕೊಂಡುಸಾಯುತ್ತಿರುವುದು, ಜೊತೆಗೆಅಲ್ಲಲ್ಲಿ ಚಳುವಳಿಯನ್ನು ಮಾಡುತ್ತಿರುವುದು.ಇದಕ್ಕೆ ಅವಕಾಶ ಕೊಡಬೇಡಿ. ಇದರಿಂದ ಖಂಡಿತವಾಗಿಯೂ ಸಹ ಯಾರಿಗೂ ಸಹ ಒಳ್ಳೆಯದಾಗುವುದಿಲ್ಲ. ಇದು ಸರ್ಕಾರಕ್ಕೆ ಶೋಭೆ ತರುವಂತಹ ವಿಚಾರವಲ್ಲ. ಈ ಬಾಕಿ ಹಣವನ್ನು ಕೊಡಿಸುವಂತಹ ಜವಾಬ್ದಾರಿ ಈ ಸರ್ಕಾರದ ಮೇಲೆ ಇದೆ. ಆದ್ದರಿಂದ, ತಕ್ಷಣ, ಈ ಬಾಕಿ ಹಣವನ್ನು ಸರ್ಕಾರರೈತರಿಗೆ ಪಾವತಿಸಬೇಕು. ಮತ್ತೆ, ಯಾವರೈತರು ಸಾಲವನ್ನು ತೆಗೆದುಕೊಂಡು renewal ಮಾಡಿಸಲಿಕ್ಕೆ ಆಗಿರುವುದಿಲ್ಲ, ಅವರು 13% ಬಡ್ಡಿಯನ್ನು ಕಟ್ಟಬೇಕಾದಂತಹ ಪರಿಸ್ಥಿತಿ ಬಂದಿದೆ ಅವರೆಲ್ಲರಿಗೂ ಕೂಡ ಎಲ್ಲಾ ಸಹಕಾರಿ ಬ್ಯಾಂಕುಗಳಲ್ಲಿ renewal ಮಾಡುವಂತಹದ್ದಕ್ಕೆ ಸರ್ಕಾರ ಕೂಡಲೇ ಘೋಷಣೆ ಮಾಡಬೇಕು. ಜೊತೆಗೆ ತಕ್ಷಣ ಬಾಕಿಯಿರುವ 900 ಕೋಟಿ ರೂಪಾಯಿಗಳನ್ನು ಸರ್ಕಾರ ರೈತರಿಗೆ ಪಾವತಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಸಭಾಪತಿಯವರು:– ಒಂದು ವಿಚಾರವನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಇವತ್ತು ವಿಶೇಷ ಕಾರಣಗಳಿಗೋಸ್ಕರ ಬೆಳಿಗ್ಗೆ ಪ್ರಶ್ನೋತ್ತರವನ್ನು ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ. ಇನ್ನು ಮುಂದೆ ಈ ರೀತಿ ಆಗುವುದಿಲ್ಲವೆಂದು ಹೇಳಿದ್ದೇನೆ. ಆದರೆ, ಇವತ್ತು ಪಟ್ಟಿಯಾಗಿದ್ದಂತಹ ಪ್ರಶ್ನೆಗಳನ್ನು ಮುಂದಿನ ಸೋಮವಾರ ತಡೆ ಹಿಡಿಯಲಾದ ಪ್ರಶ್ನೆಗಳು ಎನ್ನುವ ರೀತಿಯಲ್ಲಿ ತೆಗೆದುಕೊಳ್ಳುತ್ತೇವೆ. ಅಂದಿನ ಪಟ್ಟಿಯಜೊತೆಗೆ ಈ ಪ್ರಶ್ನೆಗಳನ್ನು ಸೋಮವಾರ ತೆಗೆದುಕೊಳ್ಳುತ್ತೇನೆ. ಸಭೆಯನ್ನು ನಾಳೆ ಬೆಳಿಗ್ಗೆ 11–00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 5 ಗಂಟೆ 33 ನಿಮಿಷಕ್ಕೆ ಮುಕ್ತಾಯವಾಗಿ ನಾಳೆ ಮಂಗಳವಾರ 30.06.2015ರ ಬೆಳಿಗ್ಗೆ 11–00 ಗಂಟೆಗೆ ಸೇರಲು ತೀರ್ಮಾನಿಸಿತು)**